ಸೋಮವಾರ, ಫೆಬ್ರುವರಿ 13, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ
ಹರಿಯಾಣದ ಫರೀದಾಬಾದ್‌ನಲ್ಲಿ ನಡೆದ ಕರಕುಶಲ ಮೇಳದಲ್ಲಿ ಕಲಾವಿದೆಯರು ನೃತ್ಯ ಪ್ರದರ್ಶಿಸಿದರು




ಭಾರತ ಸರ್ಕಾರ
ನವ ಭಾರತಕ್ಕಾಗಿ ನವ ಕರ್ನಾಟಕ



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು





ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಸನ್ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವದಲ್ಲಿ ಏರೋಸ್ಪೇಸ್ ಹಾಗೂ ರಕ್ಷಣಾ ಉತ್ಪಾದನೆಯಲ್ಲಿ ಕರ್ನಾಟಕದ ಸಾಮರ್ಥ್ಯ ಹೆಚ್ಚಳ

ಏರೋ ಇಂಡಿಯಾ 2023

ಕೋಟ್ಯಂತರ ಅವಕಾಶಗಳ ರನ್‌ವೇ

ಭಾರತದ ಏರೋಸ್ಪೇಸ್ ಹಾಗೂ ರಕ್ಷಣಾ ಕ್ಷೇತ್ರಗಳ ಬೆಳವಣಿಗೆಯ ಶಕ್ತಿಪ್ರದರ್ಶನ

2023 - ಭಾರತದ ಜಿ20 ಅಧ್ಯಕ್ಷತೆಯ ವರ್ಷ
(ಡಿಸೆಂಬರ್ 1, 2022 - ನವೆಂಬರ್ 30, 2023)

ಏರೋ ಇಂಡಿಯಾ 2023 – 14ನೇ ಏರೋ ಶೋ

13–17 ಫೆಬ್ರವರಿ 2023
ಏರ್ ಫೋರ್ಸ್ ಸ್ಟೇಷನ್, ಯಲಹಂಕ, ಬೆಂಗಳೂರು
ಹಾಲ್ 'ಇ'ನಲ್ಲಿ ಕರ್ನಾಟಕ ಸರ್ಕಾರದ ಪೆವಿಲಿಯನ್‌ಗೆ ಭೇಟಿ ನೀಡಿ

2023 AERO INDIA

ಅತಿದೊಡ್ಡ ಏರೋ ಇಂಡಿಯಾ

	ಏರೋ ಇಂಡಿಯಾ–21	ಏರೋ ಇಂಡಿಯಾ–23
ವಸ್ತುಪ್ರದರ್ಶನ ವಿಸ್ತೀರ್ಣ	23,000 ಚ.ಮೀ	**35,000 ಚ.ಮೀ**
ಪ್ರದರ್ಶಕರ ಸಂಖ್ಯೆ	600	**809**
ವಿದೇಶೀ ರಾಷ್ಟ್ರಗಳು	55	**98**

ಕರ್ನಾಟಕ – ಭಾರತದ ಏರೋಸ್ಪೇಸ್ ಉದ್ಯಮದ ಮುಂಚೂಣಿಯಲ್ಲಿ

- 2022–27ರ ಏರೋಸ್ಪೇಸ್ ಹಾಗೂ ರಕ್ಷಣಾ ನೀತಿಗಳೊಂದಿಗೆ ಆಕರ್ಷಕ ಉತ್ತೇಜನಗಳು
- ವಿದೇಶಿ ನೇರ ಹೂಡಿಕೆ ಆಕರ್ಷಣೆಯಲ್ಲಿ ಅಗ್ರ ಸ್ಥಾನದಲ್ಲಿರುವ ವಿಶ್ವದ ಮೂರು ಏರೋಸ್ಪೇಸ್ ಕೇಂದ್ರಗಳಲ್ಲಿ ಬೆಂಗಳೂರು ಸಹ ಒಂದು.
- ಕರ್ನಾಟಕದಲ್ಲಿ ಭಾರತದ ಶೇ.67ರಷ್ಟು ರಕ್ಷಣಾ ವಿಮಾನಗಳು ಹಾಗೂ ಹೆಲಿಕಾಪ್ಟರ್‌ಗಳ ಉತ್ಪಾದನೆ
- ಭಾರತದ ಒಟ್ಟು ಏರೋಸ್ಪೇಸ್ ಹಾಗೂ ರಕ್ಷಣಾ ರಫ್ತಿನಲ್ಲಿ ಕರ್ನಾಟಕದ ಕೊಡುಗೆ ಶೇ.65
- ಭಾರತದ ವಿಮಾನ ಹಾಗೂ ಬಾಹ್ಯಾಕಾಶ ನೌಕೆಗಳ ಒಟ್ಟು ಉದ್ಯಮದ ಪೈಕಿ ನಾಲ್ಕನೇ ಒಂದು ಭಾಗ ಕರ್ನಾಟಕದಲ್ಲಿದೆ.



ಹೆಚ್‌ಎಎಲ್‌ನ ಎಲ್‌ಸಿಎ–ತೇಜಸ್ ವಿಮಾನ

- ಸಂಪೂರ್ಣ ಕಾರ್ಯಾಚರಣಾ ಸಾಮರ್ಥ್ಯ (ಎಫ್‌ಒಸಿ) ಸಂರಚನೆಯಲ್ಲಿ ಎಲ್‌ಸಿಎ–ತೇಜಸ್ ವಿಮಾನ–ಇಂಡಿಯಾ ಪೆವಿಲಿಯನ್ 2023ರ ಕೇಂದ್ರಬಿಂದು
- ಫಿಕ್ಸ್‌ಡ ವಿಂಗ್ ಕ್ಷೇತ್ರದಲ್ಲಿ ಭಾರತದ ಬೆಳವಣಿಗೆಯನ್ನು ಪ್ರದರ್ಶಿಸಲು ಫಿಕ್ಸ್‌ಡ ವಿಂಗ್ ಪ್ಲಾಟ್‌ಫಾರಂ ವಿಷಯಧಾರಿತ ವಿಶೇಷ ಭಾರತೀಯ ಪೆವಿಲಿಯನ್



ಪ್ರಮುಖ ವೈಶಿಷ್ಟ್ಯತೆಗಳು

- ತನ್ನ ವರ್ಗದಲ್ಲಿ ಅತ್ಯಂತ ಸಣ್ಣ ಹಾಗೂ ಹಗುರವಾದ ವಿಮಾನ
- ಉತ್ಕೃಷ್ಟ ಹಾರಾಟ ಸುರಕ್ಷತಾ ದಾಖಲೆ
- ನಾಲ್ಕು ರೂಪಾಂತರಗಳಲ್ಲಿ ಲಭ್ಯ
- ಕನಿಷ್ಠ ರಾಡಾರ್ ಕ್ರಾಸ್–ಸೆಕ್ಷನ್(ಆರ್‌ಸಿಎಸ್)ನೊಂದಿಗೆ ಎಲ್ಲಾ ಎತ್ತರಗಳಲ್ಲಿಯೂ ಶಬ್ದಾತೀತ
- ಮುಕ್ತ ವಿನ್ಯಾಸದೊಂದಿಗೆ ಕಸ್ಟಮೈಸ್ಡ್ ಶಸ್ತ್ರಾಸ್ತ್ರ ಏಕೀಕರಣ
- ಕಡಿಮೆ ಕಾರ್ಯಾಚರಣಾ ವೆಚ್ಚಗಳೊಂದಿಗೆ ನಿರ್ವಹಣೆ–ಸ್ನೇಹಿ

ಕರ್ನಾಟಕ – ಹೂಡಿಕೆಯ ಪ್ರಮುಖ ತಾಣ

- ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆ ಸಭೆಯಲ್ಲಿ ರೂ.52,000 ಕೋಟಿ ಮೊತ್ತದ ಒಪ್ಪಂದಗಳಿಗೆ ಸಹಿ
- ನವೆಂಬರ್ 2022ರಲ್ಲಿ ರಾಜ್ಯದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ರೂ.9.8 ಲಕ್ಷ ಕೋಟಿ ಮೊತ್ತದ ಒಪ್ಪಂದಗಳಿಗೆ ಕರ್ನಾಟಕ ಸರ್ಕಾರದ ಸಹಿ. ಈ ಒಪ್ಪಂದಗಳು 6 ಲಕ್ಷ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿದೆ. ಈ ಪೈಕಿ ಶೇ.90ರಷ್ಟು ಹೂಡಿಕೆಗಳನ್ನು ಬೆಂಗಳೂರಿನ ಹೊರಗಿನ ಸ್ಥಳಗಳಲ್ಲಿ ಮಾಡಲಾಗುತ್ತಿದೆ.
- ಜಿಎಸ್‌ಟಿ ಸಂಗ್ರಹಣೆಯಲ್ಲಿ ದೇಶದಲ್ಲಿಯೇ ಅತಿ ಹೆಚ್ಚಿನ ಬೆಳವಣಿಗೆ ದರ
- ನೀತಿ ಆಯೋಗದ ನಾವೀನ್ಯ ಸೂಚ್ಯಂಕದಲ್ಲಿ ಸತತವಾಗಿ ಮೂರು ಬಾರಿ ಕರ್ನಾಟಕಕ್ಕೆ ಅಗ್ರ ಸ್ಥಾನ
- 2020ರಲ್ಲಿ ಡಿಪಿಐಐಟಿಯ ಈಸ್–ಆಫ್–ಡೂಯಿಂಗ್ ಬ್ಯುಸಿನೆಸ್‌ನಲ್ಲಿ ನಂ. 1 ಪಟ್ಟ
- 17ನೇ ಸ್ಥಾನದಿಂದ 'ಅತ್ಯುತ್ತಮ ಸಾಧಕ' ಸ್ಥಾನಕ್ಕೆ ಏರಿಕೆ

ಕೈಗಾರಿಕಾ ನೀತಿ 2020–2025

- ವಿವಿಧ ವಲಯಗಳಲ್ಲಿ ಟರ್ನ್‌ಓವರ್–ಆಧಾರಿತ ಪ್ರೋತ್ಸಾಹ (ಪಿಎಲ್‌ಐ ಯೋಜನೆ)
- ನಿರ್ದಿಷ್ಟವಾದ ವಲಯಗಳನ್ನು ಪ್ರೋತ್ಸಾಹಿಸಲು ಕ್ಲಸ್ಟರ್–ಆಧಾರಿತ ಉದ್ಯಮಗಳಿಗೆ ಉತ್ತೇಜನ
- ಸಮಗ್ರ ಕೈಗಾರಿಕಾ ಅಭಿವೃದ್ಧಿಗಾಗಿ 'ಬಿಯಾಂಡ್ ಬೆಂಗಳೂರು' ಯೋಜನೆ
- ಒಂದು ಜಿಲ್ಲೆ–ಒಂದು ಉತ್ಪನ್ನ: 'ಆತ್ಮ ನಿರ್ಭರ ಭಾರತ' ಯೋಜನೆಯಡಿ 2 ಹಾಗೂ 3ನೇ ಶ್ರೇಣಿ ನಗರಗಳಲ್ಲಿ ಉದ್ಯಮಗಳಿಗೆ ಒತ್ತು

ಹೂಡಿಕೆಗೆ ಕರ್ನಾಟಕ ಏಕೆ ಉತ್ತಮ ರಾಜ್ಯ?

- ಕೈಗಾರಿಕಾ–ಸ್ನೇಹಿ ನೀತಿಗಳು
- ದಕ್ಷ ಲಾಜಿಸ್ಟಿಕ್ ನೆಟ್‌ವರ್ಕ್‌ನೊಂದಿಗೆ ಭೂಮಿಯ ಲಭ್ಯತೆ
- ಸುಲಲಿತ ವ್ಯವಹಾರ (ಈಸ್ ಆಫ್ ಡೂಯಿಂಗ್ ಬಿಸಿನೆಸ್)
- ಹೆಚ್ಚು ಕೌಶಲ್ಯವುಳ್ಳ ಹಾಗೂ ತರಬೇತಿ ಹೊಂದಿರುವ ಮಾನವ ಸಂಪನ್ಮೂಲ
- ಉತ್ತಮ ಮೂಲಭೂತ ಸೌಕರ್ಯ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಉಡುಪಿ: ಪ್ರಥಮ ಸಮಗ್ರ ಯಕ್ಷಗಾನ ಸಮ್ಮೇಳನ ಸಮಾರೋಪದಲ್ಲಿ ಒಕ್ಕೊರಲ ಕೂಗು

‘ಯಕ್ಷಗಾನ ಪ್ರಾತಿನಿಧಿಕ ಕಲೆ ಆಗಲಿ’

ಪ್ರಜಾವಾಣಿ ವಾರ್ತೆ

ಉಡುಪಿ: ಕನ್ನಡ ಭಾಷೆಯ ಉಳಿವು ಹಾಗೂ ಬೆಳವಣಿಗೆಗೆ ಕಾರಣವಾಗಿರುವ ಯಕ್ಷಗಾನಕ್ಕೆ ‘ಕನ್ನಡ ನಾಡಿನ ಪ್ರಾತಿನಿಧಿಕ ಕಲೆ’ ಎಂಬ ಅಧಿಕೃತ ಮಾನ್ಯತೆಯನ್ನು ಸರ್ಕಾರ ನೀಡಬೇಕು ಎಂಬ ಒಕ್ಕೊರಲ ಆಗ್ರಹ ವ್ಯಕ್ತವಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಯಕ್ಷಗಾನ ಅಕಾಡೆಮಿ ಹಾಗೂ ಉಡುಪಿ ಜಿಲ್ಲಾಡಳಿತದ ಆಶ್ರಯದಲ್ಲಿ ಇಲ್ಲಿ ಭಾನುವಾರ ಸಂಪನ್ನಗೊಂಡ ಎರಡು ದಿನಗಳ ‘ರಾಜ್ಯಮಟ್ಟದ ಮೊದಲ ಸಮಗ್ರ ಯಕ್ಷಗಾನ ಸಮ್ಮೇಳನ 2023’ ಯಕ್ಷಗಾನವನ್ನು ಮತ್ತಷ್ಟು ಎತ್ತರದ ಸ್ತರಕ್ಕೆ ಕೊಂಡೊಯ್ಯುವುದಕ್ಕೆ ಆಗಬೇಕಾದ ಪರಿಷ್ಕರಣೆಗಳ ಕುರಿತ ಪಾಂಡಿತ್ಯ ಪೂರ್ಣ ಚರ್ಚೆಗೆ ವೇದಿಕೆ ಕಲ್ಪಿಸಿತು. ಯಕ್ಷಗಾನಕ್ಕೆ ವಿಶ್ವಮನ್ನಣೆ ಗಳಿಸುವ ಹಾದಿಗೆ ಈ ಸಮ್ಮೇಳನ ದೀವಿಗೆಯಂತೆ ಮೂಡಿಬಂತು.

‘ಯಕ್ಷಗಾನ ಪ್ರಸಾರ ಮತ್ತು ಪ್ರಯೋಗ’ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ‘ಪ್ರಜಾವಾಣಿ’ ಕಾರ್ಯ-ನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು, ‘ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕಕ್ಕೆ ಒಗ್ಗಬಹುದಾದ ಭಾಷೆಯನ್ನು ಯಕ್ಷಗಾನಕ್ಕೆ ಕೊಡಬೇಕು. ಯಕ್ಷಗಾನದ ಎಲ್ಲ ಕಲಾವಿದರಿಗೂ ಸ್ಟ್ಯಾಂಡ್‌ಅಪ್ ಕಾಮಿಡಿಯನ್ ಆಗುವ ಅರ್ಹತೆ ಇದ್ದು, ಅವರು ಬದಲಾವಣೆಗೆ ಒಗ್ಗಿಕೊಳ್ಳಬೇಕು. 5 ಸಾವಿರದಷ್ಟು ಇರುವ ಯಕ್ಷಗಾನ ಕಲಾವಿದರು ವಿದ್ವಾಂಸರನ್ನು ಮುಂದಿಟ್ಟುಕೊಂಡು ಯಕ್ಷಗಾನ ಅಶ್ವಮೇಧ ಯಾಗ ಆರಂಭಿಸಿದರೆ ಇದು ನಾಡಕಲೆಯಾಗುವಲ್ಲಿ ಅನುಮಾನವೇ ಇಲ್ಲ’ ಎಂದರು.

ಅಮೆರಿಕದ ನಿವಾಸಿ ಪಿ.ವಾಸುದೇವ ಐತಾಳ ಅವರು, ‘ಸಂಕುಚಿತ ಮನೋಭಾವ ತೊರೆದು ಯಕ್ಷಗಾನ ಪ್ರದರ್ಶನ ಮಾಡಿದರೆ ಇದು ‘ವಿಶ್ವಗಾನ’ ಆಗುವ ಅವಕಾಶ ಇದೆ. ಕಲಾವಿದರು ಮಾತಿನ ಮೂಲಕ ಅಷ್ಟೇ ಅಲ್ಲ; ಆಂಗಿಕ ಅಭಿನಯದ ಮೂಲಕ ಪ್ರೇಕ್ಷಕರ ಮನ ತಟ್ಟುವ ಕೆಲಸ ಮಾಡಿದರೆ ಭಾಷೆಯ ತೊಡಕು ಉದ್ಭವಿಸದು’ ಎಂದು ಕಿವಿಮಾತು ಹೇಳಿದರು.

‘ಯಕ್ಷಗಾನದಲ್ಲಿ ಮಹಿಳೆಯರು ಹೆಸರು ಮಾಡುತ್ತಿದ್ದರೂ, ಪೂರ್ಣ ಪ್ರಮಾಣದಲ್ಲಿ ಮಹಿಳಾ ತಂಡಗಳು ಇಲ್ಲ. ಮುಮ್ಮೇಳದ ಜೊತೆಗೆ ಹಿಮ್ಮೇಳಕ್ಕೂ ಮಹಿಳೆಯರು ಅಣಿಯಾಗಬೇಕು. ಸ್ವರದ ಗೊಂದಲ ನಿವಾರಣೆ ಆಗಬೇಕಾದರೆ ಮಹಿಳಾ ಭಾಗವತರು ಸಿದ್ಧರಾಗಬೇಕು. ಚಂಡೆ– ಮದ್ದಳೆಯನ್ನು ಅವರೇ ನಿರ್ವಹಿಸಬೇಕು. ಮಹಿಳಾ ದೇಹಕ್ಕೆ ತಕ್ಕಂತೆ ವೇಷ–ಭೂಷಣಗಳೂ ಬದಲಾಗಬೇಕು’ ಎಂಬ ಆಶಯ ಡಾ.ವಿಜಯ ನಳಿನಿ ರಮೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ‘ಮಹಿಳಾ ಯಕ್ಷಗಾನ ಚಿಂತನೆ’ ಗೋಷ್ಠಿಯಲ್ಲಿ ಹೊರಹೊಮ್ಮಿತು.

75 ಮಂದಿಗೆ ಸನ್ಮಾನ: ಯಕ್ಷಗಾನದ ಏಳಿಗೆಗೆ ರಂಗದಲ್ಲಿ, ನೇಪಥ್ಯದಲ್ಲಿ ದುಡಿದ ವ್ಯಕ್ತಿಗಳು ಹಾಗೂ ಸಂಘ ಸಂಸ್ಥೆಗಳ ಪ್ರತಿನಿಧಿಗಳೂ ಸೇರಿದಂತೆ 75 ಮಂದಿಯನ್ನು ಸನ್ಮಾನಿಸಲಾಯಿತು.



ಉಡುಪಿಯಲ್ಲಿ ನಡೆದ ರಾಜ್ಯ ಮಟ್ಟದ ಸಮಗ್ರ ಯಕ್ಷಗಾನ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಮ್ಮೇಳನದ ಸರ್ವಾಧ್ಯಕ್ಷ ಡಾ.ಎಂ.ಪ್ರಭಾಕರ ಜೋಶಿ ಮತ್ತು ಅವರ ಪತ್ನಿ ಸುಚೇತಾ ಅವರನ್ನು ಸನ್ಮಾನಿಸಲಾಯಿತು. ಡಾ.ಎಂ.ಮೋಹನ್ ಆಳ್ವ, ಸಚಿವ ಸುನಿಲ್ ಕುಮಾರ್, ಶಾಸಕ ರಘುಪತಿ ಭಟ್, ಕಾಸರಗೋಡು ಎಡನೀರು ಮಠದ ಸಚ್ಚಿದಾನಂದ ಭಾರತೀ ಸ್ವಾಮೀಜಿ, ಡಾ.ಜಿ.ಎಲ್. ಹೆಗಡೆ (ಕುಮಟ) ಇದ್ದರು – ಪ್ರಜಾವಾಣಿ ಚಿತ್ರ

ದ.ಕನ್ನಡದಲ್ಲಿ ಮುಂದಿನ ಸಮ್ಮೇಳನ

ಮುಂದಿನ ರಾಜ್ಯಮಟ್ಟದ ಸಮಗ್ರ ಯಕ್ಷಗಾನ ಸಮ್ಮೇಳನವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಸುವ ನಿರ್ಣಯವನ್ನು ಉಡುಪಿಯ ಎಂಜಿಎಂ ಕಾಲೇಜು ಮೈದಾನದಲ್ಲಿ ನಡೆದ ಸಮಾರೋಪದಲ್ಲಿ ತೆಗೆದುಕೊಳ್ಳಲಾಯಿತು.

ಕಲಾವಿದರ ಸಬಲೀಕರಣದ ಮೂಲಕ ಯಕ್ಷಗಾನದ ಸಬಲೀಕರಣ ಆಗಬೇಕು. ಖಚಿತವಾದ ಕಲಾ ನೀತಿ ರೂಪಿಸಬೇಕು. ಈ ಕಲೆಯ ಕುರಿತು ಇನ್ನಷ್ಟು ಅಧ್ಯಯನ–ಸಂಶೋಧನೆಗಳು ನಡೆಯಬೇಕು

ಡಾ.ಎಂ.ಪ್ರಭಾಕರ ಜೋಶಿ, ಸಮ್ಮೇಳನದ ಅಧ್ಯಕ್ಷ

ನಿರ್ಣಯಗಳು

- ಯಕ್ಷಗಾನ ಸಮ್ಮೇಳನದಲ್ಲಿ ಮಂಡಿಸಿದ ನಿರ್ಣಯ, ಸಮ್ಮೇಳನಾಧ್ಯಕ್ಷರು ಸೂಚಿಸಿರುವ ಯಕ್ಷಗಾನ ಸಂಬಂಧಿ ಪ್ರಸ್ತಾವಗಳನ್ನು ಸರ್ಕಾರ ಕಾಲಮಿತಿಯಲ್ಲಿ ಜಾರಿಗೊಳಿಸಬೇಕು.
- ಸಾಂಸ್ಕೃತಿಕವಾಗಿ ಕರ್ನಾಟಕದ ಭಾಗವೇ ಆಗಿರುವ ಕಾಸರಗೋಡನ್ನು ಸರ್ಕಾರದ ಸಾಂಸ್ಕೃತಿಕ ನೀತಿಯಲ್ಲಿ ವಿಶೇಷವಾಗಿ ಪರಿಗಣಿಸಬೇಕು.
- ಕರ್ನಾಟಕ ಸರ್ಕಾರದ ವಿವಿಧ ಪ್ರಶಸ್ತಿ, ಸಾಂಸ್ಕೃತಿಕ ಉತ್ಸವ, ಮನ್ನಣೆ, ವಿವಿಧ ಸಮಿತಿಗಳ, ಅಕಾಡೆಮಿಗಳ ಸದಸ್ಯತ್ವಗಳಲ್ಲಿ ಕಾಸರಗೋಡಿಗೆ ಸೂಕ್ತ ಪ್ರಾತಿನಿಧ್ಯ ಸಿಗಬೇಕು.
- ಸಮಗ್ರ ಕರ್ನಾಟಕದ ಯಕ್ಷಗಾನ ಮತ್ತು ಇತರ ಸಾಂಪ್ರದಾಯಿಕ ಬಯಲಾಟಗಳ ವೃತ್ತಿನಿರತ ಕಲಾವಿದರು, ರಂಗಕರ್ಮಿಗಳು ಮತ್ತು ರಂಗ ಸಹಾಯಕರಿಗೆ ಕಲ್ಯಾಣ ಕಾರ್ಯಕ್ರಮ ಯೋಜನೆ ಜಾರಿಗೊಳಿಸಿ ಸಹಾಯಧನ, ಕ್ಷೇಮನಿಧಿ, ನಿವೃತ್ತಿ ಮಾಸಾಶನ, ಆರೋಗ್ಯ ವಿಮೆ ಕೊಡಬೇಕು.
- ಸಮಗ್ರ ಯಕ್ಷಗಾನ ಸಮ್ಮೇಳನ ಪ್ರತಿ ವರ್ಷ ನಡೆಸಬೇಕು ಮತ್ತು ಆರು ತಿಂಗಳ ಮೊದಲೇ ದಿನಾಂಕ ನಿಗದಿ ಮಾಡಬೇಕು
- ಕಲಾವಿದರ ಗೌರವ ಮಾಸಾಶನವನ್ನು ಐದು ಸಾವಿರಕ್ಕೆ ಏರಿಸಬೇಕು.
- ಯಕ್ಷ ರಂಗಾಯಣವನ್ನು ಯಕ್ಷಗಾನ ಅಸ್ತಿತ್ವದಲ್ಲಿರುವ ಇತರ ಜಿಲ್ಲೆಗಳಿಗೂ ವಿಸ್ತರಿಸಬೇಕು.
- ರಾಷ್ಟ್ರೀಯ ನಾಟಕ ಶಾಲೆಯ ಮಾದರಿಯಲ್ಲಿ ರಾಷ್ಟ್ರೀಯ ಯಕ್ಷಗಾನ ಶಾಲೆ ರಚನೆ ಆಗಬೇಕು.
- ಸರ್ಕಾರ ಮುಂದೆ ವಿಶ್ವ ಯಕ್ಷಗಾನ ಸಮ್ಮೇಳನ ನಡೆಸಬೇಕು
- ಪಠ್ಯಗಳಲ್ಲಿ ಯಕ್ಷಗಾನದ ವಿಷಯಗಳನ್ನು ಸೇರಿಸಬೇಕು
- ಔಪಚಾರಿಕ ಶಿಕ್ಷಣದಲ್ಲಿ ಯಕ್ಷಗಾನ ವಿಷಯದಲ್ಲಿ ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್ ಆರಂಭಕ್ಕೆ ಆದ್ಯತೆ ನೀಡಬೇಕು

ಸುದ್ದಿ 2 ನಿಮಿಷ

‘ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಕುವೆಂಪು ಹೆಸರಿಡಲು ನಿರ್ಧಾರ’

ಶಿವಮೊಗ್ಗ: ಇಲ್ಲಿನ ಸೋಗಾನೆಯಲ್ಲಿ ನಿರ್ಮಿಸಿರುವ ವಿಮಾನ ನಿಲ್ದಾಣಕ್ಕೆ ರಾಷ್ಟ್ರಕವಿ ಕುವೆಂಪು ಹೆಸರು ಇಡಲಾಗುವುದು ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

‘ವಿಶ್ವಮಾನವತ್ವಕ್ಕೆ ಕವಿ ಕುವೆಂಪು ಅವರ ಕೊಡುಗೆ ಅಪಾರ. ಹೀಗಾಗಿ ವಿಮಾನ ನಿಲ್ದಾಣಕ್ಕೆ ಅವರ ಹೆಸರೇ ಸೂಕ್ತ ಎಂದು ತೀರ್ಮಾನಿಸಲಾಗಿದೆ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಫೆ. 27ರಂದು ಶಿವಮೊಗ್ಗ ವಿಮಾನ ನಿಲ್ದಾಣ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಬರುವುದು ಖಚಿತ. ಅವರೇ ಅಂದು ಕುವೆಂಪು ಹೆಸರನ್ನು ಅಧಿಕೃತವಾಗಿ ಘೋಷಣೆ ಮಾಡಲಿದ್ದಾರೆ. ವಿಧಾನಮಂಡಲದ ಅಧಿವೇಶನದಲ್ಲಿ ಈ ವಿಚಾರವನ್ನು ಎಲ್ಲರ ಸಮ್ಮುಖದಲ್ಲಿ ಚರ್ಚಿಸಿ ಸರ್ವಾನುಮತದಿಂದ ನಿರ್ಣಯಿಸಿ ಕೇಂದ್ರಕ್ಕೆ ಪ್ರಸ್ತಾವ ಕಳುಹಿಸಿ ಕೊಡಲಾಗುವುದು’ ಎಂದು ಹೇಳಿದರು.



ಮಾತೃಭಾಷೆ ಬದಲು ರಾಜ್ಯಭಾಷೆ ಎನ್ನಿ: ನ್ಯಾ. ಶ್ರೀನಿವಾಸ

ಕಲಬುರಗಿ: ಹೈಕೋರ್ಟ್‌ನಲ್ಲಿ ‘ಮಾತೃಭಾಷೆ’ ಬಳಕೆ ಅನ್ನುವ ಪದ ಬದಲು ‘ರಾಜ್ಯಭಾಷೆ’ ಎಂದಾಗಬೇಕು. ಈ ಸಂಬಂಧ ಸಂವಿಧಾನಕ್ಕೆ ತಿದ್ದುಪಡಿಯೂ ಆಗಲಿ ಎಂದು ಕಲಬುರಗಿ ಹೈಕೋರ್ಟ್ ಪೀಠದ ನ್ಯಾಯಮೂರ್ತಿ ಶ್ರೀನಿವಾಸ ಹರೀಶಕುಮಾರ ಹೇಳಿದರು.

ಅಧಿವಕ್ತಾ ಪರಿಷತ್ ಕರ್ನಾಟಕ (ಉತ್ತರ) ಭಾನುವಾರ ಆಯೋಜಿಸಿದ್ದ ಪ್ರಥಮ ರಾಜ್ಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ಕರ್ನಾಟಕದಲ್ಲಿರುವ ಎಲ್ಲರ ಮಾತೃಭಾಷೆ ಕನ್ನಡ ಅಲ್ಲ. ಮರಾಠಿ, ಹಿಂದಿ, ತೆಲುಗು, ತಮಿಳು ಮಾತನಾಡುವವರಿದ್ದಾರೆ. ಪ್ರತಿಯೊಬ್ಬರೂ ಅವರವರ ಮಾತೃಭಾಷೆಯಲ್ಲಿ ವಾದ–ಪ್ರತಿವಾದ ಶುರು ಮಾಡಿದರೆ ಯಾರ ಭಾಷೆ ಅಂತ ಅರ್ಥ ಮಾಡಿಕೊಳ್ಳಬೇಕು? ಹಾಗಾಗಿ, ಕರ್ನಾಟಕದಲ್ಲಿ ಕನ್ನಡ, ಆಂಧ್ರಪ್ರದೇಶದಲ್ಲಿ ತೆಲುಗು, ಮಹಾರಾಷ್ಟ್ರದಲ್ಲಿ ಮರಾಠಿ ಈ ರೀತಿಯಲ್ಲಿ ಬದಲಾವಣೆ ಮಾಡಿಕೊಂಡು ಹೈಕೋರ್ಟ್ ಮಟ್ಟದಲ್ಲಿ ರಾಜ್ಯ ಭಾಷೆಯನ್ನು ಬಳಸಬೇಕು’ ಎಂದು ಪ್ರತಿಪಾದಿಸಿದರು.

‘ಇಂಗ್ಲಿಷ್ ಪೆಡಂಭೂತ ಅನೇಕ ವಕೀಲರಿಗೆ ಕೀಳರಿಮೆ ತಂದುಕೊಟ್ಟಿದೆ. ಹೈಕೋರ್ಟ್‌ನಲ್ಲಿ ಸಂವಿಧಾನದ ಪ್ರಕಾರ ಇಂಗ್ಲಿಷ್ ಉಪಯೋಗಿಸಬೇಕೆಂದೇನಿಲ್ಲ. ನಿತ್ಯ ಕನ್ನಡದಲ್ಲೇ ಮಾತನಾಡುತ್ತೇವೆ’ ಎಂದರು.

‘ಅರಣ್ಯ ಭವನ ಚಲೋ 16 ರಂದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರಗುತ್ತಿಗೆ ಎಂಬುದರ ಬದಲು ದಿನಗೂಲಿ ಹುದ್ದೆ ಎಂದೇ ಪರಿಗಣಿಸಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇದೇ 16 ರಂದು ಅರಣ್ಯ ಭವನ ಚಲೋ ನಡೆಸಲು ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘ ತೀರ್ಮಾನಿಸಿದೆ.

‘1996 ರ ಏಪ್ರಿಲ್ 10ರ ನಂತರ ದಿನಗೂಲಿಗೆ ಸೇರಿದವರನ್ನು ಹೊರಗುತ್ತಿಗೆ ನೌಕರರೆಂದು ಬದಲಿಸಲಾಗಿದೆ. ಈ ಹಿಂದೆ ಪ್ರತಿಭಟನೆ ನಡೆಸಿದಾಗ ನೀಡಿದ್ದ ಭರವಸೆಯನ್ನು ಅಧಿಕಾರಿಗಳು ಮರೆತಿದ್ದಾರೆ. ಈಗ ಮತ್ತೆ ಗಮನಸೆಳೆಯಲು ರಾಜ್ಯಮಟ್ಟದ ಸಭೆಯಲ್ಲಿ ನಿರ್ಧರಿಸಿದಂತೆ ಪ್ರತಿಭಟನೆಗೆ ಕರೆ ನೀಡಲಾಗಿದೆ’ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಎ.ಎಂ. ನಾಗರಾಜು ತಿಳಿಸಿದ್ದಾರೆ.

‘ನೌಕರರು ದಿನದ 24 ಗಂಟೆ ಕೆಲಸ ಮಾಡುತ್ತಿದ್ದು, 8 ಗಂಟೆ ಅವಧಿ ಕೆಲಸ ಅಥವಾ ಪಾಳಿ ವ್ಯವಸ್ಥೆ ಜಾರಿ ಮಾಡಬೇಕು. ನೌಕರರಿಗೆ ವಿಶೇಷ ಭತ್ಯೆ ನೀಡಬೇಕು ಎಂಬುದು ಬೇಡಿಕೆಗಳಲ್ಲಿ ಸೇರಿವೆ’ ಎಂದೂ ತಿಳಿಸಿದ್ದಾರೆ.


ಜಿಡಗಾ ಜಾತ್ರೆ

ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕಿನ ಜಿಡಗಾದ ಸಿದ್ಧರಾಮ ಶಿವಯೋಗಿಗಳ ಪುಣ್ಯಾರಾಧನೆ ಅಂಗವಾಗಿ ಭಾನುವಾರ ಅಪಾರ ಭಕ್ತರ ಸಮ್ಮುಖದಲ್ಲಿ ರಥೋತ್ಸವ ಸಂಭ್ರಮದಿಂದ ಜರುಗಿತು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಅಜಾದ್

ಪತ್ನಿ ಮೇಲೆ ಶಂಕೆ: ಮಕ್ಕಳನ್ನೇ ಕೊಂದ ತಂದೆ

ದೇವದುರ್ಗ (ರಾಯಚೂರು ಜಿಲ್ಲೆ): ಪತ್ನಿ ಅನೈತಿಕ ಸಂಬಂಧ ಹೊಂದಿದ್ದಾಳೆ ಎಂದು ಶಂಕಿಸಿದ ದೇವದುರ್ಗ ತಾಲ್ಲೂಕಿನ ಜಕ್ಲೇರದೊಡ್ಡಿ ಗ್ರಾಮದ ನಿಂಗಪ್ಪ ಎಂಬಾತ ತನ್ನ ಇಬ್ಬರು ಮಕ್ಕಳನ್ನು ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ. ಶನಿವಾರ ಕೃತ್ಯ ನಡೆದಿದ್ದು, ಭಾನುವಾರ ಗೊತ್ತಾಗಿದೆ.

ಶಿವರಾಜ ನಿಂಗಪ್ಪ (5), ರಾಘವೇಂದ್ರ ನಿಂಗಪ್ಪ (3) ಕೊಲೆಯಾದ ಮಕ್ಕಳು. ಶನಿವಾರ ಮಧ್ಯರಾತ್ರಿಯೇ ದೇವದುರ್ಗ ಪೊಲೀಸ್ ಠಾಣೆಗೆ ತೆರಳಿ ಪತಿ ನಿಂಗಪ್ಪನ ವಿರುದ್ಧ ಪತ್ನಿ ಪ್ರಭಾವತಿ ದೂರು ಸಲ್ಲಿಸಿದ್ದಾರೆ. ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

‘ಅನೈತಿಕ ಸಂಬಂಧ ಇಟ್ಟುಕೊಂಡಿದ್ದೀಯಾ. ಮಕ್ಕಳಿಬ್ಬರು ನನಗೆ ಹುಟ್ಟಿಲ್ಲ ಎಂದು ನಿಂಗಪ್ಪ ನಿಂದಿಸಿದ. ಕೆ.ಇರಬಗೇರಾ ಗ್ರಾಮದಲ್ಲಿದ್ದ ಮಕ್ಕಳಿಬ್ಬರನ್ನು ಜಕ್ಲೇರದೊಡ್ಡಿಗೆ ಕರೆತಂದು ಕತ್ತು ಹಿಸುಕಿ ಸಾಯಿಸಿದ್ದು, ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಕೋರಿದ್ದಾರೆ.

ವೈದ್ಯಾಧಿಕಾರಿಗಳ ಸಂಘ: ಡಾ.ವಿವೇಕ್ ದೊರೈ ಅಧ್ಯಕ್ಷ



ತುಮಕೂರು: ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ನೂತನ ಅಧ್ಯಕ್ಷರಾಗಿ ಶಿವಮೊಗ್ಗದ ಡಾ.ವಿವೇಕ್ ದೊರೈ ಆಯ್ಕೆಯಾಗಿದ್ದಾರೆ.

ನಗರ ಹೊರ ವಲಯದ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಎಚ್.ಎಂ. ಗಂಗಾಧರಯ್ಯ ಸ್ಮಾರಕ ಭವನದಲ್ಲಿ ಭಾನುವಾರ ಸಂಘದ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಯಿತು. ಎಲೆಕ್ಟ್ ಅಧ್ಯಕ್ಷರಾಗಿ ವಿಜಯಪುರದ ಡಾ.ರವೀಂದ್ರನಾಥ ಎಂ.ಮೇಟಿ, ಕಾರ್ಯದರ್ಶಿಯಾಗಿ ಡಾ.ಕೆ.ಎನ್.ಚಂದ್ರಮೋಹನ್, ಎಲೆಕ್ಟ್ ಕಾರ್ಯದರ್ಶಿಯಾಗಿ ಡಾ.ಪಿ. ಆರ್.ತಿಮ್ಮರಾಜು, ಖಜಾಂಚಿಯಾಗಿ ಡಾ.ಎನ್.ನರಸಿಂಹಮೂರ್ತಿ, ಆಂತರಿಕ ಲೆಕ್ಕ ಪರಿಶೋಧಕರಾಗಿ ಡಾ.ಬಿ. ಕೆ.ಮಂಜುನಾಥ್ ಆಯ್ಕೆಯಾದರು.

ಬೆಂಗಳೂರು ವಿಭಾಗದ ಉಪಾಧ್ಯಕ್ಷರಾಗಿ ಡಾ.ಎಚ್.ಆರ್.ರಾಜಶೇಖರಯ್ಯ, ಜಂಟಿ ಕಾರ್ಯದರ್ಶಿಯಾಗಿ ಡಾ.ಎಸ್. ಎಲ್. ಸವಿತಾ, ಬೆಂಗಳೂರು-ಮೈಸೂರು ವಿಭಾಗದ ಸಂಘಟನಾ ಕಾರ್ಯದರ್ಶಿಯಾಗಿ ಡಾ.ಬಿ.ಎಂ.ಶಿವಸ್ವಾಮಿ, ಮೈಸೂರು ವಿಭಾಗದ ಉಪಾಧ್ಯಕ್ಷರಾಗಿ ಡಾ.ಕೆ.ಪಿ.ದೇವಿ ಆನಂದ್, ಜಂಟಿ ಕಾರ್ಯದರ್ಶಿಯಾಗಿ ಡಾ.ಸೂರ್ಯನಾರಾಯಣ ಆಯ್ಕೆಯಾಗಿದ್ದಾರೆ.

ಬೆಳಗಾವಿ ವಿಭಾಗದ ಉಪಾಧ್ಯಕ್ಷರಾಗಿ ಡಾ.ಆರ್.ಎಂ.ಭೋವೇರ, ಜಂಟಿ ಕಾರ್ಯದರ್ಶಿಯಾಗಿ ಡಾ.ಬಿ. ಎಂ.ಗೋಜನೂರ, ಬೆಳಗಾವಿ- ಕಲಬುರಗಿ ಸಂಘಟನಾ ಕಾರ್ಯದರ್ಶಿಯಾಗಿ ಡಾ.ಕೆ.ಶರಣ ಬಸಪ್ಪ, ಕಲಬುರಗಿ ವಿಭಾಗದ ಉಪಾಧ್ಯಕ್ಷರಾಗಿ ಡಾ.ಕಿರಣ್ ಎಂ.ಪಾಟೀಲ್, ಜಂಟಿ ಕಾರ್ಯದರ್ಶಿಯಾಗಿ ಡಾ.ರುದ್ರೇಗೌಡ ಪೊಲೀಸ್ ಪಾಟೀಲ್ ಆಯ್ಕೆಯಾಗಿದ್ದಾರೆ.

ಜೆಡಿಎಸ್ ಸಮಾವೇಶ: ಶಾಸಕ ಶಿವಲಿಂಗೇಗೌಡ ವಿರುದ್ಧ ಎಚ್‌ಡಿಕೆ ವಾಗ್ದಾಳಿ

ಅರಸೀಕೆರೆ ಅಭ್ಯರ್ಥಿ ಬದಲು, ಹಾಸನ ನಿಗೂಢ

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023

ಅರಸೀಕೆರೆ (ಹಾಸನ): ಜೆಡಿಎಸ್‌ನಲ್ಲಿ ನಿರೀಕ್ಷೆ ಹೆಚ್ಚಿಸಿದ್ದ ಇಲ್ಲಿನ ಸಭೆ ಕೇವಲ ಅರಸೀಕೆರೆ ಕ್ಷೇತ್ರಕ್ಕೆ ಸೀಮಿತವಾಯಿತು. ಜೆಡಿಎಸ್‌ನಿಂದ ಹೊರನಡೆದಿರುವ ಶಾಸಕ ಕೆ.ಎಂ.ಶಿವಲಿಂಗೇಗೌಡ ವಿರುದ್ಧ ಸಮರ ಸಾರುವುದಷ್ಟೇ ಉದ್ದೇಶದಂತಿತ್ತು.

ಸಭೆಯುದ್ದಕ್ಕೂ ಶಿವಲಿಂಗೇಗೌಡ ವಿರುದ್ಧ ವಾಗ್ದಾಳಿ ನಡೆಸಿದ ಮುಖಂಡರು, ‘ದೇವೇಗೌಡರಿಂದಲೇ ಈ ಮಟ್ಟಕ್ಕೆ ಬೆಳೆದ ಶಿವಲಿಂಗೇಗೌಡ, ಅವರ ಅನಾರೋಗ್ಯದ ಸಂದರ್ಭದಲ್ಲಿ ಭೇಟಿಯಾಗುವ ಸೌಜನ್ಯ ತೋರಿಲ್ಲ. ಆ ಶಾಪ ತಟ್ಟಲಿದೆ’ ಎಂದು ಗುಡುಗಿದರು.

ಅರಸೀಕೆರೆ ಕ್ಷೇತ್ರದ ಅಭ್ಯರ್ಥಿಯಾಗಿ ಬಾಣಾವರ ಅಶೋಕ ಹೆಸರನ್ನು ಪಕ್ಷದ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ.ಕುಮಾರಸ್ವಾಮಿ ಪರೋಕ್ಷವಾಗಿ ಘೋಷಿಸಿದರು. ‘ಈ ಬಾರಿ ಅರಸೀಕೆರೆಯಲ್ಲಿ ಕುರುಬ ಸಮಾಜದ ಅಭ್ಯರ್ಥಿ ಗೆಲುವು ಸಾಧಿಸಲಿದ್ದಾರೆ ಎಂದು ಕೋಡಿಮಠದ ಸ್ವಾಮೀಜಿ ಹೇಳಿದ್ದಾರಂತೆ. ಹಾಗಾದರೆ, ಈ ಬಾರಿ ಅಶೋಕ್‌ಗೆ ಲಕ್ ಹೊಡೆಯಲಿದೆ’ ಎನ್ನುವ ಮೂಲಕ ಅಭ್ಯರ್ಥಿ ಎಂದು ಬಿಂಬಿಸಿದರು.

ವಾಗ್ದಾಳಿ: ‘ಈ ಹಿಂದೆ ನಡೆದ ಕಾರ್ಯಕ್ರಮದಲ್ಲಿ ಅರಸೀಕೆರೆ ಕ್ಷೇತ್ರಕ್ಕೆ ಜೆಡಿಎಸ್ ಕೊಡುಗೆ ಏನೆಂಬ ಬುಕ್‌ಲೆಟ್ ತಂದಿದ್ದ ಆ ವ್ಯಕ್ತಿಗೆ, ಈಗ ದೇವೇಗೌಡರ ಹೆಸರು ಹೇಳಿದರೆ, ಜೆಡಿಎಸ್ ಚಿಹ್ನೆ ತೋರಿದರೆ ಜನ ಬರುವುದಿಲ್ಲ ಎಂಬ ಅನುಮಾನ ಕಾಡುತ್ತಿದೆ’ ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

‘ಯಾವಾಗ ಯಾರ ಕಾಲು, ಜುಟ್ಟು ಹಿಡಿಯಬೇಕು ಎಂಬುದು ಆ ವ್ಯಕ್ತಿಗೆ ಗೊತ್ತಿದೆ. ಕಾಂಗ್ರೆಸ್ ಸೇರುವ ಕಳ್ಳಾಟ 2 ವರ್ಷದಿಂದ ನಡೆಯುತ್ತಿದೆ. ಅದನ್ನೇ ಕಾಂಗ್ರೆಸ್ ನಾಯಕರು ರಾಯಚೂರಿನಲ್ಲಿ ಹೇಳಿದ್ದಾರೆ’ ಎಂದು ಹೇಳಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಮಾತನಾಡಿ, ‘ತಂದೆ ಸ್ಥಾನದಲ್ಲಿರುವ ದೇವೇಗೌಡರಿಗೆ ಈ ವಯಸ್ಸಿನಲ್ಲಿ ವಿಷ ಹಾಕುವ ಕೆಲಸ ಮಾಡಿದ್ದೀ ಶಿವಲಿಂಗು, ನಿನಗೆ ಆ ಶಾಪ ತಟ್ಟಲಿದೆ’ ಎಂದರು. ಶಾಸಕ ಎಚ್. ಡಿ ರೇವಣ್ಣ ಮಾತನಾಡಿ, ‘ಅರಸೀಕೆರೆಯಲ್ಲಿ ಏನಾಗಿದೆ, ಶಿವಲಿಂಗೇಗೌಡರಿಗೆ ಏನೇನು ಮಾಡಿದ್ದೇವೆ ಎಂಬುದನ್ನು ಮುಂದೆ ಹೇಳುವೆ’ ಎಂದು ತಿಳಿಸಿದರು.

ಜೆಡಿಎಸ್ ನಾಯಕರು ನನಗೆ ಇಷ್ಟೆಲ್ಲ ನಿಂದಿಸಿದ್ದಾರೆ. ಈಗಲೂ ನಾನು ಪಕ್ಷದಲ್ಲಿ ಮುಂದುವರಿಯಬೇಕೆ ಎನ್ನುವುದನ್ನು ಇನ್ನೆರಡು ದಿನದಲ್ಲಿ ಕಾರ್ಯಕರ್ತರ ಸಭೆ ಕರೆದು ಕೇಳುತ್ತೇನೆ

ಕೆ.ಎಂ.ಶಿವಲಿಂಗೇಗೌಡ, ಶಾಸಕ

ಭವಾನಿ ಜೊತೆ ವೇದಿಕೆ ಹಂಚಿಕೊಂಡ ಎಚ್‌.ಡಿ.ಕುಮಾರಸ್ವಾಮಿ

ಹಾಸನ ಕ್ಷೇತ್ರದ ಟಿಕೆಟ್ ಬಗ್ಗೆ ಕುಮಾರಸ್ವಾಮಿ ಅರಸೀಕೆರೆ ಸಭೆಯಲ್ಲಿ ಯಾವುದೇ ಪ್ರಸ್ತಾಪ ಮಾಡಲಿಲ್ಲ. ಆದರೆ, ಹೊಳೆನರಸೀಪುರ ತಾಲ್ಲೂಕಿನ ನಗರ್ತಿ ಗ್ರಾಮದಲ್ಲಿ ಈಶ್ವರ ಮತ್ತು ಬೈರವೇಶ್ವರ ದೇವಾಲಯದ ಉದ್ಘಾಟನೆ ಕಾರ್ಯಕ್ರಮದಲ್ಲಿ ಭವಾನಿ ರೇವಣ್ಣ ಮತ್ತು ಎಚ್.ಡಿ.ರೇವಣ್ಣ ಜೊತೆ ಕಾಣಿಸಿಕೊಂಡರು.

ಅರಸೀಕೆರೆಯಲ್ಲಿ ಚಿಕ್ಕಪ್ಪನೊಂದಿಗೆ ತಿರುಗಾಡುತ್ತಿದ್ದ ಸಂಸದ ಪ್ರಜ್ವಲ್ ರೇವಣ್ಣ ಮುಖದಲ್ಲೂ ನಿರಾಳತೆ ಇತ್ತು. ಭವಾನಿ ಅವರಿಗೆ ಟಿಕೆಟ್ ಕುರಿತು ಹೊಳೆನರಸೀಪುರದಲ್ಲಿ ಚರ್ಚೆ ಆಗಿರಬಹುದು ಎಂಬ ಮಾತುಗಳು ಕಾರ್ಯಕರ್ತರಿಂದ ಕೇಳಿ ಬಂದವು.

ಅಕ್ರಮ ಹಣದಿಂದ ರೆಡ್ಡಿ ಹೊಸ ಪಕ್ಷ: ಸಿದ್ದರಾಮಯ್ಯ



ಸಿಂಧನೂರು (ರಾಯಚೂರು ಜಿಲ್ಲೆ): ‘ಅಕ್ರಮವಾಗಿ ಸಂಪಾದಿಸಿದ ದುಡ್ಡು ಜಾಸ್ತಿ ಇರುವುದರಿಂದ ಜಿ. ಜನಾರ್ದನ ರೆಡ್ಡಿ ಹೊಸ ಪಕ್ಷ ಸ್ಥಾಪಿಸಿರಬಹುದು. ಆದರೆ, ಯಾರೇ ಹೊಸ ಪಕ್ಷ ಕಟ್ಟಿದರೂ ಹೆಚ್ಚು ದಿನ ಇರಲ್ಲ. ಪಕ್ಷ ಸಂಘಟಿಸುವುದು ಕಷ್ಟ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಹಿಂದೆ ಎಸ್. ಬಂಗಾರಪ್ಪ, ವಿಜಯ ಸಂಕೇಶ್ವರ, ಶ್ರೀರಾಮುಲು, ಯಡಿಯೂರಪ್ಪ ಕಟ್ಟಿದ ಪಕ್ಷಗಳು ಈಗ ಉಳಿದಿವೆಯೇ?’ ಎಂದು ಅವರು ಪ್ರಶ್ನಿಸಿದರು.

ಲಿಂಗಾಯತ ಮತ ಛಿದ್ರಕ್ಕೆ ಬ್ರಾಹ್ಮಣ ಸಿಎಂ ಹೇಳಿಕೆ: ಸಿ.ಸಿ.ಪಾಟೀಲ



ಗದಗ: ‘ಬಿಜೆಪಿಯ ಬೆನ್ನುಹುರಿಯಂತಿರುವ ಲಿಂಗಾಯತ ಮತಗಳನ್ನು ಛಿದ್ರಗೊಳಿಸುವ ಉದ್ದೇಶದಿಂದಲೇ ಮಾಜಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಬ್ರಾಹ್ಮಣ ಸಿ.ಎಂ ಹೇಳಿಕೆ ನೀಡಿದ್ದಾರೆ’ ಎಂದು ಸಚಿವ ಸಿ.ಸಿ.ಪಾಟೀಲ ದೂರಿದರು.

‘ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ಏನೇನೋ ಕನಸುಗಳು ಬೀಳುತ್ತವೆ. ಅವರ ಈ ಹೇಳಿಕೆಗೆ ಬಿಜೆಪಿ ತಲೆ ಕೆಡಿಸಿಕೊಳ್ಳುವುದಿಲ್ಲ. ರಾಜ್ಯಕ್ಕೆ ಅಮಿತ್ ಶಾ ಅವರು ಬಂದಾಗಲೂ ಬೊಮ್ಮಾಯಿ ಅವರ ಕೈ ಬಲಪಡಿಸಿ ಎಂದು ಹೇಳಿ, ಪರೋಕ್ಷವಾಗಿ ಮುಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಂಬ ಸಂದೇಶ ಕೊಟ್ಟಿದ್ದಾರೆ’ ಎಂದರು.

‘ಲಿಂಗಾಯತ ಸಮುದಾಯ ಬಿಜೆಪಿಯಿಂದ ಹಿಂದೆ ಸರಿಯಬೇಕು ಎಂಬ ಉದ್ದೇಶದಿಂದಲೇ ಕುಮಾರಸ್ವಾಮಿ ಅವರು ಬಿಜೆಪಿ ಬಹುಮತ ಸಾಧಿಸಿದರೆ ಪ್ರಹ್ಲಾದ ಜೋಶಿ ಸಿ.ಎಂ ಆಗುತ್ತಾರೆ ಎಂಬ ಹೇಳಿಕೆ ನೀಡಿದ್ದಾರೆ. ರಾಜ್ಯದ ಜನರು ಕೂಡ ಅವರ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು’ ಎಂದರು.

ಏರೋ ಇಂಡಿಯಾ–2023: ರಕ್ಷಣಾ ಸಚಿವ ರಾಜನಾಥ್ ಸಿಂಗ್

ರಕ್ಷಣಾ ವಹಿವಾಟು: ₹25 ಸಾವಿರ ಕೋಟಿ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ರಕ್ಷಣಾ ಉದ್ಯಮವನ್ನು ವಿಶ್ವದರ್ಜೆಯ ಉದ್ಯಮವನ್ನಾಗಿ ರೂಪಿಸುವ ಮೂಲಕ, ಭಾರತವು 2024ಕ್ಕೆ ₹25 ಸಾವಿರ ಕೋಟಿಯಷ್ಟು ರಫ್ತು ವಹಿವಾಟು ನಡೆಸುವ ಗುರಿ ಹೊಂದಿದೆ’ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದರು.

‘ಏರೋ ಇಂಡಿಯಾ–2023’ರ ಅಂಗವಾಗಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಅವರು, ‘ರಕ್ಷಣಾ ಕ್ಷೇತ್ರದಲ್ಲಿ ಭಾರತವು ಆತ್ಮನಿರ್ಭರ ಸಾಧಿಸುವ ಗುರಿ ಹೊಂದಿದೆ. ಸದ್ಯ ಈ ವಲಯದಲ್ಲಿ ₹13 ಸಾವಿರ ಕೋಟಿ ವಹಿವಾಟಿನಷ್ಟು ರಫ್ತು ಮಾಡಲಾಗುತ್ತಿದೆ’ ಎಂದು ಅವರು ಹೇಳಿದರು.

‘ವೈಮಾನಿಕ ಕ್ಷೇತ್ರದ ಅಭಿವೃದ್ಧಿಗೆ ಏರೋ ಇಂಡಿಯಾ ಪ್ರದರ್ಶನವು ಉತ್ತೇಜನ ನೀಡಲಿದೆ. ಈ ಹಿಂದಿನ ಆವೃತ್ತಿಗಳಿಗಿಂತಲೂ ಈ ಬಾರಿಯದ್ದು ಅತಿ ದೊಡ್ಡದು’ ಎಂದು ತಿಳಿಸಿದರು.

‘ಕ್ರಿಯಾಶೀಲವಾದ ರಕ್ಷಣಾ ಪರಿಕರಗಳ ತಯಾರಿಕೆ ವ್ಯವಸ್ಥೆಯನ್ನು ರೂಪಿಸುವುದು ನಮ್ಮ ಉದ್ದೇಶ. ಏರೋ ಇಂಡಿಯಾದಲ್ಲಿ ಮಿತ್ರ ರಾಷ್ಟ್ರಗಳ ಪಾಲ್ಗೊಳ್ಳುವಿಕೆ ಕೇವಲ ರಕ್ಷಣಾ ಉಪಕರಣಗಳ ಖರೀದಿ ಮತ್ತು ಮಾರಾಟದ ವಹಿವಾಟಿಗಷ್ಟೇ ಸೀಮಿತವಾಗಿಲ್ಲ. ದ್ವಿಪಕ್ಷೀಯ ಬಾಂಧವ್ಯಗಳ ವೃದ್ಧಿ ಉದ್ದೇಶವನ್ನು ಭಾರತವು ಹೊಂದಿದೆ. ಹೀಗಾಗಿ, ಪ್ರತಿ ಬಾರಿಯೂ ದಾಖಲೆಯ ವಹಿವಾಟು ನಡೆಸಲಾಗುತ್ತಿದೆ’ ಎಂದು ತಿಳಿಸಿದರು.

‘ಭಾರತದ ಪೆವಿಲಿಯನ್ ನವಭಾರತದ ಸಾಮರ್ಥ್ಯಕ್ಕೆ ಕನ್ನಡಿ ಹಿಡಿಯಲಿದೆ. ವೈಮಾನಿಕ ಮತ್ತು ರಕ್ಷಣಾ ಪ್ರದರ್ಶನಕ್ಕೆ ಇದು ಸಾಕ್ಷಿಯಾಗಲಿದೆ. ನವೋದ್ಯಮಗಳು, ಸೈಬರ್ ಭದ್ರತೆ, ಇ–ಮ್ಯಾನೇಜ್‌ಮೆಂಟ್ ಮುಂತಾದ ವಿಷಯಗಳನ್ನು ಇಲ್ಲಿ ಬಿಂಬಿಸಲಾಗುವುದು’ ಎಂದು ವಿವರಿಸಿದರು.



ಕರ್ನಾಟಕ ಏರೋ ಇಂಡಿಯಾ ಆಯೋಜನೆ ಮತ್ತು ರಕ್ಷಣಾ ಕ್ಷೇತ್ರದಲ್ಲಿ ಮುಖ್ಯ ಪಾತ್ರ ವಹಿಸುತ್ತಿದೆ. ವೈಮಾನಿಕ ಕ್ಷೇತ್ರದಲ್ಲೂ ಬೆಂಗಳೂರು ಜಾಗತಿಕ ಕೇಂದ್ರವಾಗುವ ವಿಶ್ವಾಸವಿದೆ

ರಾಜನಾಥ್ ಸಿಂಗ್, ರಕ್ಷಣಾ ಸಚಿವ

‘ವೈಮಾನಿಕ ಕ್ಷೇತ್ರದ ಅಭಿವೃದ್ಧಿ ಶ್ರೇಯಸ್ಸು ಕರ್ನಾಟಕಕ್ಕೆ ಸಲ್ಲಬೇಕು’

‘ವೈಮಾನಿಕ ಕ್ಷೇತ್ರದ ಅಭಿವೃದ್ಧಿಯ ಶ್ರೇಯಸ್ಸು ಕರ್ನಾಟಕಕ್ಕೆ ಸಲ್ಲಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ರಕ್ಷಣಾ ಪಾರ್ಕ್ ನಿರ್ಮಾಣದ ಮೊದಲ ಹಂತ ಪೂರ್ಣಗೊಂಡಿದ್ದು, 2ನೇ ಹಂತದ ಕಾರ್ಯ ಪ್ರಾರಂಭವಾಗುತ್ತಿದೆ. ಬೆಂಗಳೂರು ವೈಮಾನಿಕ ಕ್ಷೇತ್ರದ ಕೇಂದ್ರವಾಗಿದೆ. ಇದು ಏರ್ ಶೋ ನಡೆಸಲು ಅತ್ಯಂತ ಸೂಕ್ತ ಸ್ಥಳ. ಭಾರತೀಯ ವೈಮಾನಿಕ ಕ್ಷೇತ್ರದ ತಂತ್ರಜ್ಞಾನವನ್ನು ಇದರಿಂದ ಬಿಂಬಿಸಬಹುದಾಗಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

‘ಏರೋ ಇಂಡಿಯಾ ಶೋ ಆತಿಥ್ಯ ವಹಿಸುವುದು ಗೌರವದ ಸಂಕೇತ. ಇದನ್ನು ಆಯೋಜಿಸುವುದು ಕರ್ನಾಟಕ ಮತ್ತು ಬೆಂಗಳೂರಿಗೆ ಅಭ್ಯಾಸವಾಗಿದೆ. ಮುಂದಿನ ದಿನಗಳಲ್ಲಿ ಭಾರತವು ಸಂಪೂರ್ಣವಾಗಿ ತನ್ನ ಸ್ವಂತ ಬಲದಿಂದ ಯುದ್ಧ ವಿಮಾನಗಳನ್ನು ತಯಾರಿಸಬೇಕು. ಅಂತಹ ಸಾಮರ್ಥ್ಯ ನಮಗಿದೆ’ ಎಂದು ವಿವರಿಸಿದರು.

ಬಸವಣ್ಣ, ಕೆಂಪೇಗೌಡ ಸ್ಮರಣೆ

‘ಏರೋ ಇಂಡಿಯಾ’ ಕುರಿತು ವಿವರಣೆಯನ್ನು ನೀಡುವ ಮುನ್ನ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಬಸವಣ್ಣ ಮತ್ತು ನಾಡಪ್ರಭು ಕೆಂಪೇಗೌಡ ಅವರನ್ನು ಸ್ಮರಿಸಿದರು.

ಕಬ್ಬಿಗೆ ಬೆಂಕಿ: ರೈತ ಸಜೀವ ದಹನ

ಪ್ರಜಾವಾಣಿ ವಾರ್ತೆ


ಮಹಾಲಿಂಗಯ್ಯ

ಮಂಡ್ಯ: ತಾಲ್ಲೂಕಿನ ಮೊಡಚಾಕನಹಳ್ಳಿಯ ಕಬ್ಬಿನ ಗದ್ದೆಯಲ್ಲಿ ಬೆಂಕಿ ನಂದಿಸಲು ಮುಂದಾದ ರೈತರೊಬ್ಬರು ಬೆಂಕಿಯ ಕೆನ್ನಾಲಗೆಗೆ ಸಿಲುಕಿ ಭಾನುವಾರ ಸಜೀವ ದಹನವಾದರು. 20 ಎಕರೆಯಷ್ಟು ಕಬ್ಬಿನ ಗದ್ದೆ, ಬಾಳೆ, ತೆಂಗು ಬೆಳೆಯೂ ಸುಟ್ಟು ಹೋಗಿದೆ.

ಗ್ರಾಮದ ಮಹಾಲಿಂಗಯ್ಯ (60) ಮೃತ. ಮಧ್ಯಾಹ್ನ ಅವರ ಕಬ್ಬಿನ ಗದ್ದೆಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಕೆಲವೇ ನಿಮಿಷಗಳಲ್ಲಿ ಬೆಂಕಿ ಅಕ್ಕಪಕ್ಕದ ಗದ್ದೆಗಳಿಗೂ ವ್ಯಾಪಿಸಿತು. ಬೆಂಕಿ ನಂದಿಸಲು ಯತ್ನಿಸುತ್ತಿದ್ದ ಮಹಾಲಿಂಗಯ್ಯ ಕಾಲು ಜಾರಿ ಬಿದ್ದರು, ಅವರಿಗೂ ಬೆಂಕಿ ತಗುಲಿತು. ಹೊರಗೆ ಬರಲಾಗಲಿಲ್ಲ.

ದಟ್ಟ ಹೊಗೆ ವ್ಯಾಪಿಸಿದ್ದನ್ನು ಕಂಡು ಗ್ರಾಮಸ್ಥರು ಸ್ಥಳಕ್ಕೆ ತೆರಳಿದರು. ಅಷ್ಟರಲ್ಲಿ ಮಹಾಲಿಂಗಯ್ಯ ಸಜೀವ ದಹನವಾಗಿದ್ದರು.

ಮಹೇಶ್, ಜವರೇಗೌಡ, ಪಾಪಣ್ಣ, ಶಂಕರ್ ಅವರ ಕಬ್ಬಿನ ಗದ್ದೆಗಳೂ ಬೆಂಕಿಗೆ ಆಹುತಿಯಾಗಿವೆ ಎಂದು ಪೊಲೀಸರು ಮಾಹಿತಿ ನೀಡಿದರು. ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇಲುಕೋಟೆ ಶಾಸಕ ಸಿ.ಎಸ್. ಪುಟ್ಟರಾಜು ಗ್ರಾಮಕ್ಕೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ವೈಯಕ್ತಿಕವಾಗಿ 2 ಹಸು ಕೊಡಿಸುವ ಹಾಗೂ ಸರ್ಕಾರದಿಂದ ₹ 5 ಲಕ್ಷ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಚನ್ನಬಸವ ಸ್ವಾಮೀಜಿ ಲಿಂಗೈಕ್ಯ



ಧಾರವಾಡ: ತಾಲ್ಲೂಕಿನ ಐತಿಹಾಸಿಕ ಗರಗ ಮಡಿವಾಳೇಶ್ವರ ಕಲ್ಮಠದ ಪೀಠಾಧಿಪತಿ ಚನ್ನಬಸವ ಸ್ವಾಮೀಜಿ (88) ಅವರು ಭಾನುವಾರ ಲಿಂಗೈಕ್ಯರಾದರು. ಇವರು ವಯೋಸಹಜ ಕಾಯಿಲೆ ಬಳಲುತ್ತಿದ್ದರು.

ಹಲವು ವರ್ಷಗಳಿಂದ ಕಲ್ಮಠದ ಜವಾಬ್ದಾರಿ ಹೊತ್ತಿದ್ದ ಸ್ವಾಮೀಜಿ, ಮಠದ ಏಳಿಗೆಗಾಗಿ ಶ್ರಮಿಸಿದ್ದರು. ಅನ್ನದಾನ, ವಿದ್ಯಾದಾನಕ್ಕೆ ಹೆಚ್ಚಿನ ಒತ್ತು ನೀಡಿದ್ದ ಅವರು, ಸಮಾಜ ಸೇವೆಯಲ್ಲಿಯೂ ತೊಡಗಿಸಿಕೊಂಡಿದ್ದರು.

ಮಠದ ಆವರಣದಲ್ಲಿ ಮಧ್ಯಾಹ್ನ 12.30ರಿಂದ ಸೋಮವಾರ ಬೆಳಿಗ್ಗೆ 7.30ರವರೆಗೆ ಸ್ವಾಮೀಜಿ ಅವರ ಅಂತಿಮ ದರ್ಶನಕ್ಕೆ ಭಕ್ತರಿಗೆ ಅವಕಾಶ ಕಲ್ಪಿಸಲಾಗಿದ್ದು, ಮಧ್ಯಾಹ್ನ 12.30ಕ್ಕೆ ಮಠದ ಆವರಣದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಸೋಮವಾರ, ಫೆಬ್ರುವರಿ 13, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 44 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ ಮುಖ್ಯಪರೀಕ್ಷೆ ಎದುರಿಸಲು ಪೂರ್ವಸಿದ್ಧತಾ ಪರೀಕ್ಷೆಯ ತಾಲೀಮು ಅಗತ್ಯ.. ಏಕೆ ಗೊತ್ತಾ?



ವಿದೇಶ ವಿದ್ಯಮಾನ
ಅಮೆರಿಕ ವೀಸಾ ನೀತಿ ಬದಲಾವಣೆ ಸನ್ನಿಹಿತ
ಲೋಕಾಯುಕ್ತರ ವಿರುದ್ಧ ರಾಷ್ಟ್ರಪತಿಗೆ ದೂರು 4
ಅದಾನಿ ಕಂಪನಿಗಳಿಂದ ಹೆಚ್ಚುವರಿ ಷೇರುಗಳ ಅಡಮಾನ 8
ದಿನಕ್ಕೆ 7.2 ಗಂಟೆ ವೇತನ ರಹಿತ ಕೆಲಸ
ಮನೆಗೆಲಸ: ಮಹಿಳೆಯರಿಗೇ ಅಧಿಕ 9

ರಾಷ್ಟ್ರಪತಿ ಮುರ್ಮು ಆದೇಶ: ನಿವೃತ್ತ ನ್ಯಾಯಮೂರ್ತಿ ಅಬ್ದುಲ್ ನಜೀರ್ ಆಂಧ್ರ ಪ್ರದೇಶಕ್ಕೆ

ಆರು ರಾಜ್ಯಪಾಲರ ನೇಮಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಕನ್ನಡಿಗ ಹಾಗೂ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸೈಯದ್ ಅಬ್ದುಲ್ ನಜೀರ್ ಸಹಿತ ಆರು ಮಂದಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾನುವಾರ ರಾಜ್ಯಪಾಲರಾಗಿ ನೇಮಕ ಮಾಡಿದ್ದಾರೆ.

ಅಬ್ದುಲ್ ನಜೀರ್ ಅವರು ಆಂಧ್ರ ಪ್ರದೇಶದ ರಾಜ್ಯಪಾಲರಾಗಿ ನೇಮಕ ಗೊಂಡಿದ್ದಾರೆ. ಉಳಿದಂತೆ ನಿವೃತ್ತ ಲೆಫ್ಟಿನೆಂಟ್ ಜನರಲ್ ಕೈವಲ್ಯ ತ್ರಿವಿಕ್ರಮ ಪರ್‌ನಾಯಕ್ ಅವರನ್ನು ಅರುಣಾಚಲ ಪ್ರದೇಶಕ್ಕೆ, ಬಿಜೆಪಿ ಮುಖಂಡರಾದ ಲಕ್ಷ್ಮಣ ಪ್ರಸಾದ್ ಆಚಾರ್ಯ, ಸಿ.ಪಿ. ರಾಧಾಕೃಷ್ಣನ್, ಶಿವಪ್ರತಾಪ್ ಶುಕ್ಲಾ ಮತ್ತು ಗುಲಾಬ್‌ಚಂದ್ ಕಟಾರಿಯಾ ಅವರನ್ನು ಕ್ರಮವಾಗಿ ಸಿಕ್ಕಿಂ, ಜಾರ್ಖಂಡ್, ಹಿಮಾಚಲ ಪ್ರದೇಶ ಮತ್ತು ಅಸ್ಸಾಂ ರಾಜ್ಯಪಾಲರನ್ನಾಗಿ ನೇಮಕ ಮಾಡಲಾಗಿದೆ.

ಆಂಧ್ರ ಪ್ರದೇಶ ರಾಜ್ಯಪಾಲರಾಗಿದ್ದ ವಿಶ್ವಭೂಷಣ್ ಹರಿಚಂದನ್ ಅವರನ್ನು ಛತ್ತೀಸಗಢಕ್ಕೆ, ಜಾರ್ಖಂಡ್ ರಾಜ್ಯಪಾಲರಾಗಿದ್ದ ರಮೇಶ್ ಬೈಸ್ ಅವರನ್ನು ಮಹಾರಾಷ್ಟ್ರಕ್ಕೆ, ಅರುಣಾಚಲ ಪ್ರದೇಶದ ರಾಜ್ಯಪಾಲರಾಗಿದ್ದ ನಿವೃತ್ತ ಬ್ರಿಗೇಡಿಯರ್ ಬಿ.ಡಿ.ಮಿಶ್ರಾ ಅವರನ್ನು ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ಆಗಿ ವರ್ಗಾಯಿಸಲಾಗಿದೆ.

ಅನುಸೂಯಿಯಾ ಉಯಿಕೆ ಅವರನ್ನು ಛತ್ತೀಸಗಢದಿಂದ ಮಣಿಪುರಕ್ಕೆ, ಲಾ ಗಣೇಶನ್ ಅವರನ್ನು ಮಣಿಪುರದಿಂದ ನಾಗಾಲ್ಯಾಂಡ್‌ಗೆ, ಫಗು ಚೌಹಾಣ್ ಅವರನ್ನು ಬಿಹಾರದಿಂದ ಮೇಘಾಲಯಕ್ಕೆ ಮತ್ತು ರಾಜೇಂದ್ರ ವಿಶ್ವನಾಥ್ ಅರಳೇಕರ್ ಅವರನ್ನು ಹಿಮಾಚಲ ಪ್ರದೇಶದಿಂದ ಬಿಹಾರಕ್ಕೆ ವರ್ಗಾವಣೆ ಮಾಡಲಾಗಿದೆ.

ಆಕ್ಷೇಪ: ನ್ಯಾಯಮೂರ್ತಿ ಅಬ್ದುಲ್ ನಜೀರ್ ಅವರ ನೇಮಕಕ್ಕೆ ಕಾಂಗ್ರೆಸ್, ಸಿಪಿಎಂ ಸಹಿತ ವಿವಿಧ ರಾಜಕೀಯ ಪಕ್ಷಗಳಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಈ ರೀತಿಯ ನೇಮಕಗಳು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಬಹುದೊಡ್ಡ ಬೆದರಿಕೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದ 65 ವರ್ಷದ ನಜೀರ್ ಅವರು 2017ರ ಫೆಬ್ರುವರಿ 17ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದಿದ್ದರು. ಈ ವರ್ಷದ ಜನವರಿ 4ರಂದು ಅವರು ನಿವೃತ್ತರಾಗಿದ್ದರು.


ನಜೀರ್ ಅವರು ಹಲವು ಸಾಂವಿಧಾನಿಕ ಪೀಠಗಳ ಭಾಗವಾಗಿದ್ದರು. ಅಯೋಧ್ಯೆಯಲ್ಲಿನ ರಾಮ ಜನ್ಮಭೂಮಿ ಹಾಗೂ ಬಾಬರಿ ಮಸೀದಿಗೆ ಸಂಬಂಧಿಸಿದ ವಿವಾದ ಕುರಿತು 2019ರಲ್ಲಿ ಸುಪ್ರೀಂ ಕೋರ್ಟ್ ಚಾರಿತ್ರಿಕ ತೀರ್ಪು ಪ್ರಕಟಿಸಿತ್ತು. ಆಗಿನ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೋಯ್ ನೇತೃತ್ವದ ಐವರು ಸದಸ್ಯರನ್ನೊಳಗೊಂಡ ಸಾಂವಿಧಾನಿಕ ನ್ಯಾಯಪೀಠದಲ್ಲಿ ನಜೀರ್ ಅವರೂ ಇದ್ದರು. ತ್ರಿವಳಿ ತಲಾಖ್, ಖಾಸಗಿತನದ ಹಕ್ಕು ಕೂಡ ಮೂಲಭೂತ ಹಕ್ಕು, ದಾಖಲಾತಿ ಹಾಗೂ ಸರ್ಕಾರಿ ಉದ್ಯೋಗದಲ್ಲಿ ಮರಾಠರಿಗೆ ಮೀಸಲಾತಿ ಕಲ್ಪಿಸಿ ತೀರ್ಪು ಪ್ರಕಟಿಸಿದ್ದ ಸುಪ್ರೀಂ ಕೋರ್ಟ್‌ನ ನ್ಯಾಯಪೀಠಗಳಲ್ಲೂ ಅವರಿದ್ದರು.

4ನೇ ಪುಟ ನೋಡಿ


ಎಸ್. ಅಬ್ದುಲ್ ನಜೀರ್


ಕೈವಲ್ಯ ತ್ರಿವಿಕ್ರಮ ಪರ್‌ನಾಯಕ್


ಲಕ್ಷ್ಮಣ ಪ್ರಸಾದ್ ಆಚಾರ್ಯ


ಸಿ.ಪಿ. ರಾಧಾಕೃಷ್ಣನ್


ಗುಲಾಬ್‌ಚಂದ್ ಕಟಾರಿಯಾ


ಶಿವಪ್ರತಾಪ್ ಶುಕ್ಲಾ

ಕೋಶಿಯಾರಿ, ಮಾಥುರ್ ರಾಜೀನಾಮೆ

ಮುಂಬೈ: ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಹಾಗೂ ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ಆರ್.ಕೆ.ಮಾಥುರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಇದನ್ನು ರಾಷ್ಟ್ರಪತಿ ಅಂಗೀಕರಿಸಿದ್ದಾರೆ.

80 ವರ್ಷದ ಕೋಶಿಯಾರಿ ಅವರು ಉದ್ಧವ್ ಠಾಕ್ರೆ ನೇತೃತ್ವದ ಮಹಾವಿಕಾಸ್ ಅಘಾಡಿ ಸರ್ಕಾರದ ಜೊತೆಗಿನ ಸಂಘರ್ಷದಿಂದಲೇ ಸದಾ ಸುದ್ದಿಯಲ್ಲಿದ್ದರು.

‘ಛತ್ರಪತಿ ಶಿವಾಜಿ ಮಹಾರಾಜ ಹಳೆಯ ಕಾಲದ ಐಕಾನ್’ ಎಂದು ಅವರು ಇತ್ತೀಚೆಗೆ ಹೇಳಿದ್ದರು. ಈ ಹೇಳಿಕೆ ವಿವಾದದ ಸ್ವರೂಪ ಪಡೆದುಕೊಂಡಿತ್ತು. ಅವರನ್ನು ರಾಜ್ಯಪಾಲರ ಸ್ಥಾನದಿಂದ ಕೆಳಗಿಳಿಸುವಂತೆ ವಿರೋಧ ಪಕ್ಷಗಳ ನಾಯಕರು ಕೇಂದ್ರದ ಮೇಲೆ ಒತ್ತಡ ಹೇರಿದ್ದರು. ಅವರ ಹೇಳಿಕೆಯಿಂದ ಏಕನಾಥ ಶಿಂದೆ–ದೇವೇಂದ್ರ ಫಡಣವೀಸ್ ಅವರ ಸರ್ಕಾರವೂ ಮುಜುಗರಕ್ಕೀಡಾಗಿತ್ತು.

ಮಾಥುರ್ ಅವರು ಇತ್ತೀಚೆಗೆ ಸಾರ್ವಜನಿಕರಿಂದ ಟೀಕೆಗೆ ಗುರಿಯಾಗಿದ್ದರು. ಶಿಕ್ಷಣ ಸುಧಾರಕ ಸೋನಮ್ ವಾಂಗ್‌ಚುಕ್ ಅವರು ಮಾಥುರ್ ವಿರುದ್ಧ ಕಿಡಿಕಾರಿದ್ದರು.

> **ನಜೀರ್ ಅವರನ್ನು ರಾಜ್ಯಪಾಲರನ್ನಾಗಿ ನೇಮಿಸಿರುವುದು ಈ ದೇಶದ ಸಾಂವಿಧಾನಿಕ ಮೌಲ್ಯಕ್ಕೆ ವಿರುದ್ಧವಾದುದು. ಇದು ಖಂಡನಾರ್ಹ ನಡೆ**
> **ಎ.ಎ.ರಹೀಂ**
> ರಾಜ್ಯಸಭೆ ಸದಸ್ಯ, ಸಿಪಿಎಂ ಮುಖಂಡ

ಇದೇ ಮೊದಲಲ್ಲ

ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ಕೆಲಸ ಮಾಡಿದ್ದವರು ರಾಜ್ಯಪಾಲರ ಹುದ್ದೆಗೆ ಏರಿರುವುದು ಇದೇ ಮೊದಲಲ್ಲ. ಈ ಹಿಂದೆಯೂ ಕೆಲವರು ಈ ಹುದ್ದೆಗೆ ನೇಮಕಗೊಂಡಿದ್ದರು.

ನಿವೃತ್ತ ನ್ಯಾಯಮೂರ್ತಿ ಎಸ್. ಫಜಲ್ ಅಲಿ ಅವರು ಒಡಿಶಾ (1952–54) ಮತ್ತು ಅಸ್ಸಾಂ (1956–59) ರಾಜ್ಯಪಾಲರಾಗಿ ಕೆಲಸ ಮಾಡಿದ್ದರು. ನಿವೃತ್ತ ನ್ಯಾಯಮೂರ್ತಿ ಫಾತಿಮಾ ಬೀವಿ ಅವರು 1997ರಲ್ಲಿ ತಮಿಳುನಾಡು ರಾಜ್ಯಪಾಲರಾಗಿ ನೇಮಕಗೊಂಡಿದ್ದರು. ನಿವೃತ್ತ ಮುಖ್ಯ ನ್ಯಾಯಮೂರ್ತಿ ಪಿ.ಸದಾಶಿವಂ ಅವರು 2014ರ ಸೆಪ್ಟೆಂಬರ್‌ನಿಂದ 2019ರವರೆಗೆ ಕೇರಳ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದರು.



ಜೆಮಿಮಾ ಮಿಂಚು; ಭಾರತ ಜಯಭೇರಿ

ದಕ್ಷಿಣ ಆಫ್ರಿಕಾದ ಕೇಪ್‌ಟೌನ್‌ನಲ್ಲಿ ಭಾನುವಾರ ನಡೆದ ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ ಪಾಕಿಸ್ತಾನದ ಎದುರು ಭಾರತ ತಂಡವು 7 ವಿಕೆಟ್‌ಗಳಿಂದ ಜಯಿಸಿತು. ಗೆಲುವಿನ ರೂವಾರಿ ಜೆಮಿಮಾ ರಾಡ್ರಿಗಸ್ (ಔಟಾಗದೆ 53; 38ಎಸೆತ, 8ಬೌಂಡರಿ) ಅವರು ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಸುದ್ದಿ 10

ಏರೋ ಇಂಡಿಯಾಕ್ಕೆ ಇಂದು ಪ್ರಧಾನಿ ಚಾಲನೆ

ವೈಮಾನಿಕ ಶಕ್ತಿ ಪ್ರದರ್ಶನಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ವೈಮಾನಿಕ ಉದ್ಯಮ ವಲಯದ ಅತಿ ದೊಡ್ಡ ಪ್ರದರ್ಶನ ‘ಏರೋ ಇಂಡಿಯಾ–2023’ ಸೋಮವಾರ ಆರಂಭವಾಗಲಿದ್ದು, ಭಾರತದ ರಕ್ಷಣಾ ಕ್ಷೇತ್ರದ ಸಾಮರ್ಥ್ಯಕ್ಕೂ ಸಾಕ್ಷಿಯಾಗಲಿದೆ.

ಒಟ್ಟು 98 ದೇಶಗಳ 811 ಪ್ರದರ್ಶಕರು ಭಾಗವಹಿಸಲಿದ್ದಾರೆ. ₹75 ಸಾವಿರ ಕೋಟಿ ವಹಿವಾಟಿನ 251 ರಕ್ಷಣಾ ಉಪಕರಣಗಳು, ಯುದ್ಧ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳಿಗೆ ಸಂಬಂಧಿಸಿದ ಒಪ್ಪಂದಗಳಿಗೆ ವಿವಿಧ ಕಂಪನಿಗಳು ಸಹಿ ಹಾಕುವ ನಿರೀಕ್ಷೆ ಇದೆ.

ಫೆ.13ರಿಂದ 17ರವರೆಗೆ ಯಲಹಂಕ ವಾಯುನೆಲೆಯ ಒಟ್ಟು 35 ಸಾವಿರ ಚದರ ಮೀಟರ್ ಪ್ರದೇಶದಲ್ಲಿ ನಡೆಯಲಿರುವ ‘ಏರೋ ಇಂಡಿಯಾ–2023’ ಅನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಬೆಳಿಗ್ಗೆ 9.30ಕ್ಕೆ ಉದ್ಘಾಟಿಸಲಿದ್ದಾರೆ.

1996ರಲ್ಲಿ ಆರಂಭವಾದ ವೈಮಾನಿಕ ಕ್ಷೇತ್ರದ ಶಕ್ತಿ ಪ್ರದರ್ಶನವು ದ್ವೈವಾರ್ಷಿಕವಾಗಿ ನಡೆಯುತ್ತಿದ್ದು, ಇದು 14ನೇ ಆವೃತ್ತಿ. ಏಷ್ಯಾದಲ್ಲೇ ಅತಿ ದೊಡ್ಡ ರಕ್ಷಣಾ ಮತ್ತು ವೈಮಾನಿಕ ಪ್ರದರ್ಶನ ಇದಾಗಿದ್ದು, ದೇಶದ ಯುದ್ಧ ವಿಮಾನಗಳು, ಹೆಲಿಕಾಪ್ಟರ್‌ಗಳು, ರಕ್ಷಣಾ ಉಪಕರಣಗಳು ಮತ್ತು ವೈಮಾನಿಕ ಕ್ಷೇತ್ರದ ಸಾಧನೆಗಳನ್ನು ಬಿಂಬಿಸಲಿದೆ. ವೈಮಾನಿಕ ಕ್ಷೇತ್ರದ ಉದ್ಯಮದ ಸಾಮರ್ಥ್ಯಗಳು, ಉತ್ಪನ್ನಗಳು ಮತ್ತು ಸೇವೆಗಳ ಪ್ರದರ್ಶನಕ್ಕೆ ಇದು ಅತಿ ದೊಡ್ಡ ವೇದಿಕೆಯಾಗಿದೆ.

32 ದೇಶಗಳ ರಕ್ಷಣಾ ಸಚಿವರು, ಜಾಗತಿಕ ಮತ್ತು ಭಾರತದ 73 ಪ್ರಮುಖ ಕಂಪನಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಸಿಇಒ) ಭಾಗವಹಿಸಲಿದ್ದು, ಮಹತ್ವದ ಚರ್ಚೆಗಳು ಮತ್ತು ಒಪ್ಪಂದಗಳು ನಡೆಯುವ ಸಾಧ್ಯತೆ ಇದೆ.

ಪ್ರಮುಖ ಅಂಶಗಳು

- ಫೆ.13ರಿಂದ 15ರವರೆಗೆ ವ್ಯಾಪಾರ–ವಹಿವಾಟು ದಿನಗಳು
- ಫೆ.16 ಮತ್ತು 17ರಂದು ಸಾರ್ವಜನಿಕರಿಗೆ ಅವಕಾಶ
- 32 ದೇಶಗಳ ರಕ್ಷಣಾ ಸಚಿವರು ಭಾಗಿ
- 29 ದೇಶಗಳ ವಾಯುಪಡೆ ಮುಖ್ಯಸ್ಥರು, 73 ಸಿಇಒಗಳು
- ಭಾರತದ 701 ಮತ್ತು ವಿದೇಶದ 110 ಪ್ರದರ್ಶಕರು ಭಾಗಿ
- ವೈಮಾಂತರಿಕ್ಷ ಮತ್ತು ರಕ್ಷಣಾ ಕ್ಷೇತ್ರದ ರಕ್ಷಣಾ ಕಂಪನಿಗಳು, ಎಂಎಸ್‌ಎಂಇಗಳು, ನವೋದ್ಯಮಗಳಿಂದ ತಂತ್ರಜ್ಞಾನ ಪ್ರದರ್ಶನ
- ಕರ್ನಾಟಕದ ಪ್ರತ್ಯೇಕ ಪೆವಿಲಿಯನ್. ರಾಜ್ಯದಲ್ಲಿ ವಿಪುಲ ಅವಕಾಶಗಳ ಅನಾವರಣ

4ನೇ ಪುಟ ನೋಡಿ
ಇನ್ನೊಂದು ಸುದ್ದಿ 3B

ಹದಗೆಟ್ಟ ರಸ್ತೆ, ಕೆಟ್ಟು ನಿಂತ ಆಂಬುಲೆನ್ಸ್: ನರಳಿದ ಗರ್ಭಿಣಿ

ಪ್ರಜಾವಾಣಿ ವಾರ್ತೆ

ಕಳಸ (ಚಿಕ್ಕಮಗಳೂರು): ಹದಗೆಟ್ಟ ರಸ್ತೆಯಿಂದಾಗಿ ಆಂಬುಲೆನ್ಸ್ ಕೆಟ್ಟು ನಿಂತು, ಗರ್ಭಿಣಿಯೊಬ್ಬರು ಭಾನುವಾರ ಯಾತನೆ ಅನುಭವಿಸಿದರು.

ಗರ್ಭಿಣಿಯನ್ನು ಹೆರಿಗೆಗಾಗಿ ಕೊಪ್ಪದ ಆಸ್ಪತ್ರೆಗೆ ‘108’ ಆಂಬುಲೆನ್ಸ್ ನಲ್ಲಿ ಕರೆದೊಯ್ಯಲಾಗುತ್ತಿತ್ತು. ಹಳುವಳ್ಳಿ ಬಳಿ ಆಕ್ಸೆಲ್ ತುಂಡಾಗಿ ನಿಂತಿತು. ಅದನ್ನು ಕಳಸಕ್ಕೆ ಮತ್ತೊಂದು ವಾಹನದ ಸಹಾಯದಿಂದ ಎಳೆದೊಯ್ದು, ದುರಸ್ತಿ ಮಾಡಿಸಲಾಯಿತು. ಇದಕ್ಕಾಗಿ ಒಂದು ಗಂಟೆ ಹಿಡಿಯಿತು.

ದುರಸ್ತಿಗೊಂಡ ಆಂಬುಲೆನ್ಸ್ ಸ್ವಲ್ಪ ದೂರ ಸಾಗುವಷ್ಟರಲ್ಲಿ ಮತ್ತೆ ಕೆಟ್ಟು ನಿಂತಿತು. ಬಾಳೆಹೊನ್ನೂರಿನಿಂದ ಮತ್ತೊಂದು ಆಂಬುಲೆನ್ಸ್ ಬರಲು ಒಂದು ಗಂಟೆ ಹಿಡಿಯಿತು. ಈ ಅವಧಿಯಲ್ಲಿ, ಕೆಟ್ಟು ನಿಂತಿದ್ದ ಆಂಬುಲೆನ್ಸ್‌ನಲ್ಲೇ ಗರ್ಭಿಣಿ ನರಳುವಂತಾಯಿತು. ನಂತರ ಅವರನ್ನು ಕೊಪ್ಪದ ಆಸ್ಪತ್ರೆಗೆ ಕರೆದೊಯ್ಯಲಾಯಿತು.

‘ರೋಗಿಗಳು ಮತ್ತು ಬಡವರಿಗೆ ನೆರವಾಗುವುದನ್ನು ಬಿಟ್ಟು ರಾಜಕಾರಣಿಗಳು ‘ಕಳಸ ಉತ್ಸವ’ ಆಯೋಜನೆಯಲ್ಲಿ ನಿರತರಾಗಿದ್ದಾರೆ’ ಎಂದು ಪಂಚಾಯಿತಿ ಮಾಜಿ ಸದಸ್ಯ ರಾಮಮೂರ್ತಿ ಟೀಕಿಸಿದರು.


ಕಳಸ ಸಮೀಪದ ಹಳುವಳ್ಳಿಯಲ್ಲಿ ಕೆಟ್ಟು ನಿಂತ ಆಂಬುಲೆನ್ಸ್‌ನಲ್ಲಿ ಗರ್ಭಿಣಿ ನರಳಿದರು

ತೆಂಗು ಬೆಳೆಗೆ ಕಪ್ಪುತಲೆ ಹುಳು ಕಾಟ

ಬೆಂಗಳೂರು: ತುಮಕೂರು, ದಾವಣಗೆರೆ, ಚಿತ್ರದುರ್ಗ, ಹಾಸನ, ಮೈಸೂರು ಸೇರಿದಂತೆ ರಾಜ್ಯದ ವಿವಿಧ ಪ್ರದೇಶಗಳ ಪ್ರಮುಖ ವಾಣಿಜ್ಯ ಬೆಳೆಯಾದ ತೆಂಗಿಗೆ ಕಪ್ಪುತಲೆಯ ಹುಳು ರೋಗ ಬಾಧಿಸುತ್ತಿದೆ. ಇಡೀ ತೆಂಗಿನ ತೋಟಗಳಿಗೆ ಈ ರೋಗ ಆವರಿಸಿಲ್ಲವಾದರೂ ಹಲವು ಮರಗಳಿಗೆ ಹಾನಿಯಾಗಿದೆ. 4

ದೆಹಲಿ–ಮುಂಬೈ ಹೆದ್ದಾರಿ: ಮೊದಲ ಹಂತ ಉದ್ಘಾಟಿಸಿದ ಪ್ರಧಾನಿ

ದೌಸಾ (ಪಿಟಿಐ): ದೆಹಲಿ-ಮುಂಬೈ ಎಕ್ಸ್‌ಪ್ರೆಸ್‌ವೇನ 246 ಕಿ.ಮೀ ಉದ್ದದ ಭಾಗವನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ದೌಸಾದಲ್ಲಿ ಉದ್ಘಾಟಿಸಿದರು. ದೆಹಲಿ-ದೌಸಾ-ಲಾಲ್ಸೋಟ್ ಮಾರ್ಗವು ದೆಹಲಿ ಮತ್ತು ಜೈಪುರ ನಡುವಿನ ಪ್ರಯಾಣದ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. 9

ವೈದ್ಯಕೀಯ: 4 ವರ್ಷದಲ್ಲಿ ಯುಜಿಯಷ್ಟೇ ಪಿಜಿ ಸೀಟು

ಗಾಂಧಿನಗರ (ಪಿಟಿಐ): ಪದವಿ ಹಾಗೂ ಸ್ನಾತಕೋತ್ತರ ಪದವಿ ವೈದ್ಯಕೀಯ ಸೀಟುಗಳನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ಸಮಬಲಕ್ಕೆ ತರಲು ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಇದರಿಂದ ಎಂಬಿಬಿಎಸ್ ಪದವೀಧರರು ಪಿಜಿ ಕೋರ್ಸ್‌ಗಳನ್ನು ಸುಲಭವಾಗಿ ಮುಂದುವರಿಸಲು ಸಾಧ್ಯವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಶನಿವಾರ ಹೇಳಿದ್ದಾರೆ.

ಇಲ್ಲಿ ನಡೆದ ಗ್ಲೋಬಲ್ ಅಸೋಸಿಯೇಷನ್ ಆಫ್ ಫಿಜಿಷಿಯನ್ಸ್ ಆಫ್ ಇಂಡಿಯನ್ ಆರಿಜಿನ್‌ನ (ಜಿಎಪಿಐಒ) 13ನೇ ವಾರ್ಷಿಕ ಸಮ್ಮೇಳನದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಸಂಶೋಧನೆ ಮತ್ತು ಆಸ್ಪತ್ರೆಗಳನ್ನು ತೆರೆಯಲು ಅನಿವಾಸಿ ಭಾರತೀಯ ಆರೋಗ್ಯ ವೃತ್ತಿಪರರಿಗೆ ಆಹ್ವಾನ ನೀಡಿದರು.

ಈ ವರ್ಷದ ಏಪ್ರಿಲ್–ಮೇನಲ್ಲಿ ನಡೆಯಲಿರುವ ‘ಹೀಲ್ ಬೈ ಇಂಡಿಯಾ’, ‘ಹೀಲ್ ಇನ್ ಇಂಡಿಯಾ’ ಎಕ್ಸ್‌ಪೋದಲ್ಲಿ 70ಕ್ಕೂ ಹೆಚ್ಚು ದೇಶಗಳು ‘ಆಸ್ಪತ್ರೆಯಿಂದ ಆಸ್ಪತ್ರೆಗೆ’, ‘ದೇಶದಿಂದ ದೇಶಕ್ಕೆ’ ಮತ್ತು ‘ದೇಶದಿಂದ ಆಸ್ಪತ್ರೆಗೆ’ ಎಂಬ ಒಪ್ಪಂದಕ್ಕೆ ಸಹಿ ಹಾಕಲಿವೆ ಎಂದರು.

‘ಆಸ್ಪತ್ರೆಗಳನ್ನು ತೆರೆದಾಗ ನಮಗೆ ವೈದ್ಯರ ಅಗತ್ಯ ಇರುತ್ತದೆ. 8 ವರ್ಷದ ಹಿಂದೆ ಭಾರತದಲ್ಲಿ 51,000 ಎಂಬಿಬಿಎಸ್ ಸೀಟುಗಳಿದ್ದವು. ಆದರೆ ಈಗ 1,00,226ಕ್ಕೆ ಏರಿಕೆಯಾಗಿದೆ. ಸ್ನಾತಕೋತ್ತರ ಸೀಟುಗಳು 34,000 ದಿಂದ 64,000ಕ್ಕೆ ಏರಿಕೆ ಆಗಿವೆ’ ಎಂದರು.

ಎಂಬಿಬಿಎಸ್ ಯುಜಿ ಮತ್ತು ಪಿಜಿ ಸೀಟುಗಳನ್ನು ಸಮಬಲಕ್ಕೆ ತರುವ ಗುರಿ ಹೊಂದಿದ್ದೇವೆ. ಎಲ್ಲ ವೈದ್ಯರು ಅತ್ಯುತ್ತಮ ಆರೋಗ್ಯ ಶಿಕ್ಷಣ ಪಡೆಯಬೇಕು. 'ಹೀಲ್ ಇನ್ ಇಂಡಿಯಾ' ಅಡಿಯಲ್ಲಿ, ‘ಜಗತ್ತನ್ನು ಭಾರತಕ್ಕೆ ಆಹ್ವಾನಿಸುವುದು’ ಮತ್ತು ‘ಕೈಗೆಟುಕುವ ಮತ್ತು ಗುಣಮಟ್ಟದ ಆರೋಗ್ಯ ರಕ್ಷಣೆ, ಕ್ಷೇಮ ಮತ್ತು ಸಾಂಪ್ರದಾಯಿಕ ಔಷಧವನ್ನು ನೀಡುವ’ ಯೋಜನೆ ಇದೆ. ಇದರ ಪ್ರಕ್ರಿಯೆ ಪ್ರಾರಂಭವಾಗಿದೆ ಮತ್ತು ಇದಕ್ಕೆ ಗುಜರಾತ್ ಅತ್ಯುತ್ತಮ ತಾಣವಾಗಿದೆ ಎಂದು ಮಾಂಡವಿಯಾ ಹೇಳಿದರು.

ಒಳ ಪುಟಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



ವಿಧಾನಸಭೆ ಚುನಾವಣೆ: ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಲು ತಯಾರಿ

‘ಕೈ’ ಟಿಕೆಟ್: ಅಖಾಡಕ್ಕಿಳಿದ ಸ್ಕ್ರೀನಿಂಗ್ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಲು ಮೋಹನ್ ಪ್ರಕಾಶ್ ನೇತೃತ್ವದಲ್ಲಿ ಎಐಸಿಸಿ ರಚಿಸಿರುವ ಸ್ಕ್ರೀನಿಂಗ್ ಸಮಿತಿ ಅಖಾಡಕ್ಕಿಳಿದಿದ್ದು, ಕೆಪಿಸಿಸಿ ಕಾರ್ಯಾಧ್ಯಕ್ಷರು ಮತ್ತು ಇತರ ಪ್ರಮುಖರ ಜೊತೆ ಭಾನುವಾರ ಪ್ರತ್ಯೇಕ ಸಭೆಗಳನ್ನು ನಡೆಸಿತು. ನೀರಜ್ ಡಾಂಗಿ, ಮೊಹಮ್ಮದ್ ಜಾವೇದ್, ಸಪ್ತಗಿರಿ ಉಲಾಕ ಸಮಿತಿ ಸದಸ್ಯರಾಗಿದ್ದಾರೆ.

ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಈಶ್ವರ ಖಂಡ್ರೆ, ಸಲೀಂ ಅಹ್ಮದ್, ಆರ್. ಧ್ರುವನಾರಾಯಣ, ರಾಜ್ಯದ ಉಸ್ತುವಾರಿ ಹೊಂದಿರುವ ಎಐಸಿಸಿ ಕಾರ್ಯದರ್ಶಿಗಳಾದ ಪಿ.ಸಿ.ವಿಷ್ಣುನಾಥ್, ರೋಜಿ ಜಾನ್, ಮಯೂರ ಜಯಕುಮಾರ್, ಶ್ರೀಧರ್ ಬಾಬು, ಅಭಿಷೇಕ್ ದತ್, ಪಕ್ಷದ ಹಿರಿಯ ಮುಖಂಡರಾದ ಮಾರ್ಗರೆಟ್ ಆಳ್ವ, ವೀರಪ್ಪ ಮೊಯಿಲಿ ಅವರಿಂದ ಸಮಿತಿ ಗೋಪ್ಯವಾಗಿ ಅಭಿಪ್ರಾಯ ಸಂಗ್ರಹಿಸಿತು.

ಈ ವೇಳೆ ಮಾತನಾಡಿದ ಸಲೀಂ ಅಹ್ಮದ್, ‘ಟಿಕೆಟ್ ಹಂಚಿಕೆ ಪ್ರಕ್ರಿಯೆ ಆರಂಭವಾಗಿದೆ. ನಾವು (ಕಾರ್ಯಾಧ್ಯಕ್ಷರು) ರಾಜ್ಯದಾದ್ಯಂತ ಸುತ್ತಾಡಿ ಸಂಗ್ರಹಿಸಿದ ಮಾಹಿತಿಗಳನ್ನು ಸ್ಕ್ರೀನಿಂಗ್ ಸಮಿತಿ ಪರಾಮರ್ಶೆ ನಡೆಸಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಸೇರಿ ಪ್ರಮುಖರ ಜೊತೆ ಸೋಮವಾರ ಸಭೆ ನಡೆಯಲಿದೆ. ಫೆ.14ರಂದು ಟಿಕೆಟ್ ಆಕಾಂಕ್ಷಿಗಳ ಜೊತೆ ಸಮಾಲೋಚನೆ ನಡೆಸಲಿದೆ’ ಎಂದರು.

‘ಮುಖಂಡರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಸಮಿತಿ ಅಂತಿಮಗೊಳಿಸಲಿದೆ. ಬಳಿಕ ಪಟ್ಟಿಯನ್ನು ಕೇಂದ್ರ ಚುನಾವಣಾ ಸಮಿತಿಗೆ ಸಲ್ಲಿಸಲಿದೆ. ಈ ತಿಂಗಳ ಅಂತ್ಯದೊಳಗೆ ಮೊದಲ ಪಟ್ಟಿ ಪ್ರಕಟವಾಗುವ ನಿರೀಕ್ಷೆಯಿದೆ’ ಎಂದೂ ತಿಳಿಸಿದರು.

ಲಿಂಗಾಯತ ಸಮುದಾಯಕ್ಕೆ ಹೆಚ್ಚು ಟಿಕೆಟ್ ನೀಡುವಂತೆ ಪಕ್ಷದ ಕೆಲವು ನಾಯಕರ ಬೇಡಿಕೆ ಕುರಿತಂತೆ ಈಶ್ವರ ಖಂಡ್ರೆ, ‘ಕಾಂಗ್ರೆಸ್ ಪಕ್ಷಕ್ಕೆ ಲಿಂಗಾಯತ ಸಮುದಾಯ ಪ್ರತಿ ಬಾರಿ ಬೆನ್ನೆಲುಬಾಗಿ ನಿಂತಿದೆ. ಸಮುದಾಯದ ಅರ್ಹರಿಗೆ ಟಿಕೆಟ್ ಕೊಡುವುದು ಸೂಕ್ತ’ ಎಂದರು.

‘ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಜಿಲ್ಲೆಗಳ ವ್ಯಾಪ್ತಿಯ ಕ್ಷೇತ್ರಗಳಲ್ಲಿನ ಪಕ್ಷದ ಸ್ಥಿತಿಗತಿ ಕುರಿತು ರಾಮಲಿಂಗಾರೆಡ್ಡಿ ಅವರಿಂದ ಸಮಿತಿ ಮಾಹಿತಿ ಪಡೆಯಿತು. ಕ್ಷೇತ್ರಾವಾರು ಪರಿಸ್ಥಿತಿ, ಎಷ್ಟು ಕ್ಷೇತ್ರಗಳಲ್ಲಿ ಸುಲಭವಾಗಿ ಗೆಲ್ಲಬಹುದು, ಎಲ್ಲಿ ನೇರ ಪೈಪೋಟಿಯಿದೆ, ಯಾರಿಗೆ ಟಿಕೆಟ್ ನೀಡಿದರೆ ಗೆಲ್ಲಬಹುದು ಎಂಬ ಬಗ್ಗೆ ಅಭಿಪ್ರಾಯ ಸಂಗ್ರಹಿಸಿದೆ’ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಲಿಂಗಾಯತ ಮುಖಂಡರ ಸಭೆ ಇಂದು

‘ಶಾಮನೂರು ಶಿವಶಂಕರಪ್ಪ, ಎಂ.ಬಿ.ಪಾಟೀಲ ಮತ್ತು ಈಶ್ವರ ಖಂಡ್ರೆ ನೇತೃತ್ವದಲ್ಲಿ ಕೆಪಿಸಿಸಿ ವೀರಶೈವ ಲಿಂಗಾಯತ ರಾಜ್ಯ ನಾಯಕರ, ಟಿಕೆಟ್ ಆಕಾಂಕ್ಷಿಗಳ ಮತ್ತು ಮುಖಂಡರ ಸಭೆ ಸೋಮವಾರ (ಫೆ.13) ನಡೆಯಲಿದೆ. ಬೆಂಗಳೂರಿನ ಚಾಲುಕ್ಯ ವೃತ್ತದ ಬಳಿ ಇರುವ ಬಸವ ಸಮಿತಿ ಸಭಾಂಗಣದಲ್ಲಿ ಸಂಜೆ 7.30ಕ್ಕೆ ಈ ನಡೆಯಲಿದೆ’ ಎಂದು ವೀರಶೈವ ಮಹಾಸಭೆಯ ಸಂವಹನ ವಿಭಾಗದ ಅಧ್ಯಕ್ಷ ಅನಿಲ್ ಕುಮಾರ್ ತಡಕಲ್ ತಿಳಿಸಿದ್ದಾರೆ.

ಮಾರ್ಚ್‌ನಲ್ಲಿ 4 ರಥಯಾತ್ರೆ: ಬಿಜೆಪಿ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ಮೇಲೆ ಕಣ್ಣಿಟ್ಟು ರಾಜ್ಯದ ನಾಲ್ಕು ದಿಕ್ಕುಗಳಿಂದ ಮಾರ್ಚ್ ಮೊದಲ ವಾರ ಏಕಕಾಲಕ್ಕೆ ರಥಯಾತ್ರೆ ಕೈಗೊಳ್ಳಲು ಬಿಜೆಪಿ ನಿರ್ಧರಿಸಿದೆ. ಇದಕ್ಕಾಗಿ ಸಿದ್ಧತೆ ಆರಂಭವಾಗಿದ್ದು, ಯಾತ್ರೆ ನಾಲ್ಕು ತಂಡಗಳಲ್ಲಿ 20–25 ದಿನ ಕಾಲ ನಡೆಯಲಿದೆ.

ಈ ರಥಯಾತ್ರೆಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಳಿನ್‌ಕುಮಾರ್ ಕಟೀಲ್, ಅರುಣ್‌ಸಿಂಗ್, ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ್, ಕೆ.ಎಸ್. ಈಶ್ವರಪ್ಪ ಇರಲಿದ್ದು, ಅವರ ಜತೆ ರಾಜ್ಯ ಮತ್ತು ಕೇಂದ್ರದ ಸಚಿವರು ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಯಾತ್ರೆಯ ವಿವರ ಎರಡು ದಿನಗಳಲ್ಲಿ ಹೊರಬೀಳಲಿದೆ. 224 ವಿಧಾನಸಭಾ ಕ್ಷೇತ್ರಗಳಿಗೂ ರಥಯಾತ್ರೆ ಪ್ರವೇಶಿಸಲಿದೆ. ಅಂತಿಮವಾಗಿ ನಾಲ್ಕು ಯಾತ್ರೆಗಳ ಮಹಾಸಂಗಮ ಮಧ್ಯ ಕರ್ನಾಟಕದ ದಾವಣಗೆರೆಯಲ್ಲಿ ನಡೆಯಲಿದೆ. ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವಲ್ಲಿ ಈ ಯಾತ್ರೆಗಳು ನಿರ್ಣಾಯಕವಾಗಲಿವೆ. ಈ ಯಾತ್ರೆಯ ಮೂಲಕ ಬಿಜೆಪಿ ಪರವಾದ ಅಲೆ ಎಬ್ಬಿಸಲಾಗುವುದು. ವಿಜಯ ಸಂಕಲ್ಪದ ಹೆಸರಿನಲ್ಲೇ ಯಾತ್ರೆ ನಡೆಯಲಿದೆ’ ಎಂದು ಬಿಜೆಪಿಯ ಮುಖಂಡರೊಬ್ಬರು ಹೇಳಿದರು.

ಅಲ್ಲದೇ ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ರಾಜ್ಯವ್ಯಾಪಿ ಕಾರ್ಯಕರ್ತರ ಸಭೆಗಳನ್ನು ಆರಂಭಿಸಿದ್ದಾರೆ. ಕಾರ್ಯಕರ್ತರನ್ನು ಚುನಾವಣೆಗೆ ಅಣಿಗೊಳಿಸುವುದು ಇದರ ಉದ್ದೇಶ. ಇದು ಕೂಡಾ ಮುಂದುವರೆಯಲಿದೆ. ಬೂತ್‌ಮಟ್ಟದಲ್ಲಿ ಪರಿಣಾಮಕಾರಿಯಾಗಿ ಕಾರ್ಯಕರ್ತರು ಮತ್ತು ಮತದಾರರನ್ನು ತಲುಪಲು ಮಾರ್ಗದರ್ಶನ ನೀಡಲಿದ್ದಾರೆ ಎಂದು ಅವರು ತಿಳಿಸಿದರು.

ಬಳ್ಳಾರಿ ವಿಭಾಗದಲ್ಲಿ ಕಟೀಲ್ ಪ್ರವಾಸ: ನಳಿನ್‌ಕುಮಾರ್ ಕಟೀಲ್ ಅವರು ಇದೇ 13 ಮತ್ತು 14ರಂದು ಬಳ್ಳಾರಿ ವಿಭಾಗದಲ್ಲಿ ವಿಜಯಸಂಕಲ್ಪ ಯಾತ್ರೆ ನಡೆಸಲಿದ್ದು, ಆ ಬಳಿಕ ಅವರು ಪೇಜ್ ಪ್ರಮುಖರ ಸಮಾವೇಶದಲ್ಲಿ ಪಾಲ್ಗೊಳ್ಳುವರು.

2 ವರ್ಷದ ಹಿಂದೆ ₹19.53 ಕೋಟಿ ಬಿಡುಗಡೆ; 20 ಉದ್ಯಾನ ಅಭಿವೃದ್ಧಿ ಮರೆತ ಪಾಲಿಕೆ

ಹಸಿರು ಹೊದಿಕೆಗೆ ಬಿಬಿಎಂಪಿ ನಿರ್ಲಕ್ಷ್ಯ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಾಮಗಾರಿಗಳಿಗೆ ಅನುದಾನ ಇಲ್ಲ ಎಂದು ಬಿಬಿಎಂಪಿಯಲ್ಲಿ ಸಾಕಷ್ಟು ಯೋಜನೆಗಳು ನನೆಗುದಿಗೆ ಬೀಳುತ್ತಿರುತ್ತವೆ. ಆದರೆ, ಕೇಂದ್ರದಿಂದ ಅನುದಾನ ಬಿಡುಗಡೆಯಾಗಿ ಎರಡು ವರ್ಷ ಕಳೆದರೂ ಪಾಲಿಕೆ ಅದನ್ನು ಬಳಸಿ ಉದ್ಯಾನಗಳನ್ನು ಅಭಿವೃದ್ಧಿಪಡಿಸಿಲ್ಲ. ಇದರಿಂದಾಗಿ 'ಹಸಿರು ಹೊದಿಕೆ ವೃದ್ಧಿ' ಯೋಜನೆ ನಿರ್ಲಕ್ಷ್ಯಕ್ಕೆ ಒಳಗಾಗಿದೆ.

ಕೇಂದ್ರ ಸರ್ಕಾರ 2020–21ನೇ ಸಾಲಿನಲ್ಲಿ ₹19.53 ಕೋಟಿ ಅನುದಾನವನ್ನು ಬಿಬಿಎಂಪಿ ತೋಟಗಾರಿಕೆ ಇಲಾಖೆಗೆ ಬಿಡುಗಡೆ ಮಾಡಿದೆ. ಬಿಬಿಎಂಪಿ ವ್ಯಾಪ್ತಿಯ ಉದ್ಯಾನಗಳಲ್ಲಿ ಹೊಸದಾಗಿ ಗಿಡಗಳನ್ನು ನೆಡುವುದು ಸೇರಿದಂತೆ ಅಭಿವೃದ್ಧಿ ಕಾಮಗಾರಿ, ರಸ್ತೆ ವಿಭಜಕಗಳಲ್ಲಿ ಗಿಡಗಳನ್ನು ನೆಟ್ಟು, ಬೆಳೆಸಿ ಹಸಿರು ಹೊದಿಕೆ ಹೆಚ್ಚುವಂತೆ ಮಾಡುವುದು ಈ ಅನುದಾನದ ಉದ್ದೇಶ. ಟೆಂಡರ್ ಪ್ರಕ್ರಿಯೆ ಮುಗಿಸಿ, ಅನುದಾನವನ್ನೂ ಪಡೆದು ಪಾಲಿಕೆ ಸುಮ್ಮನಾಗಿದೆ.

ಕೇಂದ್ರ ಅನುದಾನದಲ್ಲಿ ₹10.67 ಕೋಟಿಯನ್ನು 20 ಉದ್ಯಾನಗಳ ಅಭಿವೃದ್ಧಿಗೆ ಕಾಮಗಾರಿಗಳನ್ನು ನಿಗದಿ ಮಾಡಿ ಟೆಂಡರ್ ಅಂತಿಮಗೊಳಿಸಲಾಗಿದೆ. ₹6.32 ಕೋಟಿ ವೆಚ್ಚದಲ್ಲಿ ನಗರದ 15 ರಸ್ತೆಗಳ ವಿಭಜಕಗಳಲ್ಲಿ ಗಿಡ ನೆಟ್ಟು ಪೋಷಿಸುವುದಕ್ಕೆ ವಿನಿಯೋಗಿಸಲಾಗುತ್ತದೆ. ಇನ್ನುಳಿದ ಹಣವನ್ನು, ಇಂದಿರಾನಗರದ 12 ಅಡ್ಡರಸ್ತೆಯಲ್ಲಿರುವ ಉದ್ಯಾನದಲ್ಲಿ 'ಮಿನಿ ಫಾರೆಸ್ಟ್' ಅಭಿವೃದ್ಧಿ, ವೆಸ್ಟ್ ಆಫ್ ಕಾರ್ಡ್ ರಸ್ತೆ ಸೌಂದರ್ಯೀಕರಣ, ಮೂರು ಉದ್ಯಾನಗಳ ನಿರ್ವಹಣೆ, ಗೊಟ್ಟಿಗೆರೆ ಉದ್ಯಾನದಲ್ಲಿ ಕೊಳವೆ ಬಾವಿಗೆ ಟೆಂಡರ್ ಅಂತಿಮಗೊಳಿಸಲಾಗಿದೆ.

ಒಣಗಲು ಬಿಡಬೇಡಿ: 'ಬಿಬಿಎಂಪಿ ಕೋಟ್ಯಂತರ ರುಪಾಯಿಗಳನ್ನು ಉದ್ಯಾನಗಳಿಗೆ ವೆಚ್ಚ ಮಾಡುತ್ತದೆ. ಆದರೆ, ಅವುಗಳ ನಿರ್ವಹಣೆಯನ್ನು ಸರಿಯಾಗಿ ಮಾಡುವುದಿಲ್ಲ. ಗಿಡಗಳನ್ನು ನೆಟ್ಟರಷ್ಟೇ ಸಾಲದು, ಅವು ಮರವಾಗುವವರೆಗೆ ಪೋಷಿಸಬೇಕು. ಗಿಡಗಳನ್ನು ಒಣಗಲು ಬಿಡಬೇಡಿ, ಬೆಳೆಸಿ, ಪೋಷಿಸಿ. ಉದ್ಯಾನಗಳಲ್ಲಿ ಅಲಂಕಾರಿಕ ಗಿಡಗಳು ಕಡಿಮೆಯಾಗಲಿ' ಎಂದು ರಾಜರಾಜೇಶ್ವರಿನಗರದ ಪರಿಸರ ಕಾರ್ಯಕರ್ತ ಟಿ.ಇ. ಶ್ರೀನಿವಾಸ್ ಒತ್ತಾಯಿಸಿದ್ದಾರೆ.

ಸರ್ಕಾರದ ಅನುಮತಿಯತ್ತ ಚಿತ್ತ: 'ಕೇಂದ್ರ ಸರ್ಕಾರದ ಅನುದಾನದಿಂದ ಉದ್ಯಾನ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ರಾಜ್ಯ ಸರ್ಕಾರಕ್ಕೆ ಮಾಹಿತಿ ಸಲ್ಲಿಸಲಾಗಿದ್ದು, ಅಲ್ಲಿಂದ ಸಮ್ಮತಿ ಬಂದ ಕೂಡಲೇ ಜಾಬ್‌ಕೋಡ್ ನೀಡಿ, ಕಾರ್ಯಾದೇಶ ನೀಡಲಾಗುತ್ತದೆ' ಎಂದು ಬಿಬಿಎಂಪಿ ತೋಟಗಾರಿಕೆ ವಿಭಾಗದ ಉಪ ನಿರ್ದೇಶಕ ಚಂದ್ರಶೇಖರ್ ತಿಳಿಸಿದರು.

10 ಮಿಯಾವಾಕಿ ಅರಣ್ಯ

'ನಗರದ ಸುತ್ತ 10 ಮಿಯಾವಾಕಿ ಅರಣ್ಯ ಅಭಿವೃದ್ಧಿಪಡಿಸುವ ಯೋಜನೆ ಹೊಂದಿದ್ದು, ತಲಾ ಒಂದು ಸಾವಿರದಿಂದ ಐದು ಸಾವಿರ ಗಿಡಗಳನ್ನು ನೆಟ್ಟು ಬೆಳೆಸಲಾಗುತ್ತದೆ. ಬೊಮ್ಮನಹಳ್ಳಿ ಹಾಗೂ ಮಹದೇವಪುರ ವಲಯದಲ್ಲಿ ಸ್ಥಳಾವಕಾಶವಿದ್ದು, ಕೆಲವು ತಿಂಗಳಲ್ಲಿ ಈ ಯೋಜನೆಯನ್ನು ಆರಂಭಿಸಲಾಗುತ್ತದೆ. ನಗರ ಹಾಗೂ ಸುತ್ತಮುತ್ತ ಹಸಿರು ಪ್ರದೇಶವನ್ನು ವೃದ್ಧಿಸುವುದು ಈ ಯೋಜನೆಯ ಉದ್ದೇಶ. ಕಡಿಮೆ ಜಾಗದಲ್ಲಿ ದಟ್ಟವಾಗಿ ಮರಗಳನ್ನು ಬೆಳೆಸುವುದು ಮಿಯಾವಾಕಿ ಅರಣ್ಯದ ವೈಶಿಷ್ಟ್ಯ. ಇದನ್ನು ಸ್ಥಳೀಯ ಹವಾಗುಣಕ್ಕೆ ಅನುಗುಣವಾಗಿ ಅಭಿವೃದ್ಧಿಪಡಿಸಲಾಗುತ್ತದೆ' ಬಿಬಿಎಂಪಿ ತೋಟಗಾರಿಕೆ ವಿಭಾಗದ ಉಪ ನಿರ್ದೇಶಕ ಚಂದ್ರಶೇಖರ್ ತಿಳಿಸಿದರು.

ರಸ್ತೆ ವಿಭಜಕ ಸೌಂದರ್ಯೀಕರಣ ಅನುದಾನ (₹ಲಕ್ಷಗಳಲ್ಲಿ)

ಸ್ಥಳ	ಅನುದಾನ ಬಿಡುಗಡೆ
ಹಳೆ ಮದ್ರಾಸ್ ರಸ್ತೆ–ಕೋಡಿಹಳ್ಳಿ	50
ಬಿಎಂಪಿ ವೃತ್ತದಿಂದ ಆದರ್ಶ ವೃತ್ತ	20
ಕಸ್ತೂರಿನಗರ 1 ಮತ್ತು 2ನೇ ಮುಖ್ಯರಸ್ತೆ	40
ವಿವೇಕಾನಂದ ಜಂಕ್ಷನ್	20
ಇನ್‌ಫೆಂಟ್ ಜೀಸಸ್ ಚರ್ಚ್	40
ಮಾರ್ಗೋಸಾ ರಸ್ತೆ ಟೆಂಡರ್‌ಶ್ಯೂರ್	60
ಹೊಸಕೆರೆ ಹಳ್ಳಿ ಕೆಳಸೇತುವೆ	25
ನಾಯಂಡಹಳ್ಳಿ ರಸ್ತೆ	27
ಮಡಿವಾಳ ರಸ್ತೆ, ಬಿಟಿಎಂ ಲೇಔಟ್	60
ಎಂಸಿಎಚ್‌ಎಸ್ ರೈಲ್ವೆಗೇಟ್, ಯಲಹಂಕ	20
ಕಣ್ಣೂರು ರಸ್ತೆ	70
ಡಾ.ರಾಜ್‌ಕುಮಾರ್ ಪುಣ್ಯಭೂಮಿ ರಸ್ತೆ	40
ಲಗ್ಗೆರೆ ಸೇತುವೆ–ಕೆಂಪೇಗೌಡ ಲೇಔಟ್	50
ಸುಮನಹಳ್ಳಿ ಸೇತುವೆ, ಕೆಂಪೇಗೌಡ ಲೇಔಟ್	50
ಸುಮನಹಳ್ಳಿ ಸೇತುವೆಯಿಂದ ನಾಗರಬಾವಿ 1ನೇ ಹಂತ	60
ಒಟ್ಟು	632

ಉದ್ಯಾನಗಳ ಅಭಿವೃದ್ಧಿ ವೆಚ್ಚ (ಟೆಂಡರ್ ಪೂರ್ಣ) (₹ಲಕ್ಷಗಳಲ್ಲಿ)

ಆರ್‌ಎಂವಿ 2ನೇ ಹಂತ, 3ನೇ ರಸ್ತೆ	45
9ನೇ ಜಿ ಮುಖ್ಯರಸ್ತೆ, ಒಎಂಬಿಆರ್ ಲೇಔಟ್,	40
ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನ, ಹೇನ್ಸ್ ರಸ್ತೆ	40
ಹರೇಕೃಷ್ಣ ಉದ್ಯಾನ, ಕುಮಾರ ಪಾರ್ಕ್	25
ಸ್ಯಾಂಕಿ ಕೆರೆ ಉದ್ಯಾನ	47
ಪೈಪ್‌ಲೈನ್ ಉದ್ಯಾನ	40
ವಾರ್ಡ್ 94, ಗಾಂಧಿನಗರ ಉದ್ಯಾನ	50
ಸ್ವಾತಂತ್ರ್ಯ ಉದ್ಯಾನ	77
ಗೋವಿಂದರಾಜನಗರ	73
ವಾಲ್ಮೀಕಿನಗರ ಉದ್ಯಾನ, ಮೈಸೂರು ರಸ್ತೆ	40
ಕುಮಾರಗಿರಿ ಉದ್ಯಾನ, ಪದ್ಮನಾಭನಗರ	60
ಲಕ್ಷ್ಮಣರಾವ್ ಉದ್ಯಾನ, ಜಯನಗರ	60
ಎನ್‌ಜಿವಿ ಉದ್ಯಾನ, ಬಿಟಿಎಂ ಲೇಔಟ್	60
ಜಿಂಕೆ ಉದ್ಯಾನ, ಬಸವನಗುಡಿ	60
ಐಎಎಸ್ ಆಫೀಸರ್ಸ್ ಕಾಲೊನಿ ಪಾರ್ಕ್, ಎಚ್‌ಎಸ್ ಆರ್ ಲೇಔಟ್	30
ಉತ್ತರಹಳ್ಳಿ ಎರಡು ಉದ್ಯಾನ	60
ಗೃಹಲಕ್ಷ್ಮಿ ಪಾರ್ಕ್, ಚಿಕ್ಕಸಂದ್ರ	30
ಸುಂಕದಕಟ್ಟೆ ಮಾರ್ಕೆಟ್ ಉದ್ಯಾನ	30
ಬಾಬುಸಪಾಳ್ಯ ಉದ್ಯಾನ, ಮಹದೇವಪುರ	200
ಒಟ್ಟು	1,067

ಸುಧಾ, ಮಯೂರ ಓದಿರಿ

'ಕಲಾಸಕ್ತಿಯಿಂದ ವ್ಯಕ್ತಿತ್ವ ವಿಕಸನ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಕಲೆ ಯಾರ ಸ್ವತ್ತೂ ಅಲ್ಲ. ಎಲ್ಲ ವರ್ಗದ ಕಲಾಸಕ್ತರಿಗೂ ಸಮಾನ ಅವಕಾಶ ದೊರಕುವಂತಹ ವಾತಾವರಣ ನಿರ್ಮಾಣ ಆಗಬೇಕು' ಎಂದು ಶಾಸಕ ಕೃಷ್ಣಾರೆಡ್ಡಿ ಹೇಳಿದರು.

ನೂಪುರ ಫೈನ್ ಆರ್ಟ್ಸ್ ಅಕಾಡೆಮಿಯಿಂದ ಆಯೋಜಿಸಿದ್ದ ನೃತ್ಯ ರೂಪಕ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಕಲೆ ಸಂಸ್ಕೃತಿಯ ಪ್ರತಿಬಿಂಬ. ಕಲಾಸಕ್ತಿಯಿಂದ ವ್ಯಕ್ತಿತ್ವ ವಿಕಸನ ಆಗುವುದರೊಂದಿಗೆ ಸಮಚಿತ್ತ ಭಾವ ಒದಗಿಬರುತ್ತದೆ' ಎಂದರು.

ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, 'ಕಲಾ ಅಭಿವ್ಯಕ್ತಿಯ ಮೂಲಕ ಜಾಗೃತಿ ಮೂಡಿಸಿದ ಹಲವು ಸಂಗತಿಗಳು ನಮ್ಮ ಮುಂದಿವೆ. ಇದೇ ನಿಟ್ಟಿನಲ್ಲಿ ನಾಟಕದ ಮೂಲಕ ಸಾಮಾಜಿಕ ಅರಿವು ಮೂಡಿಸುತ್ತಿರುವ ನೂಪುರ ಕಲಾ ಅಕಾಡೆಮಿ ಕಾರ್ಯ ಶ್ಲಾಘನೀಯ' ಎಂದರು.

ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ಮಾತನಾಡಿ, 'ಬದಲಾಗುತ್ತಿರುವ ಕಾಲಘಟ್ಟದಲ್ಲಿ ಮನರಂಜನೆ ಪರಿಕಲ್ಪನೆ ಬದಲಾಗುತ್ತಿದೆ. ಇದರಿಂದ ಹಲವಾರು ದುಶ್ಚಟಗಳಿಗೆ ಯುವ ಜನರು ಬಲಿಯಾಗುತ್ತಿದ್ದಾರೆ. ಕಲಾಸಕ್ತಿಯನ್ನು ಅವರಲ್ಲಿ ಜಾಗೃತಗೊಳಿಸಿ ಮತ್ತೆ ಮುಖ್ಯವಾಹಿನಿಗೆ ಕರೆ ತರಬಹುದು' ಎಂದು ಅಭಿಪ್ರಾಯಪಟ್ಟರು.

ಅಸ್ಪೃಶ್ಯತೆ ಹಾಗೂ ಧಾರ್ಮಿಕ ಐಕ್ಯತೆಯಂತಹ ಗಂಭೀರ ವಿಷಯಗಳನ್ನು ದಾಟಿಸಲು ನಾಟಕ ಅತ್ಯಂತ ಪ್ರಮುಖ ಅಭಿವ್ಯಕ್ತಿಯಾಗಿದೆ ಎಂದು ಕಲಾವಿದೆ ರೂಪಾ ರಾಜೇಶ್ ಹೇಳಿದರು. ಸಹಾಯಕ ಕಾರ್ಯದರ್ಶಿ ಮಹಾಲಕ್ಷ್ಮಿ, ಬಿಜೆಪಿ ಮುಖಂಡ ಕದರಪ್ಪ, ಸೋಮಶೇಖರ್ ಉಪಸ್ಥಿತರಿದ್ದರು.



ನೂಪುರ ಫೈನ್ ಆರ್ಟ್ಸ್ ಅಕಾಡೆಮಿಯಿಂದ ಆಯೋಜಿಸಿದ್ದ ನೃತ್ಯ ರೂಪಕ ಪ್ರದರ್ಶನಕ್ಕೆ ಸಚಿವ ಎಸ್‌ಟಿ.ಸೋಮಶೇಖರ್ ಚಾಲನೆ ನೀಡಿದರು

ನೇತಾಜಿ ಉದ್ಯಾನ ನಿರ್ವಹಣೆಗೆ ಒತ್ತಾಯ

ನೆಲಮಂಗಲ: ನೇತಾಜಿ ಉದ್ಯಾನ ಹಾಗೂ ಉದ್ಯಾನದಲ್ಲಿರುವ ಶೌಚಾಲಯ ನಿರ್ವಹಣೆ ಬಗ್ಗೆ ಹಲವು ಬಾರಿ ಮನವಿ ಮಾಡಿದ್ದರೂ ಅಧಿಕಾರಿಗಳು ಗಮನಹರಿಸಿಲ್ಲ. ನಗರದಾದ್ಯಂತ ಕಸದ ರಾಶಿ ಬಿದ್ದಿದೆ. ಮುಖ್ಯರಸ್ತೆಯ ನಡುವೆ ವಿದ್ಯುತ್ ಕಂಬಗಳಲ್ಲಿ ದೀಪಗಳನ್ನು ಅಳವಡಿಸಿಲ್ಲ ಎಂದು ಕನ್ನಡ ಸಾಂಸ್ಕೃತಿಕ ರಂಗದ ಅಧ್ಯಕ್ಷ ಡಿ.ಸಿದ್ದರಾಜು ಆಕ್ರೋಶ ವ್ಯಕ್ತಪಡಿಸಿದರು.

ಕನ್ನಡ ಸಾಂಸ್ಕೃತಿಕ ರಂಗ, ನಿವೃತ್ತ ನೌಕರರ ಸಂಘ ಹಾಗೂ ವಿವಿಧ ಸಂಘಟನೆಗಳು ನಗರಸಭೆ ವ್ಯಾಪ್ತಿಯಲ್ಲಿ ವಿವಿಧ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ ನಗರಸಭೆ ಕಚೇರಿ ಎದುರು ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಧರಣಿಯಲ್ಲಿ ಅವರು ಮಾತನಾಡಿದರು.

ಸರ್ಕಾರಿ ಆಸ್ಪತ್ರೆಯನ್ನು ಪಕ್ಕದಲ್ಲೆ ಹೊಂದಿರುವ ನೇತಾಜಿ ಉದ್ಯಾನದಲ್ಲೆ ನಿವೃತ್ತರ ಕಚೇರಿ ಇದ್ದು ನಿತ್ಯ ನೂರಾರು ಜನ ಉದ್ಯಾನದಲ್ಲಿ ವಿಶ್ರಮಿಸುತ್ತಾರೆ. ಆದರೆ ಇಲ್ಲಿ ಶೌಚಾಲಯ ಇದ್ದೂ ಇಲ್ಲದಂತಾಗಿದೆ. ಆದ್ದರಿಂದ, ಉದ್ಯಾನದ ಮೂಲೆಗಳಲ್ಲಿ ಮೂತ್ರ ವಿಸರ್ಜನೆ ಸಾಮಾನ್ಯವಾಗಿದೆ, ಸೊಳ್ಳೆಗಳ ಆವಾಸ ಸ್ಥಾನವಾಗಿದೆ ಎಂದು ಹೇಳಿದರು.

ನಿವೃತ್ತ ನೌಕರರ ಸಂಘದ ಅಧ್ಯಕ್ಷ ಪುಟ್ಟಯ್ಯ ನೇತಾಜಿ, ಉದ್ಯಾನ ಶೌಚಾಲಯ, ನಿರ್ವಹಣೆ ಮಾಡಬೇಕು. ಇಲ್ಲವಾದರೆ ಪಕ್ಕದಲ್ಲೆ ಆಸ್ಪತ್ರೆ ಇದ್ದು, ಸೊಳ್ಳೆಗಳಿಂದ ರೋಗಿಗಳು, ವೃದ್ಧರಿಗೆ ತೊಂದರೆಯಾಗಲಿದೆ ಎಂದರು

ಎಲ್ಲ ಸಮಸ್ಯೆಗಳ ಬಗೆಹರಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮತ್ತೊಮ್ಮೆ ವಿಶೇಷ ಸಭೆ ಕರೆದು ಸೂಚನೆ ನೀಡಲಾಗುವುದು ಎಂದು ಪೌರಾಯುಕ್ತ ರಾಜಶೇಖರ್ ಹೇಳಿದರು.

ಪುರಸಭೆ ಮಾಜಿ ಸದಸ್ಯರಾದ ಎಚ್.ಜಿ.ರಾಜು, ಎನ್.ಎಸ್.ಮೂರ್ತಿ (ಮಿಲ್ಟ್ರಿ ಮಾಮಾ), ಆಮ್ ಆದ್ಮಿ ಸಂಚಾಲಕ ಗಂಗಬೈಲಪ್ಪ, ಕಸಾಪ ಮಾಜಿ ಅಧ್ಯಕ್ಷ ಡಾ.ಲಕ್ಷ್ಮೀನಾರಾಯಣ ಶ್ರೇಷ್ಠಿ, ಉತ್ತರ ಕರ್ನಾಟಕ ಸಂಘದ ಅಧ್ಯಕ್ಷ ಎಸ್.ಎಸ್.ಬಿರಾದಾರ್, ಔಷಧ ವ್ಯಾಪಾರಿಗಳ ಸಂಘದ ವಾದಿರಾಜ್, ವೆಂಕಟೇಶ್ ಚೌಥಾಯಿ ಇದ್ದರು.



ವಿವಿಧ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ನಗರಸಭೆ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಮನೆಯಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾ ಒಡೆದು ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶೋಕನಗರ ಠಾಣೆ ವ್ಯಾಪ್ತಿಯಲ್ಲಿ ಶಿಕ್ಷಕಿಯೊಬ್ಬರ ಮನೆಯಲ್ಲಿ ಕಳ್ಳತನ ನಡೆದಿದ್ದು, ಸಿ.ಸಿ.ಟಿ.ವಿ ಕ್ಯಾಮೆರಾ ಒಡೆದು ಹಾಕಿ ಕಳ್ಳರು ಕೃತ್ಯ ಎಸಗಿದ್ದಾರೆ.

'ಶಾಂತಿನಗರ ನಿವಾಸಿಯಾಗಿರುವ ಶಿಕ್ಷಕಿ, ತಾಯಿ ಜೊತೆ ವಾಸವಿದ್ದಾರೆ. ಅವರ ಮನೆಯಲ್ಲಿ ಜ. 7ರಂದು ಕಳ್ಳತನವಾಗಿದೆ. ₹ 5 ಲಕ್ಷ ನಗದು, 135 ಗ್ರಾಂ ಚಿನ್ನಾಭರಣ, ಡೆಬಿಟ್ ಕಾರ್ಡ್‌ಗಳು ಹಾಗೂ ಇತರೆ ವಸ್ತುಗಳನ್ನು ಕಳ್ಳರು ಕದ್ದೊಯ್ದಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶಿಕ್ಷಕಿ ಕೆಲಸ ನಿಮಿತ್ತ ಜಯನಗರಕ್ಕೆ ಹೋಗಿದ್ದರು. ತಾಯಿ, ವಾಯುವಿಹಾರಕ್ಕೆ ತೆರಳಿದ್ದರು. ಇದೇ ವೇಳೆ ಮನೆಗೆ ನುಗ್ಗಿದ್ದ ಕಳ್ಳರು, ತಮ್ಮ ಗುರುತು ಸಿಗಬಾರದೆಂದು ಕ್ಯಾಮೆರಾ ಒಡೆದು ಹಾಕಿದ್ದಾರೆ. ಮನೆ ಬಗ್ಗೆ ತಿಳಿದಿರುವ ವ್ಯಕ್ತಿಗಳೇ ಕೃತ್ಯ ಎಸಗಿರುವ ಅನುಮಾನವಿದೆ' ಎಂದು ಮೂಲಗಳು ತಿಳಿಸಿವೆ.

'ಎಲ್ಲ ಸರ್ಕಾರಿ ಗೋಶಾಲೆಗಳ ಬಳಿ ಚೆಕ್ ಡ್ಯಾಂ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಎಲ್ಲ ಸರ್ಕಾರಿ ಗೋಶಾಲೆಗಳ ಸಮೀಪ ಚೆಕ್ ಡ್ಯಾಂ ನಿರ್ಮಿಸಲು ಕ್ರಮ ವಹಿಸುವಂತೆ ಪಶುಸಂಗೋಪನೆ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಿಗೆ ಸೂಚಿಸಲಾಗಿದೆ' ಎಂದು ಪಶುಸಂಗೋಪನಾ ಸಚಿವ ಪ್ರಭು ಬಿ. ಚೌವ್ಹಾಣ್ ತಿಳಿಸಿದ್ದಾರೆ.

'ಗೋಶಾಲೆಗಳ ಬಳಿ ಚೆಕ್ ಡ್ಯಾಮ್ ನಿರ್ಮಿಸುವುದರಿಂದ ಮಳೆ ನೀರು ಸಂಗ್ರಹಿಸಿ, ಮೇವು ಬೆಳೆಯಲು ಸಹಕಾರಿಯಾಗಲಿದೆ' ಎಂದು ತಿಳಿಸಿದ್ದಾರೆ.

'ಚೆಕ್ ಡ್ಯಾಂ ನಿರ್ಮಾಣ ಪದ್ಧತಿ ಅಳವಡಿಸಿಕೊಂಡರೆ ನೀರಿಗೆ ತೊಂದರೆಯಾಗುವುದಿಲ್ಲ. ಜತೆಗೆ, ಅಂತರ್ಜಲ ವೃದ್ಧಿಯಾಗಲಿದ್ದು, ಸದಾ ಹಸಿರಿನ ವಾತಾವರಣ ನಿರ್ಮಾಣ ಹಾಗೂ ಮೇವು ಉತ್ಪಾದನೆಗೆ ಯಾವುದೇ ತೊಂದರೆಯಾಗುವುದಿಲ್ಲ' ಎಂದು ಅವರು ವಿವರಿಸಿದ್ದಾರೆ.

'ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಜೀವವೈವಿಧ್ಯ ಗೋ ಫಾರ್ಮ್‌ಗೆ ಭೇಟಿ ನೀಡಿದ್ದ ಸಮಯದಲ್ಲಿ, ಅಲ್ಲಿ ನಿರ್ಮಿಸಿರುವ ಚೆಕ್ ಡ್ಯಾಂ ಗೋವುಗಳ ಸಾಕಾಣಿಕೆ, ಮೇವು ಉತ್ಪಾದನೆ, ಗೋವಿನ ಉತ್ಪನ್ನಗಳ ಜತೆಗೆ ಉಪ ಉತ್ಪನ್ನಗಳ ತಯಾರಿಕೆಗೆ ಅನುಕೂಲವಾಗಿರುವುದು ಗೊತ್ತಾಯಿತು. ಅದರಂತೆ ಬೆಳಗಾವಿ ಜಿಲ್ಲೆಯ ಬೆಳವಿ ಜಿಲ್ಲಾ ಸರ್ಕಾರಿ ಗೋ ಶಾಲೆಯಲ್ಲಿ ಪ್ರಾಯೋಗಿಕವಾಗಿ ಚೆಕ್ ಡ್ಯಾಂ ನಿರ್ಮಿಸಲಾಗಿದ್ದು, ಅದು ಯಶಸ್ವಿಯಾಗಿದೆ' ಎಂದೂ ಅವರು ಮಾಹಿತಿ ನೀಡಿದ್ದಾರೆ.

ನಗರದಲ್ಲಿ ಇಂದು

ಸ್ವರ ಸಾಮ್ರಾಟ 'ಎಸ್.ಪಿ.ಬಿ' ಅವರಿಗೆ ಗಾನ ನುಡಿ ನಮನ: ಉದ್ಘಾಟನೆ: ರಾಮಲಿಂಗಾ ರೆಡ್ಡಿ, ದಯಾನಂದ ಕೆ.ಎ., ಎಸ್.ಪಿ.ಬಿ ಹಾಡುಗಳ ರಸಸಂಜೆ ಮತ್ತು ಪೌರಾಣಿಕ ಏಕಪಾತ್ರಾಭಿನಯ, ಆಯೋಜನೆ: ಗಾನಸಂಗಮ ಕಲಾ ಟ್ರಸ್ಟ್, ಸ್ಥಳ: ನಯನ ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಸಂಜೆ 5.15

ಜಗನ್ ಅವರು ರಚಿಸಿರುವ 'ಕಾಸಮಿಕ್ ಅರ್ಬನ್ ಕನೆಕ್ಟ್' ಏಕವ್ಯಕ್ತಿ ಚಿತ್ರಗಳ ಪ್ರದರ್ಶನ: ಉದ್ಘಾಟನೆ: ಎಂ.ಐ.ಎಂ. ನೆಹರುಜಿ, ಅತಿಥಿಗಳು: ಎಂ.ಜಿ. ದೊಡ್ಡಮನಿ, ರುದ್ರ ಪ್ರಸಾದ್, ರಿಟಾ ಜೇಮ್ಸ್, ವಿ. ಕೃಷ್ಣಮೂರ್ತಿ, ಎಸ್. ಯೋಗೇಶ್ವರನ್, ಸ್ಥಳ: ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಸಂಜೆ 6

ಪ್ರವಚನ ವಾಹಿನಿ ಕಾರ್ಯಕ್ರಮ: 'ವಿಷ್ಣು ಸಹಸ್ರನಾಮ ಸಾಮೂಹಿಕ ಪಾರಾಯಣ ಹಾಗೂ ಪ್ರವಚನ' ಕುರಿತು ಉಪನ್ಯಾಸ: ಅರಳು ಮಲ್ಲಿಗೆ ಪಾರ್ಥಸಾರಥಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ರೇವಾ ವಿಶ್ವವಿದ್ಯಾಲಯದಲ್ಲಿ 'ಖೇಲ್ ಖೋಜ್' ಕಾರ್ಯಕ್ರಮ

ಸಾಂಪ್ರದಾಯಿಕ ಕ್ರೀಡೆಗಳ ಸಂಭ್ರಮ

ಪ್ರಜಾವಾಣಿ ವಾರ್ತೆ

ಯಲಹಂಕ: ಪ್ರಾಚೀನ ಭಾರತದ ಸಾಂಪ್ರದಾಯಿಕ ಹಾಗೂ ಸ್ಥಳೀಯ ಕ್ರೀಡೆಗಳನ್ನು ಮತ್ತೆ ಜೀವಂತಗೊಳಿಸುವ ಉದ್ದೇಶದಿಂದ ರೇವಾ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದಲ್ಲಿ ಸಾಂಪ್ರದಾಯಿಕ ಕ್ರೀಡೆಗಳ 'ಖೇಲ್ ಖೋಜ್' ಎಂಬ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕ್ರೀಡಾ ಇಲಾಖೆ ಆಯುಕ್ತ ಎಂ.ಪಿ.ಮಲ್ಲೈ ಮುಹಿಲನ್ ಅವರು, ಸಾಂಪ್ರದಾಯಿಕ ಕ್ರೀಡೆಗಳು ಕೇವಲ ಆಟಗಳಲ್ಲದೇ ಮುಂದಿನ ಪೀಳಿಗೆಗೆ ಆಸ್ತಿ ಇದ್ದಂತೆ ಎಂದರು.

ದೀರ್ಘ ಕಾಲದಿಂದ ಮರೆತಿರುವ ಆಟಗಳ ಕುರಿತು ಜಾಗೃತಿಗೊಳಿಸುವ ಮತ್ತು ಪುನರುಜ್ಜೀವನಗೊಳಿಸುವ ಸಲುವಾಗಿ ರೇವಾ ವಿಶ್ವವಿದ್ಯಾಲಯ ಇಂತಹ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಕಾರ್ಯ ಎಂದು ಹೇಳಿದರು.



ಕಲಾವಿದರು 'ಮಲ್ಲಕಂಬ' ಸಾಹಸ ಕಲೆ ಪ್ರದರ್ಶಿಸಿದರು

ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಅವರು ಮಾತನಾಡಿ, 'ಈ ಕಾರ್ಯಕ್ರಮವು ನಮ್ಮ ಭಾರತೀಯ ಪರಂಪರೆ ಮರುಸೃಷ್ಟಿಸಲು ಮತ್ತು ಹಳೆಯ ಆಟಗಳನ್ನು ಮರಳಿ ಬಳಕೆಗೆ ತರಲು ಸಹಾಯಕವಾಗುತ್ತದೆ. ಇದಕ್ಕಾಗಿ ವಿಶ್ವವಿದ್ಯಾಲಯದಿಂದ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಲಾವಿದರು 35ಕ್ಕೂ ಹೆಚ್ಚು ಸ್ಥಳೀಯ ಆಟಗಳನ್ನು ಮತ್ತು ಹಳೆಯ ಸಮರ ಕಲೆಗಳನ್ನು ಪ್ರದರ್ಶಿಸಿದರು.

ಹಳೆಯ ಕ್ರೀಡೆಗಳ ಕುರಿತು ಸ್ಥಾಪಿಸಿದ್ದ 31 ಮಳಿಗೆಗಳಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಗೋಲಿ, ಬುಗುರಿ, ಚೌಕಾಬಾರ, ಪಗಡೆ ಮತ್ತಿತರ ಆಟಗಳನ್ನು ಆಡಿ ಸಂಭ್ರಮಿಸಿದರು.

ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಡಾ.ಎನ್.ರಮೇಶ್, ಟ್ರಸ್ಟಿ ಉಮೇಶ್ ಎಸ್. ರಾಜು ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

'ಪ್ರಾಥಮಿಕ ಶಾಲಾ ಶಿಕ್ಷಕರ ವೇತನ ದ್ವಿಗುಣಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಶಿಕ್ಷಕರ ಕಾರ್ಯಭಾರ ಗುರುತಿಸಿ ಪ್ರಾಥಮಿಕ ಶಾಲಾ ಶಿಕ್ಷಕರ ವೇತನವನ್ನು ದ್ವಿಗುಣಗೊಳಿಸುವಂತೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಒತ್ತಾಯಿಸಿದೆ.

7ನೇ ವೇತನ ಆಯೋಗವು ಕೇಳಿರುವ ಪ್ರಶ್ನಾವಳಿಗಳಿಗೆ ಶುಕ್ರವಾರ 135ಕ್ಕೂ ಹೆಚ್ಚು ಪುಟಗಳ ವರದಿಯನ್ನು ಸಂಘದ ಪದಾಧಿಕಾರಿಗಳು ಸಲ್ಲಿಸಿದ್ದು, ಪ್ರಾಥಮಿಕ ಶಾಲಾ ಶಿಕ್ಷಕರಿಗೆ ₹51,800– ₹1,02,800 ವೇತನ ಶ್ರೇಣಿ ನಿಗದಿಪಡಿಸುವಂತೆ ಕೋರಿದ್ದಾರೆ.

ಮುಖ್ಯ ಶಿಕ್ಷಕರಿಗೆ ಪ್ರತ್ಯೇಕ ವೇತನ ಶ್ರೇಣಿ ರೂಪಿಸಬೇಕು ಮತ್ತು ಹತ್ತು ವರ್ಷ ಕಾರ್ಯನಿರ್ವಹಿಸಿದ ಶಿಕ್ಷಕರಿಗೆ ನೀಡುವ ಕಾಲಮಿತಿ ಬಡ್ತಿ ವೇತನವನ್ನು ₹55,300- ₹1,05,300ರ ಪ್ರತ್ಯೇಕ ವೇತನ ಶ್ರೇಣಿ ನಿಗದಿಪಡಿಸಬೇಕು. 15 ವರ್ಷ ಕಾರ್ಯನಿರ್ವಹಿಸಿದವರಿಗೆ ₹60,700 – ₹1,16,500 ಪ್ರತ್ಯೇಕ ವೇತನ ಶ್ರೇಣಿ ನಿಗದಿಪಡಿಸಬೇಕು ಎಂದು ವಿವರಿಸಿದ್ದಾರೆ.

ವರದಿಯ ಪ್ರಮುಖ ಅಂಶಗಳು

- ಪೊಲೀಸ್ ಇಲಾಖೆಯ ಆರೋಗ್ಯ ಭಾಗ್ಯ ಮಾದರಿಯಲ್ಲಿ ಉಚಿತವಾಗಿ ನಗದು ರಹಿತ ಯೋಜನೆ ಜಾರಿಗೊಳಿಸಬೇಕು.
- ವಾರದಲ್ಲಿ 5 ದಿನಗಳು ಕಾರ್ಯನಿರ್ವಹಿಸುವ ಶಾಲಾ ಆಡಳಿತ ವ್ಯವಸ್ಥೆ ಜಾರಿಗೊಳಿಸಬೇಕು.
- ಗುಣಾತ್ಮಕ ಶಿಕ್ಷಣಕ್ಕೆ ಸರ್ಕಾರಿ ಶಾಲೆಗಳಲ್ಲಿ ತರಗತಿಗೊಬ್ಬ ಶಿಕ್ಷಕರನ್ನು ನೇಮಿಸಬೇಕು.
- ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಿಸಬೇಕು`

5ನೇ ವೇತನ ಆಯೋಗದ ಮಾದರಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ್ತು ಮುಖ್ಯೋಪಾಧ್ಯಯರಿಗೆ ಇತರ ಸರ್ಕಾರಿ ನೌಕರರಿಗೆ ನೀಡುವ ವೇತನ ಹೆಚ್ಚಳಕ್ಕಿಂತ ಶೇ20ರಷ್ಟು ವೇತನ ನೀಡುವಂತೆ ಶಿಫಾರಸು ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ 1.56 ಲಕ್ಷ ಶಿಕ್ಷಕರು ಕಾರ್ಯನಿರ್ವಹಿಸುತ್ತಿರುವುದರಿಂದ ಎಲ್ಲರಿಗೂ ಏಕಕಾಲಕ್ಕೆ ಬಡ್ತಿ ದೊರೆಯುವುದು ಕಷ್ಟಸಾಧ್ಯ. ಹೀಗಾಗಿ, ಪ್ರತಿ ಐದು ವರ್ಷಕ್ಕೊಮ್ಮೆ ಮುಂದಿನ ಹಂತದ ವೇತನ ಶ್ರೇಣಿಗೆ (ಸೂಪರ್ ಟೈಮ್ ಸ್ಕೇಲ್ ಮಾದರಿಯಲ್ಲಿ) 'ವೇತನ ಮುಂಬಡ್ತಿ' ನೀಡಬೇಕು. ಕನಿಷ್ಠ ವೇತನವನ್ನು ₹36 ಸಾವಿರ ಮತ್ತು ಗರಿಷ್ಠ ವೇತನವನ್ನು ₹3.10 ಲಕ್ಷ ನಿಗದಿಪಡಿಸಬೇಕು ಎಂದು ಕೋರಿದ್ದಾರೆ.

'ಪ್ರಾಥಮಿಕ ಶಾಲಾ ಶಿಕ್ಷಕರಿಗೂ ಸೇವಾ ಜೇಷ್ಠತೆಯ ಆಧಾರದ ಮೇಲೆ ವಿಷಯ ಪರಿವೀಕ್ಷಕ, ಶಿಕ್ಷಣಾಧಿಕಾರಿ, ಉಪನಿರ್ದೇಶಕರ ಹುದ್ದೆಯವರೆಗೆ ಬಡ್ತಿ ನೀಡಬೇಕು. ವಿದ್ಯಾರ್ಹತೆ ಆಧಾರದ ಮೇಲೆಯೂ ಸಹ ಉಪನಿರ್ದೇಶಕರ ಹುದ್ದೆಯವರೆಗೆ ಬಡ್ತಿ ನೀಡುವಂತೆ ಶಿಫಾರಸು ಮಾಡಬೇಕು' ಎಂದು ಅಧ್ಯಕ್ಷ ಶಂಭುಲಿಂಗನಗೌಡ ಪಾಟೀಲ ತಿಳಿಸಿದ್ದಾರೆ.

'ದತ್ತಾಂಶ ರಕ್ಷಣೆ ಮಸೂದೆ: ರಕ್ಷಣೆಯ ಹಕ್ಕು ನಿರ್ಬಂಧಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈಯಕ್ತಿಕ ಮಾಹಿತಿ ಮತ್ತು ದತ್ತಾಂಶಗಳನ್ನು ರಕ್ಷಿಸುವುದಕ್ಕಾಗಿ ರೂಪಿಸಲಾದ 'ವೈಯಕ್ತಿಕ ದತ್ತಾಂಶ ರಕ್ಷಣೆ ಮಸೂದೆ 2022' ಕೆಲವೊಂದು ಇತಿಮಿತಿಗಳನ್ನು ಹೊಂದಿದ್ದು, ರಕ್ಷಣೆಯ ಹಕ್ಕು ನಿರ್ಬಂಧಿತವಾಗಿದೆ' ಎಂದು ಡಿಜಿಟಲ್ ತಂತ್ರಜ್ಞಾನ ಕ್ಷೇತ್ರದ ತಜ್ಞ ಶ್ರೀನಿವಾಸ್ ಕೊಡಾಲಿ ಅವರು ಹೇಳಿದರು.

ಕರ್ನಾಟಕ ಸ್ವತಂತ್ರ ತಂತ್ರಾಂಶ ಆಂದೋಲನವು ಕೇಂದ್ರ ಸರ್ಕಾರದ 'ವೈಯಕ್ತಿಕ ದತ್ತಾಂಶ ರಕ್ಷಣೆ ಮಸೂದೆ 2022' ಬಗ್ಗೆ ಹಮ್ಮಿಕೊಂಡ ಚರ್ಚೆಯಲ್ಲಿ ಅವರು ಮಾತನಾಡಿದರು.

'ಈ ಮಸೂದೆಯು ಸಂಪೂರ್ಣ ಗೋಪ್ಯತೆಗೆ ಸಹಕಾರಿಯಲ್ಲ. ಆದರೆ, ಮಾಹಿತಿ ತಂತ್ರಜ್ಞಾನ ಕಂಪನಿಗಳು ಹಾಗೂ ಇತರ ಸಂಸ್ಥೆಗಳಿಂದ ದತ್ತಾಂಶ ರಕ್ಷಣೆಯನ್ನು ನಿಯಂತ್ರಿಸುವ ಸೀಮಿತ ಕಾನೂನು ಆಗಲಿದೆ. ಪ್ರತಿ ಖಾಸಗಿ ಅಥವಾ ಸರ್ಕಾರಿ ಸಂಸ್ಥೆಯ ಯಾವುದೇ ಸೇವೆ ಬೇಕೆಂದರೆ, ಆ ಸಂಸ್ಥೆಯು ಕೇಳುವ ಎಲ್ಲಾ ಮಾಹಿತಿಗಳನ್ನು ವ್ಯಕ್ತಿಯು ನೀಡಬೇಕು ಎಂದು ಹೇಳಲಾಗಿದೆ. ಇದಕ್ಕೆ ಒಪ್ಪಿಗೆ ನೀಡದೇ ಇದ್ದರೆ, ಸಂಸ್ಥೆಯು ತಾನು ನೀಡುತ್ತಿರುವ ಸೇವೆಯನ್ನು ತಕ್ಷಣವೇ ಸ್ಥಗಿತಗೊಳಿಸಬಹುದು ಎನ್ನಲಾಗಿದೆ. ಮಾಹಿತಿ ತಪ್ಪಾಗಿದ್ದರೆ ದಂಡ ವಿಧಿಸುವ ಅವಕಾಶವಿದೆ' ಎಂದರು.

ಕರ್ನಾಟಕ ಸ್ವತಂತ್ರ ತಂತ್ರಾಂಶ ಆಂದೋಲನದ ನವೀನ್ ಮುದುನೂರು, 'ಈ ಕರಡು ಮಸೂದೆಯು ಮೇಲ್ನೋಟಕ್ಕೆ ಕಾಣುತ್ತಿರುವಂತೆ ಸರಳವಾಗಿಲ್ಲ. ಬದಲಿಗೆ, ಯಾವುದೇ ವ್ಯಕ್ತಿಯ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುವ ಮತ್ತು ತನಗೆ ಬೇಕಾದಂತೆ ಅದನ್ನು ಬಳಸಿಕೊಳ್ಳುವ ಅಧಿಕಾರವನ್ನು ಸರ್ಕಾರಕ್ಕೆ ನೀಡುತ್ತದೆ' ಎಂದು ಅವರು ಹೇಳಿದರು.

ಅದಾನಿ ಅವ್ಯವಹಾರ: 'ಜಂಟಿ ಸದನ ಸಮಿತಿ ತನಿಖೆ'ಗೆ ಆಗ್ರಹ

ಬಿಜೆಪಿ ಕಚೇರಿ ಎದುರು ಎಎಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ನಗರದ ಬಿಜೆಪಿ ಕಚೇರಿ ಎದುರು ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಭಾನುವಾರ ಪ್ರತಿಭಟನೆ ನಡೆಸಿದರು

ಬೆಂಗಳೂರು: 'ಉದ್ಯಮಿ ಗೌತಮ್ ಅದಾನಿ ಅವ್ಯವಹಾರಗಳಿಗೆ ಕೇಂದ್ರ ಸರ್ಕಾರವು ಸಹಕಾರ ನೀಡುತ್ತಿದೆ' ಎಂದು ಆಪಾದಿಸಿರುವ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತರು, ಬಿಜೆಪಿ ರಾಜ್ಯ ಕಚೇರಿ ಜಗನ್ನಾಥ ಭವನದ ಎದುರು ಭಾನುವಾರ ಪ್ರತಿಭಟಿಸಿದರು.

ಕೇಂದ್ರದ ವಿರುದ್ಧ ಕಾರ್ಯಕರ್ತರು ಆಕ್ರೋಶ ಹೊರಹಾಕಿ ರಸ್ತೆತಡೆ ನಡೆಸಿ, ಕಚೇರಿಗೆ ಮುತ್ತಿಗೆ ಹಾಕಲು ಮುಂದಾದ ವೇಳೆ ಪೊಲೀಸರು ಅವರನ್ನು ವಶಕ್ಕೆ ಪಡೆದರು. ಬಳಿಕ, ಬಿಡುಗಡೆ ಮಾಡಿದರು.

'ಪ್ರಧಾನಿ ನರೇಂದ್ರ ಮೋದಿ ಅವರು ಅದಾನಿ ಪ್ರಕರಣದ ತನಿಖೆ ನಡೆಸುವ ಬದಲಿಗೆ ಆ ಉದ್ಯಮಿ ಪರ ನಿಂತಿದ್ದಾರೆ. ಅದಾನಿ ವಿರುದ್ಧದ ಎಲ್ಲ ಆರೋಪಗಳ ಬಗ್ಗೆ ಜಂಟಿ ಸದನ ಸಮಿತಿಯಿಂದ ತನಿಖೆ ಆಗಬೇಕು' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಆಗ್ರಹಿಸಿದರು.

'ಕಲ್ಲಿದ್ದಲು, ಗ್ಯಾಸ್, ವಿದ್ಯುತ್, ರಸ್ತೆ, ನೀರು, ವಿಮಾನ ನಿಲ್ದಾಣ ಹಾಗೂ ಬಂದರು... ಹೀಗೆ ಎಲ್ಲವನ್ನೂ ಅದಾನಿ ಪಾಲಾಗುವಂತೆ ಮಾಡಿದ್ದಾರೆ. ಇದರಿಂದ ದೇಶದಲ್ಲಿ ಆರ್ಥಿಕ ಆತಂಕ ಎದುರಾಗಿದೆ' ಎಂದು ಹೇಳಿದರು.

'ನಿರುದ್ಯೋಗಿ ಯುವಕರು, ರೈತರು, ಬೀದಿಬದಿಯ ವ್ಯಾಪಾರಸ್ಥರು, ಕೂಲಿ ಕಾರ್ಮಿಕರು ಬದುಕು ಕಟ್ಟಿಕೊಳ್ಳಲು ₹ 2.5 ಲಕ್ಷ ಪಡೆಯಲು ಅಲೆದಾಟ ನಡೆಸುವ ಪರಿಸ್ಥಿತಿಯಿದೆ. ಅದೇ ಅದಾನಿಗೆ ಮೋದಿ ಅವರು ₹ 2.5 ಲಕ್ಷ ಕೋಟಿಯನ್ನು ಉದಾರವಾಗಿ ನೀಡಿದ್ದಾರೆ' ಎಂದು ಪಕ್ಷದ ರಾಜ್ಯ ಕಾರ್ಯಾಧ್ಯಕ್ಷ ಮೋಹನ್ ದಾಸರಿ ದೂರಿದರು.

'ಅದಾನಿಯಂತಹ ಉದ್ಯಮಿಗೆ ಲಕ್ಷಾಂತರ ಕೋಟಿ ರೂಪಾಯಿ ಲಾಭ ಮಾಡಿಕೊಟ್ಟು, ಅವರಿಂದ ಪಕ್ಷದ ಖಾತೆಗೆ ದೇಣಿಗೆ ಪಡೆಯುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ. ಚುನಾವಣೆ ವೇಳೆ ಮತದಾರರಿಗೆ ಆಮಿಷವೊಡ್ಡಲು ಹಾಗೂ ಚುನಾವಣೆಯಲ್ಲಿ ಬಹುಮತ ಬಾರದಿದ್ದರೆ 'ಆಪರೇಷನ್ ಕಮಲ' ನಡೆಸಲು ಬಿಜೆಪಿ ಈ ಹಣ ಬಳಕೆ ಮಾಡಿಕೊಳ್ಳುತ್ತಿದೆ' ಎಂದು ಪಕ್ಷದ ಬೆಂಗಳೂರು ನಗರ ಅಧ್ಯಕ್ಷ ಡಾ.ಸತೀಶ್ ಕುಮಾರ್ ಹೇಳಿದರು.

ಪ್ರತಿಭಟನೆಯಲ್ಲಿ ಚನ್ನಪ್ಪಗೌಡ ನೆಲ್ಲೂರು, ಜಗದೀಶ್ ವಿ. ಸದಂ, ಸುಮನ್ ಪ್ರಶಾಂತ್, ಉಷಾ ಮೋಹನ್, ಪುಟ್ಟಣ್ಣ, ಅಶೋಕ್ ಮೃತ್ಯುಂಜಯ, ಅರುಣ್ ಕುಮಾರ್ ಆಜಾದ್, ಅಯೂಬ್ ಖಾನ್, ಜಗದೀಶ್ ಚಂದ್ರ ಇದ್ದರು.

ಅಪಘಾತ ನೆಪದಲ್ಲಿ ₹ 25 ಸಾವಿರ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಘಾತ ನೆಪದಲ್ಲಿ ಕಂಪನಿಯೊಂದರ ಉದ್ಯೋಗಿಯ ಕಾರು ಅಡ್ಡಗಟ್ಟಿ ₹25 ಸಾವಿರ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ಮಹದೇವಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬಾಗ್ಮನೆ ಟೆಕ್‌ಪಾರ್ಕ್‌ನಲ್ಲಿರುವ ಕಂಪನಿಯೊಂದರ ಉದ್ಯೋಗಿ ಅಭಿಷೇಕ್ ಅವರು ಕೃತ್ಯದ ಬಗ್ಗೆ ತಡವಾಗಿ ದೂರು ನೀಡಿದ್ದಾರೆ. ಇಬ್ಬರು ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ವೈಟ್‌ಫೀಲ್ಡ್ ನಿವಾಸಿಯಾದ ಅಭಿಷೇಕ್, ಫೆ.2ರಂದು ಕಚೇರಿ ಕೆಲಸ ಮುಗಿಸಿ ಸಂಜೆ 6.30ರ ಸುಮಾರಿಗೆ ಮನೆಯತ್ತ ಕಾರಿನಲ್ಲಿ ಹೊರಟಿದ್ದರು. ಬೈಕ್‌ನಲ್ಲಿ ಬಂದಿದ್ದ ಇಬ್ಬರು ಆರೋಪಿಗಳು, ಮಾರ್ಗಮಧ್ಯೆಯೇ ಕಾರು ಅಡ್ಡಗಟ್ಟಿದ್ದರು.'

'ಕಾರಿನಿಂದ ಅಭಿಷೇಕ್ ಅವರನ್ನು ಇಳಿಸಿ ಜಗಳ ತೆಗೆದಿದ್ದ ಆರೋಪಿಗಳು, 'ನಮ್ಮ ಕಾರಿಗೆ ಡಿಕ್ಕಿ ಹೊಡೆದು ಬಂದಿದ್ದಿರಾ. ನಿಮ್ಮ ನಿರ್ಲಕ್ಷ್ಯದಿಂದ ಅಪಘಾತವಾಗಿದ್ದು, ತುಂಬಾ ನಷ್ಟವಾಗಿದೆ' ಎಂದಿದ್ದರು. ತಾವು ಯಾವುದೇ ಅಪಘಾತವನ್ನುಂಟು ಮಾಡಿಲ್ಲವೆಂದು ಅಭಿಷೇಕ್ ಹೇಳಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಅಭಿಷೇಕ್ ಜೊತೆ ಜಗಳ ಮುಂದುವರಿಸಿದ್ದ ಆರೋಪಿಗಳು, ₹70 ಸಾವಿರ ಪರಿಹಾರ ನೀಡಬೇಕೆಂದು ಕೇಳಿದ್ದರು. ಅದಕ್ಕೆ ಒಪ್ಪದ ಅಭಿಷೇಕ್, ಠಾಣೆಗೆ ಹೋಗೋಣವೆಂದು ಹೇಳಿದ್ದರು. ಸಿಟ್ಟಾಗಿದ್ದ ಆರೋಪಿಗಳು, ಅಭಿಷೇಕ್ ಮೇಲೆ ಹಲ್ಲೆ ಮಾಡಿದ್ದರು. ನಂತರ, ದೂರುದಾರರನ್ನು ಬೆದರಿಸಿ ಗೂಗಲ್ ಪೇ ಮೂಲಕ ₹25 ಸಾವಿರ ಸುಲಿಗೆ ಮಾಡಿ ಆರೋಪಿಗಳು ಪರಾರಿಯಾಗಿದ್ದಾರೆ' ಎಂದು ಪೊಲೀಸರು ಹೇಳಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ವರದಿ ಫಲಶ್ರುತಿ

ಕೆಂಗೇರಿ ಉಪನಗರದ ಭಗೀರಥ ಬಡಾವಣೆಯ 1ನೇ ಕ್ರಾಸ್‌ನಲ್ಲಿ 11 ಕೆವಿ ವಿದ್ಯುತ್ ಮ್ಯಾನ್‌ಹೋಲ್ ಮುಚ್ಚಳವನ್ನು ಬೆಸ್ಕಾಂ ಅಧಿಕಾರಿಗಳು ಮುಚ್ಚಿದ್ದಾರೆ. 'ಪ್ರಜಾವಾಣಿ' ಕುಂದು ಕೊರತೆ ವಿಭಾಗದಲ್ಲಿ ಫೆ. 5ರಂದು 'ತೆರೆದ ಸ್ಥಿತಿಯಲ್ಲಿ ವಿದ್ಯುತ್ ಮ್ಯಾನ್‌ಹೋಲ್' ಎಂಬ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು.



ಕೆಂಗೇರಿಯ ಭಗೀರಥ ಕ್ರಾಸ್‌ನಲ್ಲಿ ವಿದ್ಯುತ್ ಮ್ಯಾನ್‌ಹೋಲ್ ಮುಚ್ಚಿರುವುದು.



ವಿಜಯನಗರದ ಗೀತಾಂಜಲಿ ಸಮುಚ್ಚಯ ಎದುರು ರಸ್ತೆಗೆ ಬಾಗಿರುವ ಮರ

'ಬಾಗಿರುವ ಮರ ತೆರವುಗೊಳಿಸಿ'

ಬಿಬಿಎಂಪಿ ವ್ಯಾಪ್ತಿಯ ವಾರ್ಡ್ ನಂ.105 ಎಂ.ಸಿ ಬಡಾವಣೆಯ 1ನೇ ಮುಖ್ಯರಸ್ತೆಯ ಗೀತಾಂಜಲಿ ಸಮುಚ್ಚಯದ ಎದುರುಗಡೆ ಮರವೊಂದು ರಸ್ತೆಗೆ ಬಾಗಿದೆ. ಇದರಿಂದ ದಿನ ನಿತ್ಯ ಓಡಾಡುವ ಶಾಲೆಯ ಬಸ್‌ಗಳು, ಸರಕು ಸಾಗಣೆ ವಾಹನಗಳ ಸಂಚಾರಕ್ಕೆ ಅಡಚಣೆಯಾಗಿದೆ. ಮರಕ್ಕೆ ಸಿಲುಕುವ ಭಯದಿಂದ ವಾಹನಗಳು ಬಲಭಾಗಕ್ಕೆ ಚಲಿಸುತ್ತಿದ್ದು, ಇದರಿಂದ ಅಪಘಾತಗಳು ಸಂಭವಿಸುತ್ತಿವೆ. ಅನೇಕ ಬಾರಿ ವಾಹನಗಳು ಮರಕ್ಕೆ ಸಿಲುಕಿರುವ ಘಟನೆಗಳು ನಡೆದಿವೆ. ಗಾಳಿ ಮಳೆಗೆ ಬೀಳುವ ಸಾಧ್ಯತೆ ಇದೆ. ಇತ್ತೀಚೆಗೆ ರಸ್ತೆಗೆ ಸ್ವಲ್ಪ ಅಗಲವಾಗಿ ಡಾಂಬರೀಕರಣ ಮಾಡಿರುವುದರಿಂದ ವಾಹನಗಳು ಅತಿ ವೇಗವಾಗಿ ಚಲಿಸುತ್ತಿವೆ. ಅನಾಹುತಗಳು ಸಂಭವಿಸುವ ಮೊದಲು ಬಿಬಿಎಂಪಿ ಸಿಬ್ಬಂದಿ ಮರವನ್ನು ತೆರವುಗೊಳಿಸಬೇಕು.

ಕೆ ಎಸ್ ಕುಮಾರಸ್ವಾಮಿ, ವಿಜಯನಗರ



ದೂಳುಮಯ ಕತ್ರಿಗುಪ್ಪೆ ಮುಖ್ಯರಸ್ತೆ

'ಕತ್ರಿಗುಪ್ಪೆ ರಸ್ತೆ ದೂಳುಮಯ'

ಪಾದಚಾರಿ ಮಾರ್ಗ ನಿರ್ಮಾಣ, ನೀರಿನ ಪೈಪ್ ಅಳವಡಿಕೆ ಸೇರಿ ವಿವಿಧ ಕಾಮಗಾರಿಗಳ ಸಂಬಂಧ ಕತ್ರಿಗುಪ್ಪೆ ಮುಖ್ಯರಸ್ತೆಯನ್ನು ಎಲ್ಲೆಂದರಲ್ಲಿ ಅಗೆಯಲಾಗಿದೆ. ಅವುಗಳನ್ನು ಸಮರ್ಪಕವಾಗಿ ಮುಚ್ಚಿಲ್ಲ. ರಸ್ತೆ ಉಬ್ಬು ತಗ್ಗಿನಿಂದ ಕೂಡಿದ್ದು, ಸಂಚಾರ ದುಸ್ತರವಾಗಿದೆ. ರಸ್ತೆ ತುಂಬ ಜಲ್ಲಿ ಕಲ್ಲುಗಳು ಹರಡಿದ್ದು, ದ್ವಿಚಕ್ರ ವಾಹನಗಳ ಸವಾರಿ ಕಷ್ಟವಾಗಿದೆ. ಪಾದಚಾರಿ ಮಾರ್ಗ ಸೇರಿ ವಿವಿಧ ಕಾಮಗಾರಿಗಳು ಕುಂಟುತ್ತಾ ಸಾಗುತ್ತಿದೆ. ಕತ್ರಿಗುಪ್ಪೆ ವೃತ್ತದಿಂದ ವಿದ್ಯಾಪೀಠ ವೃತ್ತದವರೆಗೂ ರಸ್ತೆ ದೂಳುಮಯವಾಗಿದೆ. ಬಿಬಿಎಂಪಿ ಅಧಿಕಾರಿಗಳು ಆದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು.

ವೆಂಕಟೇಶ್, ಕತ್ರಿಗುಪ್ಪೆ ನಿವಾಸಿ

'ಹನುಮಗಿರಿ ಮುಖ್ಯರಸ್ತೆಯಲ್ಲಿ ಜಲ್ಲಿ ಕಲ್ಲು'



ಹಾಳಾಗಿರುವ ಹನುಮಗಿರಿ ಮುಖ್ಯರಸ್ತೆ

ಇಟ್ಟಮಡು ಮುಖ್ಯ ರಸ್ತೆಯಿಂದ ಸಪ್ತಗಿರಿ ನಗರ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆಯ ಮರು ಡಾಂಬರೀಕರಣ ಕಾಮಗಾರಿ ಕೆಲ ದಿನಗಳ ಹಿಂದಷ್ಟೇ ನಡೆದಿತ್ತು. ಇದರಿಂದ ಸುಗಮ ಸಂಚಾರ ಸಾಕಾರವಾಗಿತ್ತು. ಆದರೆ, ಈಗ ನಡುರಸ್ತೆಯನ್ನು ಅಗೆದು, ಪೈಪ್ ಲೈನ್ ಅಳವಡಿಕೆ ಮಾಡಲಾಗಿದೆ. ಅದನ್ನು ಸರಿಯಾಗಿ ಮುಚ್ಚದಿದ್ದರಿಂದ ಜಲ್ಲಿ ಕಲ್ಲು ರಸ್ತೆ ತುಂಬಾ ಹರಡಿಕೊಂಡಿದ್ದು, ರಸ್ತೆಯಲ್ಲಿ ಸಂಚಾರ ಕಷ್ಟವಾಗಿದೆ. ರಸ್ತೆ ತಿರುವಿನಲ್ಲಿ ಕಲ್ಲುಗಳು ಎಲ್ಲೆಡೆ ವ್ಯಾಪಿಸಿಕೊಂಡಿವೆ. ಇದರಿಂದ ವೇಗವಾಗಿ ಬರುವ ದ್ವಿಚಕ್ರ ವಾಹನಗಳು, ನಿಯಂತ್ರಣ ತಪ್ಪಿ ಅಪಘಾತಕ್ಕೆ ಒಳಗಾಗುವ ಸಾಧ್ಯತೆಯಿದೆ. ರಸ್ತೆ ಹದಗೆಟ್ಟಾಗ ಪೈಪ್ ಲೈನ್ ಅಳವಡಿಕೆ ಕಾಮಗಾರಿ ನಡೆಸದ ಜಲಮಂಡಳಿ, ಡಾಂಬರೀಕರಣದ ಬಳಿಕ ಅಗೆದಿರುವುದು ಖಂಡನೀಯ. ಆದಷ್ಟು ಬೇಗ ಸಮಸ್ಯೆ ನಿವಾರಿಸಬೇಕು.

ಕಿರಣ್ ಬಿ., ಹೊಸಕೆರೆಹಳ್ಳಿ

'ರಸ್ತೆಯಲ್ಲೇ ಹರಿವ ಚರಂಡಿ ನೀರು'

ಯಲಹಂಕ ವ್ಯಾಪ್ತಿಯ ನೇಚರ್ ನೆಸ್ಟ್ ಸಂಕೀರ್ಣದಿಂದ ಮಮ್ಮಾರೋ ರೆಸ್ಟೋರೆಂಟ್‌ವರೆಗೆ ಚರಂಡಿ ವ್ಯವಸ್ಥೆ ಇಲ್ಲ. ಅಪಾರ್ಟ್‌ಮೆಂಟ್ ಮತ್ತು ಸುತ್ತಮುತ್ತಲಿನ ಕಲುಷಿತ ತ್ಯಾಜ್ಯ ನೀರು ರಸ್ತೆಯಲ್ಲೇ ಹರಿಯುತ್ತಿದೆ. ಇದರಿಂದ ಮಕ್ಕಳು, ವೃದ್ಧರು, ಮಹಿಳೆಯರ ಓಡಾಟಕ್ಕೆ ಸಮಸ್ಯೆಯಾಗಿದೆ. ಹಲವರು ಈ ರಸ್ತೆಯನ್ನು ದಾಟಲು ಹೋಗಿ ಜಾರಿ ಬಿದ್ದಿರುವ ಘಟನೆಗಳು ನಡೆದಿವೆ. ಈ ಕುರಿತು ಬಿಬಿಎಂಪಿ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಕೂಡಲೇ ಈ ಭಾಗದಲ್ಲಿ ಚರಂಡಿ ನಿರ್ಮಿಸಿ ಈ ಸಮಸ್ಯೆಯನ್ನು ಬಗೆಹರಿಸಬೇಕು.



ಯಲಹಂಕದ ರಸ್ತೆಯಲ್ಲಿ ಹರಿಯುತ್ತಿರುವ ಚರಂಡಿ ನೀರು

ಕಾಂತರಾಜು ಕೆ.ಟಿ., ಸ್ಥಳೀಯ ನಿವಾಸಿ



ಹಲಸೂರಿನ ಪಾದಚಾರಿ ಮಾರ್ಗದಲ್ಲಿ ಕಸ ಹಾಕಿರುವುದು.

'ಪಾದಚಾರಿ ಮಾರ್ಗದಲ್ಲಿ ಕಸ'

ಟ್ರಿನಿಟಿ ಬಾರ್ ಮತ್ತು ರೆಸ್ಟೋರೆಂಟ್‌ನಿಂದ ಹಲಸೂರು ಮೆಟ್ರೊ ಸ್ಟೇಷನ್‌ಗೆ ಸಂಪರ್ಕ ಕಲ್ಪಿಸುವ ಪಾದಚಾರಿ ಮಾರ್ಗದ ಮೇಲೆ ಪ್ರತಿನಿತ್ಯ ಕಸವನ್ನು ಎಸೆಯಲಾಗುತ್ತಿದೆ. ಇದರಿಂದಾಗಿ ಪಾದಚಾರಿಗಳು ರಸ್ತೆಯಲ್ಲಿಯೇ ನಡೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಅಕ್ಕ-ಪಕ್ಕದಲ್ಲಿರುವ ಹೋಟೆಲ್‌ಗಳ ತ್ಯಾಜ್ಯವನ್ನು ಈ ಸ್ಥಳದಲ್ಲಿ ಹಾಕಲಾಗುತ್ತಿದೆ. ಇದರಿಂದ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಸಂಚರಿಸುವ ಪರಿಸ್ಥಿತಿ ಎದುರಾಗಿದೆ. ಪಾದಚಾರಿ ಮಾರ್ಗದಲ್ಲಿ ಕಸ ಎಸೆಯುವುದಕ್ಕೆ ಕಡಿವಾಣ ಹಾಕಬೇಕು.

ದೇವೇಂದ್ರ ಕುಮಾರ್, ಸ್ಥಳೀಯ ನಿವಾಸಿ

ಸಿಗದ ಹಕ್ಕುಪತ್ರ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ದಾಸರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳು ಆಗಿಲ್ಲ ಎಂದು ಆರೋಪಿಸಿ ಹೆಗ್ಗನಹಳ್ಳಿಯಲ್ಲಿ ಕಾಂಗ್ರೆಸ್ ಮುಖಂಡ ಜಿ. ಧನಂಜಯ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು

ಪೀಣ್ಯ ದಾಸರಹಳ್ಳಿ: 'ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ 2018ರಿಂದ ಇಲ್ಲಿಯವರೆಗೆ ಸಾಕಷ್ಟು ಅನುದಾನ ಬಂದಿದ್ದರೂ ಅಭಿವೃದ್ಧಿ ಕಂಡಿಲ್ಲ. ಶಾಸಕರು ಅನುದಾನ ಬಂದಿಲ್ಲವೆಂದು ಸುಳ್ಳು ಹೇಳಿಕೊಂಡು ಓಡಾಟ ನಡೆಸುತ್ತಿದ್ದಾರೆ' ಎಂದು ದಾಸರಹಳ್ಳಿ ಕ್ಷೇತ್ರದ ಕಾಂಗ್ರೆಸ್ ಮುಖಂಡ ಜಿ. ಧನಂಜಯ ಆರೋಪಿಸಿದರು.

ಪ್ರತಿಭಟನೆ ವೇಳೆ ಮಾತನಾಡಿದ ಅವರು, 'ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಿವಾನಂದನಗರ, ಹೆಗ್ಗನಹಳ್ಳಿ, ರಾಜಗೋಪಾಲನಗರ, ಮಂಜುನಾಥನಗರ, ಮಲ್ಲಸಂದ್ರದಲ್ಲಿ ಈ ಹಿಂದೆಯೇ ಬಡವರಿಗೆ ನಿವೇಶನಗಳನ್ನು ನೀಡಲಾಗಿತ್ತು. ಆದರೆ, ಇಂದಿನವರೆಗೂ ಹಲವರಿಗೆ ಹಕ್ಕುಪತ್ರ ಸಿಕ್ಕಿಲ್ಲ. ಶಾಸಕರ ಹಿಂಬಾಲಕರಿಗಷ್ಟೇ ಈ ಯೋಜನೆ ಸೌಲಭ್ಯ ಸಿಕ್ಕಿದೆ. ಬಡವರಿಗೆ ಏನೂ ಇಲ್ಲ' ಎಂದು ವಾಗ್ದಾಳಿ ನಡೆಸಿದರು.

ಪ್ರತಿಭಟನಕಾರರನ್ನು ವಶಕ್ಕೆ ಪಡೆದ ಪೊಲೀಸರು ನಂತರ ಬಿಡುಗಡೆ ಮಾಡಿದರು.

ಅರಮನೆ ಮೈದಾನ: ಎರಡು ಕಾರು ಭಸ್ಮ

ಬೆಂಗಳೂರು: ಅರಮನೆ ಮೈದಾನದ ಗೇಟ್ ನಂಬರ್ 4 ಹಾಗೂ 5ರ ಸಮೀಪದ ಪಾರ್ಕಿಂಗ್ ಜಾಗದಲ್ಲಿ ಭಾನುವಾರ ಬೆಂಕಿ ಅವಘಡ ಸಂಭವಿಸಿದ್ದು, ಎರಡು ಕಾರುಗಳು ಸಂಪೂರ್ಣ ಸುಟ್ಟಿವೆ.

'ಕಿಂಗ್ಸ್ ಕೋರ್ಟ್ ಗೇಟ್ ಬಳಿ ಕಾರುಗಳನ್ನು ನಿಲ್ಲಿಸಲಾಗಿತ್ತು. ಸಣ್ಣದಾಗಿ ಕಾಣಿಸಿಕೊಂಡ ಬೆಂಕಿಯ ಕೆನ್ನಾಲಿಗೆ ಕ್ರಮೇಣ ಹೆಚ್ಚಾಗಿತ್ತು. ಎರಡು ಕಾರುಗಳಿಗೆ ಬೆಂಕಿ ತಗುಲಿ ಉರಿಯಲಾರಂಭಿಸಿತ್ತು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.'ಎರಡು ಕಾರುಗಳು ಸಂಪೂರ್ಣ ಸುಟ್ಟಿವೆ. ಇನ್ನೊಂದು ಕಾರು ಭಾಗಶಃ ಸುಟ್ಟಿದೆ. ಬೆಂಕಿ ಹೊತ್ತಿಕೊಳ್ಳಲು ಕಾರಣ ಗೊತ್ತಾಗಿಲ್ಲ' ಎಂದರು. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ, ಎರಡು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು.


ಅನಿಲ ಸೋರಿಕೆಯಿಂದ ಬೆಂಕಿ: ಚಾಮರಾಜಪೇಟೆ ಬಳಿಯ ವಿಠ್ಠಲ್ ನಗರದ ಹೂವಿನ ಅಲಂಕಾರ ಮಳಿಗೆಯೊಂದರಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಬೆಂಕಿ ಹೊತ್ತಿಕೊಂಡಿದ್ದು, ಪೀಠೋಪಕರಣ ಹಾಗೂ ಅಲಂಕಾರಿಕ ವಸ್ತುಗಳು ಸುಟ್ಟಿವೆ.

'ಮಳಿಗೆಯಲ್ಲಿದ್ದ ಅನಿಲ ಸೋರಿಕೆಯಿಂದ ಹೊತ್ತಿಕೊಂಡ ಬೆಂಕಿ, ಪಕ್ಕದ ಮನೆಗೂ ಕ್ರಮೇಣ ವ್ಯಾಪಿಸುತ್ತಿತ್ತು. ಸ್ಥಳಕ್ಕೆ ತೆರಳಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಲಾಗಿದೆ' ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಹೇಳಿದರು.

ಕೋವಿಡ್: 28.07 ಲಕ್ಷ ಮಂದಿಗೆ ಸಮಾಲೋಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾಣಿಸಿಕೊಂಡಾಗಿನಿಂದ ಈವರೆಗೆ ಕೊರೊನಾ ಸೋಂಕಿತರಲ್ಲಿ 28.07 ಲಕ್ಷ ಮಂದಿಗೆ ಮಾನಸಿಕ ಸಮಾಲೋಚನೆ ನಡೆಸಲಾಗಿದೆ. ಪ್ರಕರಣಗಳು ನಿಯಂತ್ರಣಕ್ಕೆ ಬಂದಿದ್ದರೂ ಸೋಂಕಿತರು ಈಗ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಅರಿಯಲು ದೂರವಾಣಿ ಕರೆ ಮಾಡಲಾಗುತ್ತಿದೆ.



2020ರ ಮಾರ್ಚ್ ತಿಂಗಳಲ್ಲಿ ಕೋವಿಡ್ ಇಲ್ಲಿ ಕಾಣಿಸಿಕೊಂಡಿದ್ದು, ಪ್ರಾರಂಭಿಕ ದಿನಗಳಲ್ಲಿ ಸೋಂಕಿತರಾದವರು ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಯೂ ಇದೆ. ಈವರೆಗೆ ಸೋಂಕಿತರಾಗಿ ಮೃತಪಟ್ಟವರಲ್ಲಿ 42 ಮಂದಿ ಅನ್ಯ ಕಾರಣಗಳಿಂದ ಸಾವಿಗೀಡಾಗಿದ್ದಾರೆ. ಪ್ರಾರಂಭಿಕ ದಿನಗಳಿಂದಲೂ ಕೋವಿಡ್ ಪೀಡಿತರಾದವರಿಗೆ ಮಾನಸಿಕ ಸ್ಥೈರ್ಯ ಹೆಚ್ಚಿಸಲು, ಆಪ್ತ ಸಮಾಲೋಚನೆ ನೀಡಲು ಕರೆ ಮಾಡಲಾಗುತ್ತಿದೆ. ಈಗ ಕೋವಿಡ್ ಬಗೆಗಿನ ಆತಂಕ, ಭಯ ದೂರವಾಗಿದ್ದರೂ, ಸೋಂಕಿತರಿಗೆ ಕರೆ ಮಾಡಿ, ಅವರ ಮಾನಸಿಕ ಸ್ಥಿತಿಗತಿಯನ್ನು ಅರಿಯಲಾಗುತ್ತಿದೆ.

ಕೋವಿಡೇತರ ಸಮಸ್ಯೆಗಳಿಗೆ 'ಟೆಲಿ ಮನಸ್' ಸಹಾಯವಾಣಿ' (18008914416) ಮೂಲಕ ಪರಿಹಾರ ಒದಗಿಸಲಾಗುತ್ತಿದೆ. ಈ ಸಹಾಯವಾಣಿಗೆ ಮಾನಸಿಕ ಸಮಸ್ಯೆ ಎದುರಿಸುತ್ತಿರುವವರು ನೇರವಾಗಿ ಕರೆ ಮಾಡಬಹುದಾಗಿದೆ. ಕೋವಿಡ್ ಪೀಡಿತರಿಗೆ ಆರೋಗ್ಯ ಸಿಬ್ಬಂದಿಯೇ ಕರೆ ಮಾಡುತ್ತಿದ್ದಾರೆ.

ಸೋಂಕಿತರ ವಿಚಾರಣೆ: 'ಕೋವಿಡ್ 2ನೇ ಅಲೆಯಲ್ಲಿ ದಿನವೊಂದಕ್ಕೆ 20 ಸಾವಿರಕ್ಕೂ ಅಧಿಕ ಮಂದಿಗೆ ಧೈರ್ಯ ತುಂಬಲಾಗುತ್ತಿತ್ತು. ಆಗ ಕೆಲವರು ಭಯ, ಆತಂಕಕ್ಕೆ ಒಳಗಾಗಿದ್ದಾರು. ಆಗ ಅವರ ಮನಸ್ಥಿತಿಯನ್ನು ವಿಚಾರಿಸಿ, ಅಗತ್ಯ ಸಲಹೆ ಸೂಚನೆಗಳನ್ನು ನೀಡಲಾಗುತ್ತಿತ್ತು. ಈಗ ಪರಿಸ್ಥಿತಿ ಬದಲಾಗಿದ್ದು, ಭಯ, ಆತಂಕ ದೂರವಾಗಿದೆ. ಆದರೂ, ಸೋಂಕಿತರನ್ನು ವಿಚಾರಿಸಿ, ಸಾಮಾನ್ಯ ಸಲಹೆಗಳನ್ನು ನೀಡಲಾಗುತ್ತಿದೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ರಾಜ್ಯದಲ್ಲಿ ಈವರೆಗೆ 40.73 ಲಕ್ಷ ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಅವರಲ್ಲಿ 40.32 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಸಕ್ರಿಯ ಪ್ರಕರಣಗಳು 100 ಆಸುಪಾಸಿನಲ್ಲಿದೆ. 12 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ. ಮೂವರು ತೀವ್ರ ನಿಗಾ ಘಟಕದಲ್ಲಿ ಇದ್ದಾರೆ.

ಅಪರಾಧ ಸುದ್ದಿ

ಠಾಣೆ ಗೋಡೆಗೆ ಬ್ಯಾನರ್: ಶಾಲೆ ವಿರುದ್ಧ ಎಫ್‌ಐಆರ್

ಬೆಂಗಳೂರು: ಬಸವೇಶ್ವರನಗರ ಪೊಲೀಸ್ ಠಾಣೆ ಕಟ್ಟಡದ ಗೋಡೆಗೆ ಬ್ಯಾನರ್ ಕಟ್ಟಿದ್ದ ಆರೋಪದಡಿ ಸರ್ವೋದಯ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಆಡಳಿತ ಮಂಡಳಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ದಾಸರಹಳ್ಳಿ ರಸ್ತೆಗೆ ಹೊಂದಿಕೊಂಡಿರುವ ಠಾಣೆ ಕಟ್ಟಡದ ಗೋಡೆಗೆ ಶಾಲಾ ಪ್ರವೇಶಾತಿ ಜಾಹೀರಾತಿನ ಬ್ಯಾನರ್ ಕಟ್ಟಲಾಗಿತ್ತು. ಗಸ್ತಿನಲ್ಲಿದ್ದ ಹೆಡ್ ಕಾನ್‌ಸ್ಟೆಬಲ್, ಬ್ಯಾನರ್ ಗಮನಿಸಿ ಠಾಣೆಗೆ ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಸಾರ್ವಜನಿಕ ಆಸ್ತಿಯನ್ನು ವಿಕಾರಗೊಳಿಸಿದ ಆರೋಪದಡಿ ಶಾಲೆ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆಡಳಿತ ಮಂಡಳಿಗೆ ನೋಟಿಸ್ ನೀಡಿ, ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಬೈಕ್ ಉರುಳಿಬಿದ್ದು ಸವಾರ ಸಾವು

ಬೆಂಗಳೂರು: ಮಾಗಡಿ ರಸ್ತೆ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬೈಕ್ ಉರುಳಿಬಿದ್ದು, ಸವಾರ ಎಸ್.ಕೆ. ಸಂಜಯ್‌ಕುಮಾರ್ (26) ಎಂಬುವರು ಮೃತಪಟ್ಟಿದ್ದಾರೆ.

'ಸಪ್ತಗಿರಿ ಬಡಾವಣೆ ನಿವಾಸಿ ಸಂಜಯ್ ಕುಮಾರ್, ನೃತ್ಯಗಾರ. ಸಂಸ್ಥೆಯೊಂದರಲ್ಲಿ ಮಕ್ಕಳಿಗೆ ನೃತ್ಯ ಹೇಳಿಕೊಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಸ್ನೇಹಿತರ ಜೊತೆ ಶನಿವಾರ ಪಾರ್ಟಿ ಮಾಡಿದ್ದರು ಎನ್ನಲಾದ ಸಂಜಯ್‌ಕುಮಾರ್, ತಡರಾತ್ರಿ 1.30 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಮನೆಯತ್ತ ಹೊರಟಿದ್ದರು. ಇದೇ ಸಂದರ್ಭದಲ್ಲಿ ಬೈಕ್ ಉರುಳಿಬಿದ್ದಿತ್ತು. ರಸ್ತೆಗೆ ಬಿದ್ದ ಸಂಜಯ್‌ಕುಮಾರ್ ತಲೆಗೆ ತೀವ್ರ ಪೆಟ್ಟಾಗಿತ್ತು' ಎಂದು ತಿಳಿಸಿದರು.

'ಸಂಜಯ್, ಹೆಲ್ಮೆಟ್ ಧರಿಸಿರಲಿಲ್ಲ. ಪಾನಮತ್ತರಾಗಿ ಬೈಕ್ ಚಲಾಯಿಸುತ್ತಿದ್ದ ಬಗ್ಗೆ ಅನುಮಾನವಿದೆ. ಅವರ ನಿರ್ಲಕ್ಷ್ಯ ಹಾಗೂ ಅತಿವೇಗದ ಚಾಲನೆಯೇ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಪತ್ನಿಗೆ ತ್ರಿವಳಿ ತಲಾಖ್: ವೈದ್ಯ ಬಂಧನ

ನವದೆಹಲಿ (ಪಿಟಿಐ): 'ಪತ್ನಿಗೆ ತ್ರಿವಳಿ ತಲಾಖ್ ನೀಡಿದ್ದ ನಗರದ ವೈದ್ಯರೊಬ್ಬರನ್ನು ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿದೆ' ಎಂದು ದೆಹಲಿ ಪೊಲೀಸರು ಭಾನುವಾರ ಹೇಳಿದ್ದಾರೆ.

'ಆರೋಪಿ ಬೆಂಗಳೂರು ವಿಮಾನ ನಿಲ್ದಾಣದ ಮೂಲಕ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಲು ಸಜ್ಜಾಗಿದ್ದರು. ಈ ವೇಳೆ ಅವರನ್ನು ಬಂಧಿಸಲಾಗಿದೆ. 2022ರ ಅಕ್ಟೋಬರ್ 13ರಂದು ಘಟನೆ ನಡೆದಿತ್ತು. ಈ ಕುರಿತು ಮಹಿಳೆಯು ಈ ತಿಂಗಳ ಆರಂಭದಲ್ಲಿ ದೆಹಲಿಯ ಕಲ್ಯಾಣ್‌ಪುರಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆರೋಪಿಯು ಬೆಂಗಳೂರಿನಲ್ಲಿ ಇರುವುದು ತನಿಖೆಯಿಂದ ಗೊತ್ತಾಗಿತ್ತು. ಹೀಗಾಗಿ ಪೊಲೀಸರ ತಂಡವೊಂದನ್ನು ಬೆಂಗಳೂರಿಗೆ ಕಳುಹಿಸಲಾಗಿತ್ತು. ಅವರು ಇದೇ 9ರಂದು ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತಂದಿದ್ದರು' ಎಂದು ಮಾಹಿತಿ ನೀಡಿದ್ದಾರೆ.

'2018ರಲ್ಲಿ ಮಹಿಳೆಗೆ ಆರೋಪಿಯ ಪರಿಚಯವಾಗಿತ್ತು. ಇಬ್ಬರೂ 2020ರಲ್ಲಿ ವಿವಾಹವಾಗಿದ್ದರು. ದಂಪತಿಗೆ ಮಕ್ಕಳಾಗಿರಲಿಲ್ಲ' ಎಂದಿದ್ದಾರೆ.

ಏರೋ ಇಂಡಿಯಾ: 2025ರ ವೇಳೆಗೆ ₹1.75 ಲಕ್ಷ ಕೋಟಿ ವಹಿವಾಟು ನಿರೀಕ್ಷೆ– ತಂತ್ರಜ್ಞಾನಗಳ ಅನಾವರಣ

ವೈಮಾನಿಕ ಕ್ಷೇತ್ರದ ಸ್ವಾವಲಂಬನೆಯ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದುವರೆಗಿನ ಅತಿ ದೊಡ್ಡ ವೈಮಾನಿಕ ಮತ್ತು ರಕ್ಷಣಾ ಪ್ರದರ್ಶನ ಎಂದೇ ಖ್ಯಾತಿ ಪಡೆದಿರುವ 'ಏರೋ ಇಂಡಿಯಾ–2023'ಕ್ಕೆ ವೇದಿಕೆ ಸಜ್ಜುಗೊಂಡಿದ್ದು, ಪ್ರಮುಖವಾಗಿ ವೈಮಾನಿಕ ಕ್ಷೇತ್ರದ ಸ್ವಾವಲಂಬನೆ ಸಾಧಿಸುವ ಆಶಯ ಹೊಂದಿದೆ.

'2025ರ ವೇಳೆಗೆ ವೈಮಾನಿಕ ಕ್ಷೇತ್ರದಲ್ಲಿ ₹1.75 ಲಕ್ಷ ಕೋಟಿ ವಹಿವಾಟಿನ ಗುರಿ ಹೊಂದಲಾಗಿದೆ. ವೈಮಾನಿಕ ಕ್ಷೇತ್ರದಲ್ಲಿನ ಭಾರತದ ಸಾಮರ್ಥ್ಯ ಮತ್ತು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವುದನ್ನು ಏರೋ ಇಂಡಿಯಾದಲ್ಲಿ ಅನಾವರಣಗೊಳಿಸಲಾಗುವುದು ಎಂದು ಕಮಾಂಡರ್ ಅಚಲ್ ಮಲ್ಹೋತ್ರಾ ಭಾನುವಾರ ತಿಳಿಸಿದರು.

'ರಕ್ಷಣಾ ವಲಯದಲ್ಲಿ ವಿದೇಶಿ ಹೂಡಿಕೆ ಆಕರ್ಷಿಸುವುದು, ಮಾನವ ರಹಿತ ವಿಮಾನಗಳ ವಲಯಕ್ಕೆ ಉತ್ತೇಜನ ನೀಡುವುದು ಸೇರಿದಂತೆ ರಕ್ಷಣಾ ವಲಯವನ್ನು ಬಲಪಡಿಸುವ ಆಶಯವನ್ನು ಏರೋ ಇಂಡಿಯಾ ಹೊಂದಿದೆ. ಕರ್ನಾಟಕ ಸರ್ಕಾರವು 32 ಒಪ್ಪಂದಗಳಿಗೆ ಸಹಿ ಹಾಕಲಿದೆ' ಎಂದು ತಿಳಿಸಿದರು.

ಪೆವಿಲಿಯನ್ ಉದ್ಘಾಟನೆ: ಮೊದಲ ದಿನವಾದ ಸೋಮವಾರ ಏರೋ ಇಂಡಿಯಾಗೆ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಲಿದ್ದಾರೆ. ನಂತರ, ವಿಮಾನಗಳ ಹಾರಾಟ ಪ್ರದರ್ಶನ, ಭಾರತೀಯ ಪೆವಿಲಿಯನ್ ಉದ್ಘಾಟನೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ, ಸೆಮಿನಾರ್‌ಗಳು ನಡೆಯಲಿವೆ.

ಭಾರತೀಯ ಪೆವಿಲಿಯನ್‌ನಲ್ಲಿ 115 ಕಂಪನಿಗಳು ಭಾಗವಹಿಸಲಿದ್ದು, 227 ವಿವಿಧ ಉಪಕರಣಗಳನ್ನು ಪ್ರದರ್ಶಿಸಲಿವೆ. ಎಲ್‌ಸಿಎ ತೇಜಸ್, ಡ್ರೋನ್‌ಗಳು, ಡ್ರೋನ್ ನಿರೋಧಕ ತಂತ್ರಜ್ಞಾನ ಮತ್ತು ರಕ್ಷಣಾ ವಲಯದಲ್ಲಿ ಬಳಕೆಯಾಗುವ ಬಾಹ್ಯಾಕಾಶ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆ, ರೋಬೋಟಿಕ್ಸ್ ಭಾರತ ಪೆವಿಲಿಯನ್‌ನ ಪ್ರಮುಖ ಆಕರ್ಷಣೆಯಾಗಲಿವೆ. ಎರಡನೇ ದಿನವಾದ ಮಂಗಳವಾರ ರಕ್ಷಣಾ ಸಚಿವರ ಸಮ್ಮೇಳನ ನಡೆಯಲಿದೆ.

ಬೆಂಗಳೂರಿಗೆ ಮೋದಿ: ಯಲಹಂಕ ವಾಯುನೆಲೆಯಲ್ಲಿ ಆಯೋಜಿಸಲಾಗಿರುವ ಏರೋ ಇಂಡಿಯಾ-2023ರಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರು ಭಾರತೀಯ ವಾಯುಪಡೆಯ ವಿಶೇಷ ವಿಮಾನದ ಮೂಲಕ ಭಾನುವಾರ ಸಂಜೆ ನಗರದ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬಂದಿಳಿದರು. ಅಲ್ಲಿಂದ ರಾಜಭವನಕ್ಕೆ ತೆರಳಿದರು.

ಸಂಗೀತ ಕಾರ್ಯಕ್ರಮ 15ಕ್ಕೆ: ಯುನೈಟೆಡ್ ಸ್ಟೇಟ್ಸ್ (ಯುಎಸ್) 'ಏರ್ ಫೋರ್ಸ್ ಬ್ಯಾಂಡ್ ಆಫ್ ದಿ ಪೆಸಿಫಿಕ್ ಫೈನಲ್ ಅಪ್ರೋಚ್' ತಂಡವು ಫೆ. 15ರಂದು ನಗರದ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಸಂಗೀತ ಕಾರ್ಯಕ್ರಮ ನೀಡಲಿದೆ.

2023ರ ಏರೋ ಇಂಡಿಯಾ ಪ್ರದರ್ಶನದ ಅಂಗವಾಗಿ ಭಾರತಕ್ಕೆ ಬಂದಿರುವ ಏಳು ಜನರ ಯುಎಸ್ ಪೆಸಿಫಿಕ್ ತಂಡವು ಈ ಪ್ರದರ್ಶನದಲ್ಲಿ ಸಂಗೀತ ಕಾರ್ಯಕ್ರಮ ನೀಡಲಿದೆ. ಅದರ ಜೊತೆಗೆ ಸಂಗೀತದ ಕುರಿತು ಕಾರ್ಯಾಗಾರ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ಬೆಂಗಳೂರಿಗೆ ಭಾನುವಾರ ಸಂಜೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಇದ್ದರು.

ಏನೇನು ವಿಶೇಷತೆ?

- ಏರ್‌ಬಸ್, ಬೋಯಿಂಗ್, ಡಸಾಲ್ಟ್ ಏವಿಯೇಷನ್, ಎಚ್‌ಎಎಲ್, ಬಿಇಎಂಎಲ್, ಬಿಇಎಲ್, ಬ್ರಹ್ಮೋಸ್ ಏರೋ ಸ್ಪೇಸ್ ಕಂಪನಿಗಳು ಭಾಗಿ
- ಐದು ದಿನಗಳಲ್ಲಿ ಐದು ಲಕ್ಷ ಜನರು ಪಾಲ್ಗೊಳ್ಳುವ ನಿರೀಕ್ಷೆ

2 ಸಾವಿರ ಪೊಲೀಸರ ನಿಯೋಜನೆ

ಏರೋ ಇಂಡಿಯಾ ಪ್ರದರ್ಶನ ವೇಳೆ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ.

ಪ್ರದರ್ಶನ ಉದ್ಘಾಟನೆಗಾಗಿ ಭಾನುವಾರ ನಗರಕ್ಕೆ ಆಗಮಿಸಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ರಾಜಭವನದಲ್ಲಿ ಉಳಿದುಕೊಂಡಿದ್ದಾರೆ.

ಪ್ರದರ್ಶನ ನಡೆಯುವ ಯಲಹಂಕ ವಾಯುನೆಲೆ ಹಾಗೂ ಸುತ್ತಮುತ್ತ 2 ಸಾವಿರಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ.

ವಾಯುನೆಲೆ ಸುತ್ತಮುತ್ತಲಿನ ರಸ್ತೆಗಳಲ್ಲಿ ಭಾರಿ ವಾಹನಗಳ ಸಂಚಾರವನ್ನು ಈಗಾಗಲೇ ನಿರ್ಬಂಧಿಸಲಾಗಿದೆ. ಫೆ. 13ರಿಂದ 17ರವರೆಗೆ ಪ್ರಮುಖ ರಸ್ತೆಗಳಲ್ಲಿ ಪೊಲೀಸರು ಕಾವಲು ಕಾಯಲಿದ್ದಾರೆ.

ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ, ಹೆಚ್ಚುವರಿ ಪೊಲೀಸ್ ಕಮಿಷನರ್‌ಗಳು, ಡಿಸಿಪಿಗಳು, ಎಸಿಪಿಗಳು, ಇನ್‌ಸ್ಪೆಕ್ಟರ್‌ಗಳು ಹಾಗೂ ಪಿಎಸ್‌ಐ ಭದ್ರತೆ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

2023 ಏರೋ ಇಂಡಿಯಾ

ಭೋಜನಕೂಟ: ಮೋದಿ ಜತೆ ಚಿತ್ರನಟರು

ರಾಜಭವನದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಭಾನುವಾರ ರಾತ್ರಿ ಏರ್ಪಡಿಸಿದ್ದ ಭೋಜನಕೂಟದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಕನ್ನಡ ಚಿತ್ರರಂಗದ ನಟರಾದ ಯಶ್, ರಿಷಬ್ ಶೆಟ್ಟಿ, ನಿರ್ಮಾಪಕರಾದ ಅಶ್ವಿನಿ ಪುನೀತ್‌ರಾಜ್‌ಕುಮಾರ್, ವಿಜಯ್ ಕಿರಗಂದೂರು ಭಾಗವಹಿಸಿದ್ದರು.

ನಟಿ ಶ್ರದ್ಧಾ ಜೈನ್, ನಿರ್ದೇಶಕ ಪ್ರಶಾಂತ್ ನೀಲ್, ಕ್ರಿಕೆಟ್ ಆಟಗಾರರಾದ ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್, ಅನಿಲ್ ಕುಂಬ್ಳೆ ದಂಪತಿ, ಮಯಂಕ್ ಅಗರವಾಲ್, ಮನೀಷ್ ಪಾಂಡೆ, ಉದ್ಯಮಿಗಳಾದ ನಿತಿನ್ ಕಾಮತ್, ತರುಣ್ ಮೆಹ್ತಾ ಪಾಲ್ಗೊಂಡಿದ್ದರು.

ಹಕ್ಕುಸ್ವಾಮ್ಯ ಉಲ್ಲಂಘನೆ: ರಿಷಬ್ ಹೇಳಿಕೆ ದಾಖಲು

ಕೋಯಿಕ್ಕೋಡ್, ಕೇರಳ (ಪಿಟಿಐ): ಹಾಡಿನ ಹಕ್ಕುಸ್ವಾಮ್ಯ ಉಲ್ಲಂಘಿಸಿದ ಆರೋಪ ಎದುರಿಸುತ್ತಿರುವ 'ಕಾಂತಾರ' ಚಿತ್ರದ ನಿರ್ದೇಶಕ ರಿಷಬ್ ಶೆಟ್ಟಿ ಹಾಗೂ ನಿರ್ಮಾಪಕ ವಿಜಯ್ ಕಿರಗಂದೂರು ಅವರು ಭಾನುವಾರ ಕೋಯಿಕ್ಕೋಡ್ ಪೊಲೀಸ್ ಠಾಣೆಯ ತನಿಖಾಧಿಕಾರಿಗಳ ಎದುರು ಹಾಜರಾಗಿದ್ದಾರೆ.

'ಕಾಂತಾರ' ಸಿನಿಮಾದಲ್ಲಿ 'ನವರಸಂ' ಹಾಡನ್ನು ಅನುಮತಿಯಿಲ್ಲದೆಯೇ ಬಳಸಿಕೊಳ್ಳಲಾಗಿದೆ ಎಂದು ಹಾಡಿನ ಹಕ್ಕುಸ್ವಾಮ್ಯ ಹೊಂದಿರುವ ಮಾತೃಭೂಮಿ ಪ್ರಕಾಶನ ಹಾಗೂ 'ತೈಕುಡಂ ಬ್ರಿಡ್ಜ್' ತಂಡವು ದೂರು ನೀಡಿದ್ದವು.

ಕೋಯಿಕ್ಕೋಡ್ ಹಾಗೂ ಪಾಲಕ್ಕಾಡ್ ಜಿಲ್ಲಾ ಕೋರ್ಟ್‌ಗಳಲ್ಲಿ ವಿಚಾರಣೆ ನಡೆದಾಗ, 'ಈ ಪ್ರಕರಣವು ಈ ಕೋರ್ಟ್‌ನಲ್ಲಿ ವಿಚಾರಣೆಗೆ ಸೂಕ್ತವಾಗಿಲ್ಲ. ಆದ್ದರಿಂದ ವಾಣಿಜ್ಯ ವ್ಯಾಜ್ಯಗಳನ್ನು ವಿಚಾರಣೆ ಮಾಡುವಂಥ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ' ಎಂದಿದ್ದವು.

ಬಳಿಕ ಮಾತೃಭೂಮಿ ಪ್ರಕಾಶನ ಹಾಗೂ ತೈಕುಡಂ ಬ್ರಿಡ್ಜ್ ತಂಡವು ಕೇರಳ ಹೈಕೋರ್ಟ್ ಮೆಟ್ಟಿಲೇರಿದ್ದವು. ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್ ಇದೇ 12 ಮತ್ತು 13ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯೊಳಗೆ ತನಿಖಾಧಿಕಾರಿಗಳ ಎದುರು ಹಾಜರಾಗುವಂತೆ ಇಬ್ಬರಿಗೂ ಸೂಚಿಸಿತ್ತು.

'ನ್ಯಾಯಾಲಯದ ನಿರ್ದೇಶನದಂತೆ ರಿಷಬ್ ಹಾಗೂ ವಿಜಯ್ ಅವರು ತನಿಖಾಧಿಕಾರಿಗಳ ಎದುರು ಹಾಜರಾಗಿದ್ದರು. ಅವರ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಅಗತ್ಯವಿದ್ದರೆ ಮತ್ತೊಮ್ಮೆ ಅವರನ್ನು ಠಾಣೆಗೆ ಕರೆಸಲಾಗುತ್ತದೆ' ಎಂದು ಜಿಲ್ಲೆಯ ಉನ್ನತ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹಕ್ಕುಸ್ವಾಮ್ಯ ಉಲ್ಲಂಘನೆ ಪ್ರಕರಣದ ಅಂತಿಮ ತೀರ್ಪು ಬರುವವರೆಗೂ 'ವರಾಹ ರೂಪಂ' ಹಾಡಿನೊಂದಿಗೆ ಸಿನಿಮಾ ಪ್ರದರ್ಶಿಸಬಾರದು ಎಂಬ ಷರತ್ತಿನೊಂದಿಗೆ ಕೇರಳ ಹೈಕೋರ್ಟ್ ಇದೇ 8ರಂದು ನಿರ್ಮಾಪಕ ಹಾಗೂ ನಿರ್ದೇಶಕರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು. ಈ ಷರತ್ತನ್ನು ಪ್ರಶ್ನಿಸಿ ಇಬ್ಬರೂ ಮೇಲ್ಮನವಿ ಸಲ್ಲಿಸಿದ್ದರು. ಇದೇ 10ರಂದು ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಹೈಕೋರ್ಟ್ ಆದೇಶಕ್ಕೆ ತಡೆ ನೀಡಿತ್ತು. ಒಂದು ವೇಳೆ ರಿಷಬ್ ಮತ್ತು ವಿಜಯ್ ಅವರನ್ನು ಬಂಧಿಸಿದ್ದೇ ಆದಲ್ಲಿ ಕೂಡಲೇ ಜಾಮೀನಿನ ಮೇಲೆ ಬಿಡುಗಡೆಗೊಳಿಸಬೇಕು ಎಂದೂ ಸೂಚಿಸಿತ್ತು.

ಆರೋಪಿಗಳು ಸಾಕ್ಷ್ಯ ನಾಶಕ್ಕೆ ಮುಂದಾಗಬಾರದು. ಸಾಕ್ಷಿಗಳನ್ನು ಬೆದರಿಸಬಾರದು. ತನಿಖೆಗೆ ಸಹಕರಿಸಬೇಕು. ವಿಚಾರಣೆಗೆ ಲಭ್ಯರಾಗಬೇಕು. ಆರೋಪಿಗಳು ಅಥವಾ ಅರ್ಜಿದಾರರು ಸಂಬಂಧಪಟ್ಟ ನ್ಯಾಯಾಲಯದ ಪೂರ್ವಾನುಮತಿ ಇಲ್ಲದೆಯೇ ದೇಶ ತೊರೆಯಬಾರದು ಎಂದೂ ಹೈಕೋರ್ಟ್ ತಾಕೀತು ಮಾಡಿತ್ತು.

ಚನ್ನಪಟ್ಟಣ: ಪ್ರಸನ್ನ ಗೌಡ, ನಟಿ ರಮ್ಯಾ ಕಾಂಗ್ರೆಸ್ ಅಭ್ಯರ್ಥಿ?

• ಎಚ್.ಎಂ. ರಮೇಶ್



ಪ್ರಸನ್ನ ಪಿ. ಗೌಡ

ಚನ್ನಪಟ್ಟಣ: ಮುಂಬರುವ ವಿಧಾನಸಭಾ ಚುನಾವಣೆಗೆ ಚನ್ನಪಟ್ಟಣ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಉದ್ಯಮಿ ಪ್ರಸನ್ನ ಪಿ. ಗೌಡ ಹೆಸರು ಅಂತಿಮವಾಗುವುದು ಬಹುತೇಕ ಖಚಿತವಾಗಿದೆ. ಚಿತ್ರನಟಿ ರಮ್ಯಾ ಅಲಿಯಾಸ್ ದಿವ್ಯ ಸ್ಪಂದನಾ ಅವರ ಹೆಸರೂ ಚಾಲ್ತಿಯಲ್ಲಿದೆ.

ಶಾಸಕ ಎಚ್.ಡಿ. ಕುಮಾರಸ್ವಾಮಿ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಎದುರು ಸಮರ್ಥ ಅಭ್ಯರ್ಥಿಯೊಬ್ಬರ ಹುಡುಕಾಟದಲ್ಲಿದ್ದ ಕಾಂಗ್ರೆಸ್ ವರಿಷ್ಠರು ಉದ್ಯಮಿ ಪ್ರಸನ್ನ ಹೆಸರನ್ನು ಅಂತಿಮಗೊಳಿಸಿದ್ದಾರೆ ಎಂದು ತಿಳಿದುಬಂದಿದೆ.

ಪಕ್ಷದ ಸಾಂಪ್ರದಾಯಿಕ ಮತಗಳ ಜತೆಗೆ ಮಹಿಳಾ ಮತದಾರರನ್ನು ಸೆಳೆಯಬಹುದು ಎನ್ನುವ ಲೆಕ್ಕಾಚಾರದಲ್ಲಿರುವ ವರಿಷ್ಠರು ನಟಿ ರಮ್ಯಾ ಅವರ ಹೆಸರನ್ನೂ ಪರಿಶೀಲಿಸುತ್ತಿದ್ದಾರೆ. ಒಂದು ವೇಳೆ ರಮ್ಯಾ ಸೋತರೂ ಅವರನ್ನು ವಿಧಾನ ಪರಿಷತ್‌ಗೆ ಕಳುಹಿಸಲು ತೀರ್ಮಾನಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಡಿ.ಕೆ. ಸಹೋದರರ ಭಾವ ಶರತ್ ಚಂದ್ರ ಕೂಡ ಟಿಕೆಟ್ ಕೋರಿ ಅರ್ಜಿ ಸಲ್ಲಿಸಿದ್ದರು.ಟಿಕೆಟ್ ಸಿಗುವುದಿಲ್ಲ ಎಂದು ಖಚಿತವಾದ ಬಳಿಕ ಅವರು ಈಚೆಗೆ ಕಾಂಗ್ರೆಸ್ ತೊರೆದು ಎಎಪಿ ಸೇರಿದ್ದಾರೆ. ಇದರಿಂದ ಪ್ರಸನ್ನ ಅವರ ದಾರಿ ಸುಗಮವಾಗಿದೆ.

'ಬಿಜೆಪಿಗೆ ಸೋಲು ಭೀತಿ ಶುರುವಾಗಿದೆ'

ಕನಕಪುರ: 'ಮುಂಬರುವ ವಿಧಾನಸಭೆಯ ಚುನಾವಣೆಯಲ್ಲಿ ಸೋಲುವುದು ಬಿಜೆಪಿಯವರಿಗೆ ಖಚಿತವಾಗಿದೆ. ಇದೇ ಕಾರಣಕ್ಕೆ ಕೇಂದ್ರದ ನಾಯಕರು ಪದೇ ಪದೇ ರಾಜ್ಯಕ್ಕೆ ಬರುತ್ತಿದ್ದಾರೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

'ಪ್ರಧಾನಿಯಷ್ಟೇ ಅಲ್ಲ, ಯಾರೇ ಬಂದರೂ ಪ್ರಯೋಜನವಾಗದು. ರಾಜ್ಯದ ಜನತೆ ಅದಾಗಲೇ ಬಿಜೆಪಿಯನ್ನು ಮನಸ್ಸಿನಿಂದ ಕಿತ್ತು ಒಗೆದಿದ್ದಾರೆ. ಅವರು ಏನೇ ಮಾಡಿದರೂ ಪ್ರಯೋಜನವಾಗದು' ಎಂದರು.

'ನಮ್ಮ ಹಿಂದಿನ ಸರ್ಕಾರದಲ್ಲಿ ಕೊಟ್ಟಿರುವ ಭಾಗ್ಯಗಳ ಜತೆಗೆ ಗೃಹಲಕ್ಷ್ಮಿ ಮತ್ತು ಗೃಹ ಜ್ಯೋತಿ ಭಾಗ್ಯ ಕೊಡುತ್ತೇವೆ. ಜನರು ನಮ್ಮ ಕೈ ಹಿಡಿಯಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿಧಾನಸೌಧ: ತಪ್ಪಾಗಿ ಕನ್ನಡ ಬಳಕೆ

ಬೆಂಗಳೂರು: 'ವಿಧಾನಸೌಧದ ನಾಮಫಲಕದಲ್ಲಿ ಕನ್ನಡವನ್ನು ತಪ್ಪಾಗಿ ಬರೆಯಲಾಗಿದ್ದು, 'ಮೊದಲನೆ ಮಹಡಿ' ಎಂಬ ಪದವನ್ನು 'ಮಾದಲನೇ ಮಹಡಿ' ಎಂದು ಬರೆಯಲಾಗಿದೆ. ಕೂಡಲೇ ಈ ರೀತಿಯ ದೋಷಗಳನ್ನು ಸರಿಪಡಿಸಬೇಕು' ಎಂದು ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಆಗ್ರಹಿಸಿದ್ದಾರೆ.

'ಕನ್ನಡವನ್ನು ಆಡಳಿತ ಭಾಷೆಯಾಗಿ ಅನುಷ್ಠಾನಗೊಳಿಸಲು ಸರ್ಕಾರ 300ಕ್ಕೂ ಹೆಚ್ಚು ಆದೇಶಗಳನ್ನು ಹೊರಡಿಸಿದೆ. ಕನ್ನಡವನ್ನು ಆಡಳಿತದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರವೇ ಇದೆ. ಆದರೆ, ಮುಖ್ಯಮಂತ್ರಿ ಕಚೇರಿಯಲ್ಲೇ ಕನ್ನಡವನ್ನು ಬಳಸುತ್ತಿಲ್ಲ ಎಂಬುದು ಚೋದ್ಯದ ಸಂಗತಿ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ವಿಧಾನಸೌಧದಲ್ಲಿಯೇ ಕನ್ನಡದ ಬಳಕೆ ಹೀಗಾದರೆ, ಬೇರೆಡೆ ಕನ್ನಡ ಹೇಗೆ ಬಳಕೆಯಾಗುತ್ತದೆ? ಈ ವಿಷಯವನ್ನು ನಮ್ಮ ಶಾಸಕರು ಸದನದಲ್ಲಿ ಪ್ರಸ್ತಾಪಿಸಬೇಕು' ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.



ವಿಧಾನಸೌಧದಲ್ಲಿನ ನಾಮ ಫಲಕದಲ್ಲಿ ಕನ್ನಡದ ಅಕ್ಷರವನ್ನು ತಪ್ಪಾಗಿ ಬರೆದಿರುವುದು

ಅಲ್ಲಾ ಆರಾಧಕನಾಗಿದ್ದ ಮನು: ವಿವಾದ ಸೃಷ್ಟಿಸಿದ ಮೌಲಾನಾ ಅರ್ಷದ್

ನವದೆಹಲಿ (ಪಿಟಿಐ): 'ಓಂ' ಮತ್ತು 'ಅಲ್ಲಾ' ಒಂದೇ. ಈ ದೇವರನ್ನು ಮನು ಆರಾಧಿಸುತ್ತಿದ್ದ' ಎಂದು ಜಮೀಯತ್ ಉಲಮಾ-ಇ-ಹಿಂದ್ ಮುಖ್ಯಸ್ಥ ಮೌಲಾನಾ ಅರ್ಷದ್ ಮದನಿ ಅವರು ಭಾನುವಾರ ಹೇಳಿರುವುದು ವಿವಾದಕ್ಕೆ ಕಾರಣವಾಗಿದೆ.

ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಜೈನ ಧರ್ಮ ಗುರುವೊಬ್ಬರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ವೇದಿಕೆಯಿಂದ ಕೆಳಗಿಳಿದಿದ್ದಾರೆ. ಅವರ ಜೊತೆಗೆ ಇತರ ಧಾರ್ಮಿಕ ಮುಖಂಡರೂ ವೇದಿಕೆ ತೊರೆದಿದ್ದಾರೆ.

ರಾಮ್‌ಲೀಲಾ ಮೈದಾನದಲ್ಲಿ ಜಮೀಯತ್‌ನ 34ನೇ ಸಾಮಾನ್ಯ ಅಧಿವೇಶನದ ಅಂತಿಮ ದಿನವಾದ ಭಾನುವಾರ ಮಾತನಾಡಿದ ಅರ್ಷದ್, 'ಶ್ರೀ ರಾಮ, ಬ್ರಹ್ಮ, ಶಿವ ಹೀಗೆ ಯಾವ ದೇವರೂ ಇಲ್ಲದಿದ್ದಾಗ ಯಾರನ್ನು ಆರಾಧಿಸಲಾಗುತ್ತಿತ್ತು ಎಂದು ಧರ್ಮಗುರುಗಳನ್ನು ಕೇಳಿದೆ. ಆಗ ಕೆಲವರು ಶಿವನನ್ನು ಮನು ಪೂಜಿಸುತ್ತಿದ್ದ ಎಂದರೆ, ಇನ್ನು ಕೆಲವರು ಜಗತ್ತಿನಲ್ಲಿ ಏನೂ ಇಲ್ಲ, ಮನು 'ಓಂ'ನ ಆರಾಧಕನಾಗಿದ್ದ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ' ಎಂದು ತಿಳಿಸಿದ್ದಾರೆ.

'ಓಂ ಎಂದರೆ ಯಾರು ಎಂದು ಕೇಳಿದೆ. ಅದು ಕೇವಲ ಗಾಳಿ. ಅದಕ್ಕೆ ರೂಪವಿಲ್ಲ, ಬಣ್ಣವಿಲ್ಲ ಮತ್ತು ಅದು ಎಲ್ಲೆಡೆ ಇದೆ. ಅದು ಆಕಾಶ ಮತ್ತು ಭೂಮಿಯನ್ನು ಸೃಷ್ಟಿಸಿದೆ ಎಂದು ಕೆಲವರು ಹೇಳಿದರು. ನಾವು ಇದನ್ನು 'ಅಲ್ಲಾ' ಎಂದು ಕರೆಯುತ್ತೇವೆ, ನೀವು ಈಶ್ವರ ಎಂದು ಕರೆಯುತ್ತೀರಿ. ಪರ್ಷಿಯನ್ ಮಾತನಾಡುವವರು 'ಖುದಾ' ಎಂದು ಕರೆಯುತ್ತಾರೆ ಮತ್ತು ಇಂಗ್ಲಿಷ್ ಭಾಷಿಗರು ದೇವರೆಂದು ಸಂಬೋಧಿಸುತ್ತಾರೆ. ಇದರರ್ಥ ಮನು ಅಂದರೆ ಆದಮ್. ಇಬ್ಬರೂ ಓಂ ಅನ್ನು ಆರಾಧಿಸುತ್ತಿದ್ದರು. ಅಂದರೆ ಅದು ಅಲ್ಲಾ' ಎಂದಿದ್ದಾರೆ.

ಅರ್ಷದ್ ಅವರ ಹೇಳಿಕೆಯನ್ನು ಜೈನ ಸನ್ಯಾಸಿ ಆಚಾರ್ಯ ಲೋಕೇಶ್ ಮುನಿ ಅವರು ಖಂಡಿಸಿದ್ದಾರೆ. ಅರ್ಷದ್ ಅವರು ಏಕತೆಯ ಬಗ್ಗೆ ಮಾತನಾಡುವುದನ್ನು ಬಿಟ್ಟು 'ಮನು ಮತ್ತು ಅಲ್ಲಾ' ಕುರಿತ ಕಥೆಯನ್ನು ತಿರುಚುತ್ತಿದ್ದಾರೆ ಎಂದು ಆರೋಪಿಸಿ ಅಧಿವೇಶನದಿಂದ ಹೊರನಡೆದಿದ್ದಾರೆ.

'ನಾವು ಸಾಮರಸ್ಯದಿಂದ ಬದುಕುವುದನ್ನು ಮಾತ್ರ ಒಪ್ಪುತ್ತೇವೆ, ಆದರೆ ಓಂ, ಅಲ್ಲಾ ಮತ್ತು ಮನುಗೆ ಸಂಬಂಧಿಸಿದ ಈ ಎಲ್ಲಾ ಕಥೆಗಳು ಆಧಾರರಹಿತವಾಗಿವೆ. ಅರ್ಷದ್ ಅವರು ಅಧಿವೇಶನದ ಪರಿಸರವನ್ನು ಸಂಪೂರ್ಣವಾಗಿ ಹಾಳು ಮಾಡಿದರು. ಅವರು ಹೇಳಿದ ಕಥೆಗಳಿಗಿಂತ ದೊಡ್ಡ ಕಥೆಗಳನ್ನು ನಾನು ಹೇಳಬಲ್ಲೆ. ನನ್ನೊಂದಿಗೆ ಚರ್ಚೆಗೆ ಬರುವಂತೆ ಅವರನ್ನು ವಿನಂತಿಸುತ್ತೇನೆ. ಅಗತ್ಯವಿದ್ದರೆ ಸಹರನ್‌ಪುರದಲ್ಲಿ ಅವರನ್ನು ಭೇಟಿಯಾಗಲು ನಾನು ಸಿದ್ಧನಿದ್ದೇನೆ' ಎಂದು ಲೋಕೇಶ್ ಮುನಿ ಹೇಳಿದ್ದಾರೆ.

ಜಮೀಯತ್‌ನ ಕಾರ್ಯಕ್ರಮಗಳು ಮತ್ತು ಅಧಿವೇಶನಗಳಿಗೆ ಹಲವಾರು ಧರ್ಮಗಳ ಧಾರ್ಮಿಕ ಮುಖಂಡರನ್ನು ಆಗಾಗ್ಗೆ ಆಹ್ವಾನಿಸಲಾಗುತ್ತದೆ. ಆಚಾರ್ಯ ಲೋಕೇಶ್ ಮುನಿ ಅವರು ಜಮೀಯತ್ ಆಯೋಜಿಸಿದ್ದ ಹಲವಾರು ಕಾರ್ಯಕ್ರಮಗಳಲ್ಲಿ ಈ ಹಿಂದೆಯೂ ಭಾಗವಹಿಸಿದ್ದರು.

ಜಮೀಯತ್‌ನ ಮತ್ತೊಂದು ಬಣದ ಮುಖ್ಯಸ್ಥ ಮಹಮೂದ್ ಮದನಿ, 'ಭಾರತವು ಇಸ್ಲಾಂನ ಜನ್ಮಸ್ಥಳ' ಮತ್ತು ದೇಶದ ಅತ್ಯಂತ ಹಳೆಯ ಧರ್ಮ ಎಂದು ಹೇಳುವ ಮೂಲಕ ಶುಕ್ರವಾರ ಗದ್ದಲ ಹುಟ್ಟುಹಾಕಿದ್ದರು.

ವಿವಿಧ ಧರ್ಮಗಳ ಜನರ ನಡುವೆ ದ್ವೇಷ ಬಿತ್ತುವುದನ್ನು 'ರಾಷ್ಟ್ರೀಯ ಅಪರಾಧ' ಎಂದು ಪರಿಗಣಿಸಬೇಕೆಂದು ಮಹಮೂದ್ ಮದನಿ ಹೇಳಿದ್ದಾರೆ.

'ಮೋದಿಯನ್ನು ಬಾಳಾ ಠಾಕ್ರೆ ರಕ್ಷಿಸದೇ ಹೋಗಿದ್ದರೆ ಇಂದು ಪ್ರಧಾನಿ ಆಗುತ್ತಿರಲಿಲ್ಲ'

ಮುಂಬೈ (ಪಿಟಿಐ): 'ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ನರೇಂದ್ರ ಮೋದಿ ಅವರಿಗೆ ರಾಜಧರ್ಮ ಪಾಲಿಸುವಂತೆ ಆಗಿನ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಸೂಚಿಸಿದ್ದರು. ಆಗ ಬಾಳಾ ಠಾಕ್ರೆ ಅವರು ಮೋದಿಯನ್ನು ರಕ್ಷಿಸಿದ್ದರು. ಒಂದೊಮ್ಮೆ ಅವರು ರಕ್ಷಣೆ ಮಾಡದೆ ಹೋಗಿದ್ದರೆ ಮೋದಿ ಅವರು ಇಂದು ಈ ಹಂತಕ್ಕೆ ಬೆಳೆಯುತ್ತಿರಲಿಲ್ಲ. ಪ್ರಧಾನಿಯೂ ಆಗುತ್ತಿರಲಿಲ್ಲ' ಎಂದು ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಭಾನುವಾರ ಮಾತನಾಡಿರುವ ಅವರು, 'ಬಿಜೆಪಿಯದ್ದು ನಿಜವಾದ ಹಿಂದುತ್ವ ಅಲ್ಲ. ಪರಸ್ಪರ ದ್ವೇಷಿಸುವುದಕ್ಕೆ ಹಿಂದುತ್ವ ಎಂದು ಹೇಳುವುದಿಲ್ಲ. ನಾನು ಬಿಜೆಪಿಯಿಂದ ದೂರ ಉಳಿದಿದ್ದೇನೆ. ಆದರೆ ಹಿಂದುತ್ವ ಕೈಬಿಟ್ಟಿಲ್ಲ. ಶಿವಸೇನಾ, ಅಕಾಲಿದಳವು ಎನ್‌ಡಿಎ ಭಾಗವಾಗಿರುವುದು ಬಿಜೆಪಿಗೆ ಇಷ್ಟವಿಲ್ಲ' ಎಂದು ವಾಗ್ದಾಳಿ ನಡೆಸಿದ್ದಾರೆ.

ಆಂಬುಲೆನ್ಸ್‌ನಲ್ಲಿ ಹೆರಿಗೆ: ಮಗು ಸಾವು

ಪ್ರಜಾವಾಣಿ ವಾರ್ತೆ

ತುಮಕೂರು: ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರು ಜಿಲ್ಲಾ ಆಸ್ಪತ್ರೆಯಿಂದ ಬೆಂಗಳೂರಿಗೆ ಗರ್ಭಿಣಿಯನ್ನು ಕರೆದೊಯ್ಯುತ್ತಿದ್ದಾಗ ಮಾರ್ಗ ಮಧ್ಯೆ ಆಂಬುಲೆನ್ಸ್‌ನಲ್ಲಿಯೇ ಹೆರಿಗೆಯಾಗಿ ಮಗು ಸಾವನ್ನಪ್ಪಿದೆ.

ಶಿರಾ ತಾಲ್ಲೂಕಿನ ಬುಕ್ಕಾಪಟ್ಟಣದ ಅರ್ಪಿತಾ ಹೆರಿಗೆ ನೋವಿನಿಂದ ಶುಕ್ರವಾರ ಶಿರಾ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಅಂದು ಸಂಜೆ ತುಮಕೂರು ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಗಿತ್ತು. ಜಿಲ್ಲಾಸ್ಪತ್ರೆಯ ವೈದ್ಯರು ಅರ್ಪಿತಾ ಅವರನ್ನು ಬೆಂಗಳೂರಿನ ವಾಣಿ ವಿಲಾಸ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದರು.

ಆಸ್ಪತ್ರೆಗೆ ಹೋಗುವ ಮಾರ್ಗ ಮಧ್ಯೆ ನೆಲಮಂಗಲದ ಬಳಿ ಆಂಬುಲೆನ್ಸ್‌ನಲ್ಲಿ ಹೆರಿಗೆಯಾಗಿದ್ದು, ರಕ್ತಸ್ರಾವದಿಂದ ಮಗು ಮೃತಪಟ್ಟಿದೆ. ಕೂಡಲೇ ತಾಯಿಯನ್ನು ನೆಲಮಂಗಲ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಿ ಬೆಂಗಳೂರಿಗೆ ಕಳುಹಿಸಲಾಗಿದೆ.

'ಗರ್ಭದಲ್ಲಿಯೇ ಮಗುವಿನ ಬೆಳವಣಿಗೆ ಕುಂಠಿತವಾಗಿತ್ತು, ಉಸಿರಾಟದ ಸಮಸ್ಯೆಯೂ ಇತ್ತು' ಎಂದು ಡಾ.ನಾಗಭೂಷಣ್ ಹೇಳಿದರು.

ಬೆಂಗಳೂರಿನ ತುಳುವೆರೆ ಚಾವಡಿಗೆ ಬೆಳ್ಳಿ ಹಬ್ಬದ ಸಂಭ್ರಮ

'ತುಳು ಭಾಷೆ ಅಧಿಕೃತ ಸ್ಥಾನಕ್ಕೆ ಒಗ್ಗಟ್ಟಿನ ಮಂತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೃದಯ ಭಾವನೆಗಳ ಇನ್ನೊಂದು ರೂಪವೇ ಭಾಷೆ. ತುಳುನಾಡಿನವರಿಗೆ ಎರಡು ಭಾಷೆಗಳಿವೆ. ಕನ್ನಡ ರಾಜ್ಯ ಭಾಷೆಯಾದರೆ, ತುಳು ಮಾತೃಭಾಷೆಯಾಗಿದೆ. ಈ ಎರಡು ಭಾಷೆಗಳನ್ನು ಉಳಿಸಿ, ಬೆಳೆಸುವ ಜವಾಬ್ದಾರಿ ನಮ್ಮ ಮೇಲಿದೆ' ಎಂದು ಒಡಿಯೂರು ಗುರುದೇವಾನಂದ ಸ್ವಾಮೀಜಿ ಹೇಳಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ಭಾನುವಾರ ನಡೆದ ಬೆಂಗಳೂರಿನ 'ತುಳುವೆರೆ ಚಾವಡಿ'ಯ ಬೆಳ್ಳಿಹಬ್ಬ ಕಾರ್ಯಕ್ರಮದಲ್ಲಿ 'ಜೋಕುಲೆ ಉಜ್ಜಾಲ್' ತುಳು ಪದಮಾಲೆ ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ತುಳು ಭಾಷೆಯನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯಾಗಿ ಘೋಷಿಸಬೇಕು. ಈಗಾಗಲೇ ಸರ್ಕಾರ ಈ ಬಗ್ಗೆ ಅಧ್ಯಯನ ನಡೆಸಲು ಸಮಿತಿ ರಚಿಸಿದ್ದು, ಅದನ್ನು ಜಾರಿಗೊಳಿಸಲು ತುಳುನಾಡಿನವರು ಒಗ್ಗಟ್ಟಿನಿಂದ ಇರಬೇಕು' ಎಂದು ಮನವಿ ಮಾಡಿದರು.

ಯಕ್ಷಗಾನ ಕಲಾವಿದರಾದ ಸೀತಾರಾಮ ಕುಮಾರ್ ಕಟೀಲ್, ತುಳು ಸಾಹಿತಿಗಳಾದ ಕುಶಲಾಕ್ಷಿ ವಿ. ಕಣ್ವತೀರ್ಥ, ಸಮಾಜ ಸೇವೆಗಾಗಿ ರವಿ ಕಟಪಾಡಿ ಮತ್ತು ಪ್ರಕಾಶ್ ಜೆ. ಶೆಟ್ಟಿಗಾರ್ ಅವರಿಗೆ 'ತುಳುನಾಡ್ದ ಸಿರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಹಿತಿ ಕೆ.ಇ. ರಾಧಾಕೃಷ್ಣ ಅವರ 'ಸತ್ಯಪ್ಪೆ ಬಾಲೆಲು' ತುಳು ಕಥೆಯ ಆಡಿಯೊ ಪುಸ್ತಕವನ್ನು ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಯಿತು.

ಬೆಳ್ಳಿ ಹಬ್ಬ ಸಂಭ್ರಮದ ಅಂಗವಾಗಿ ತುಳು ಸಾಹಿತಿ ಉಗಪ್ಪ ಪೂಜಾರಿ (ತುಳು– ಕನ್ನಡ ಸಾಹಿತಿ ಡಿ.ಕೆ. ಚೌಟ ಅವರ ಸಂಸ್ಮರಣಾರ್ಥ) ಮತ್ತು ಯುವ ಪ್ರತಿಭೆ ಸತೀಶ್ ಅಗ್ಪಲ್ (ಸಾಮಾಜಿಕ ಚಿಂತಕ, ತುಳು ಹೋರಾಟಗಾರ ಡಾ. ಉದಯ ಧರ್ಮಸ್ಥಳ ಸಂಸ್ಮರಣಾರ್ಥ) ಪ್ರಶಸ್ತಿ ನೀಡಲಾಯಿತು.



'ಜೋಕುಲೆ ಉಜ್ಜಾಲ್' ತುಳು ಪದಮಾಲೆ ಪುಸ್ತಕವನ್ನು ಒಡಿಯೂರಿನ ಗುರುದೇವಾನಂದ ಸ್ವಾಮೀಜಿ ಬಿಡುಗಡೆಗೊಳಿಸಿದರು. (ಎಡದಿಂದ) ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ಮುಖ್ಯಸ್ಥ ಉಪೇಂದ್ರ ಶೆಟ್ಟಿ, ಮೂಡಂಬೈಲು ರವಿ ಶೆಟ್ಟಿ, ಸಂಸದ ಸದಾನಂದ ಗೌಡ, ತುಳುವೆರೆ ಚಾವಡಿ ಅಧ್ಯಕ್ಷ ಪುರುಷೋತ್ತಮ್ ಚೇಂಡ್ಲಾ, ಕೆ.ಇ. ರಾಧಾಕೃಷ್ಣ, ದೆಹಲಿ ತುಳು ಸಿರಿ ಸಂಘದ ಅಧ್ಯಕ್ಷ ವಸಂತ್ ಶೆಟ್ಟಿ ಬೆಳ್ಳಾರೆ, ಸೌಂದರ್ಯ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಸೌಂದರ್ಯ ಪಿ. ಮಂಜಪ್ಪ ಇದ್ದರು –ಪ್ರಜಾವಾಣಿ ಚಿತ್ರ

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಿವಿಮಾತು

'ಹುಟ್ಟೂರಿನ ಅಭಿವೃದ್ಧಿಗೆ ಕೊಡುಗೆ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣ, ಉದ್ಯೋಗ ಸೇರಿ ವಿವಿಧ ಕಾರಣಗಳಿಗೆ ಹುಟ್ಟೂರನ್ನು ತೊರೆದು, ನಗರ ಪ್ರದೇಶಗಳಿಗೆ ಬಂದವರು ತಮ್ಮ ಮೂಲ ಬೇರನ್ನು ಮರೆಯಬಾರದು. ತಮ್ಮ ಕೈಲಾದ ಕೊಡುಗೆಯನ್ನು ಹುಟ್ಟೂರಿಗೆ ನೀಡಬೇಕು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಗೊಂಡೇದಹಳ್ಳಿಯ ಗೊ.ರು.ಚ. ಗ್ರಾಮ ವಿಕಾಸ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಯುವಜನ ಸಮಾವೇಶದಲ್ಲಿ ಗೊ.ರು. ಚನ್ನಬಸಪ್ಪ ಅವರು ಸಂಪಾದಿಸಿದ 'ನಾವು ನಡೆದ ಹಾದಿ' ಕೃತಿಯನ್ನು ಬಿಡುಗಡೆ ಮಾಡಿ, ಮಾತನಾಡಿದರು.

'ಬದಲಾದ ಸನ್ನಿವೇಶದಲ್ಲಿ ಬೆರಳಣಿಕೆಯಷ್ಟು ಜನ ಮಾತ್ರ ಹಳ್ಳಿಯತ್ತ ನೋಡುತ್ತಿದ್ದಾರೆ. ಬಹುತೇಕರು ತಾವು ಜನ್ಮ ಪಡೆದ ಹಳ್ಳಿಯನ್ನು ಮರೆಯುತ್ತಿದ್ದಾರೆ. ನಾನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವನಾಗಿದ್ದ ಅವಧಿಯಲ್ಲಿ ಹಳೆ ವಿದ್ಯಾರ್ಥಿಗಳನ್ನು ಶಾಲೆಗೆ ಕರೆತಂದು, ಅಭಿವೃದ್ಧಿ ಕಾರ್ಯ ಕೈಗೊಳ್ಳುವಂತೆ ಸುತ್ತೋಲೆ ಹೊರಡಿಸಿದ್ದೆ. ಇದರಿಂದ ನನ್ನೂರಿನ ಸೇರಿ ಹಲವು ಶಾಲೆಗಳು ಅಭಿವೃದ್ಧಿಯಾದವು. ಹಳ್ಳಿಗಳಲ್ಲಿನ ಸಮಸ್ಯೆ ನಿವಾರಣೆಗೆ ಪ್ರತಿಯೊಬ್ಬರು ಪ್ರತಿಜ್ಞೆ ಕೈಗೊಳ್ಳಬೇಕು' ಎಂದು ಹೇಳಿದರು.

ಪುಸ್ತಕದ ಕುರಿತು ಮಾತನಾಡಿದ ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ, 'ಗ್ರಾಮಗಳು ವಿಕಾಸಗೊಳ್ಳಬೇಕಾದರೆ ಅಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ನಮಗೆ ಹುಟ್ಟಿನಿಂದ ಕಣ್ಣು–ಕಿವಿಗಳು ಇವೆ. ಆದರೆ, ಅವು ತತ್ಕಾಲಕ್ಕೆ ಪ್ರತಿಕ್ರಿಯಿಸುವುದಿಲ್ಲ. ಎಷ್ಟೋ ಜನಕ್ಕೆ ಹುಟ್ಟಿದ ಊರು, ಬೆಳೆದ ಪರಿಸರ, ಅನುಭವಿಸಿದ ಬವಣೆ, ನೆರೆಹೊರೆಯವರ ಒಡನಾಟ ಮರೆಯಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಪ್ರತಿಷ್ಠಾನದ ಪೋಷಕ ಹಾಗೂ ಕೃತಿಯ ಸಂಪಾದಕ ಗೊ.ರು. ಚನ್ನಬಸಪ್ಪ, 'ನಮ್ಮ ಗ್ರಾಮದಲ್ಲಿ ಹುಟ್ಟಿ ಬೆಳೆದು, ಉದ್ಯೋಗ ಮತ್ತಿತರ ಕಾರಣಗಳಿಗೆ ನಗರಗಳಲ್ಲಿ ನೆಲೆಸಿರುವವರ ಜೀವನಾನುಭವವನ್ನು ಕೃತಿಯಲ್ಲಿ ಕಟ್ಟಿಕೊಡಲಾಗಿದೆ. ನಮ್ಮ ಊರಿನ ಬಂಧುಗಳ ಆತ್ಮನಿವೇದನೆಯ ಬರಹಗಳನ್ನು ಓದಿ, ಮೂಕವಿಸ್ಮಿತನಾಗಿದ್ದೇನೆ. ನಗರಗಳಲ್ಲಿ ವಾಸಿಸುತ್ತಿರುವ ವೃತ್ತಿನಿರತರು ಮತ್ತು ನಿವೃತ್ತರು ತಮ್ಮ ಹಳ್ಳಿಗಳಿಗೆ ಯಾವುದಾದರೂ ರೂಪದಲ್ಲಿ ಕೈಲಾದಷ್ಟು ನೆರವು ನೀಡಬೇಕು' ಎಂದು ಹೇಳಿದರು.



ಯುವಜನ ಸಮಾವೇಶದಲ್ಲಿ ಬಸವರಾಜ ಹೊರಟ್ಟಿ ಅವರು 'ನಾವು ನಡೆದ ಹಾದಿ' ಕೃತಿ ಬಿಡುಗಡೆ ಮಾಡಿದರು. (ಎಡದಿಂದ) ರಾವ್ ಬಹದ್ದೂರ್ ಧರ್ಮ ಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸಂಸ್ಥೆಯ ಕಾರ್ಯದರ್ಶಿ ಎಂ. ಸದಾಶಿವಪ್ಪ, ಸಂಸ್ಥೆಯ ಧರ್ಮದರ್ಶಿ ಪ್ರೊ.ಕೆ. ಸಿದ್ದಪ್ಪ, ಗೊ.ರು.ಚನ್ನಬಸಪ್ಪ, ಸಂಸ್ಥೆಯ ಅಧ್ಯಕ್ಷ ಎಲ್. ರೇವಣಸಿದ್ದಯ್ಯ, ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಮತ್ತು ಸಂಸ್ಥೆಯ ಧರ್ಮದರ್ಶಿ ಎಚ್. ಶಿವಲಿಂಗಯ್ಯ ಇದ್ದಾರೆ.

ರಾಜ್ಯದ ವಿವಿಧೆಡೆ ಬೇಸಿಗೆಯಲ್ಲಿ ರೋಗ ಹೆಚ್ಚಳ • ಇಳುವರಿ ಕುಂಠಿತ ಸಾಧ್ಯತೆ • ಆತಂಕದಲ್ಲಿ ಬೆಳೆಗಾರರು

ತೆಂಗು ಬೆಳೆಗೆ ಕಪ್ಪುತಲೆ ಹುಳು ಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು, ದಾವಣಗೆರೆ, ಚಿತ್ರದುರ್ಗ, ಹಾಸನ, ಮೈಸೂರು ಸೇರಿದಂತೆ ರಾಜ್ಯದ ವಿವಿಧ ಪ್ರದೇಶಗಳ ಪ್ರಮುಖ ವಾಣಿಜ್ಯ ಬೆಳೆಯಾದ ತೆಂಗಿಗೆ ಕಪ್ಪುತಲೆಯ ಹುಳು ರೋಗ ಬಾಧಿಸುತ್ತಿದೆ.

ಇಡೀ ತೆಂಗಿನ ತೋಟಗಳಿಗೆ ಈ ರೋಗ ಆವರಿಸಿಲ್ಲವಾದರೂ ಹಲವು ಮರಗಳಿಗೆ ಹಾನಿಯಾಗಿದೆ. ರೋಗಕ್ಕೆ ತುತ್ತಾಗಿರುವ ಮರಗಳಲ್ಲಿ ಶೇ 20 ರಿಂದ ಶೇ 30ರಷ್ಟು ಇಳುವರಿ ಕಡಿಮೆಯಾಗಿದೆ.

ಹಾಸನ ಜಿಲ್ಲೆಯ ಚನ್ನರಾಯ ಪಟ್ಟಣ ತಾಲ್ಲೂಕಿನಲ್ಲಿ ತೆಂಗಿನ ಗರಿಗಳಿಗೆ ಇರುವೆಗಿಂತಲೂ ಚಿಕ್ಕದಾಗಿರುವ ಹುಳು ಮೆತ್ತಿಕೊಳ್ಳುತ್ತಿವೆ. ಮುಟ್ಟಿದರೆ ಕೈಯೆಲ್ಲಾ ಕಪ್ಪಾಗುತ್ತದೆ. ಇದರೊಂದಿಗೆ ಪಾಚಿ ಸಮಸ್ಯೆ ಕಾಣಿಸಿಕೊಂಡಿದೆ.

ತುಮಕೂರು ಜಿಲ್ಲೆಯಲ್ಲಿ ಈ ರೋಗ ನಿಯಂತ್ರಣಕ್ಕೆ ಬರುತ್ತಿದ್ದಂತೆಯೇ ಕಾಂಡ ಸೋರುವ ರೋಗ (ಅಣಬೆ ರೋಗ) ಕಾಣಿಸಿಕೊಂಡಿದೆ. ಕೂಡಲೇ ನಿಯಂತ್ರಿಸದಿದ್ದರೆ ಮರಗಳಿಗೆ ಸಾಕಷ್ಟು ಹಾನಿಯಾಗುವ ಸಾಧ್ಯತೆ ಇದೆ ಎನ್ನುತ್ತಾರೆ ಬೆಳೆಗಾರರು.

ತಿಪಟೂರು, ತುರುವೇಕೆರೆ ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ರೋಗ ತಗುಲಿದ ತೆಂಗಿನ ಮರಗಳು ಹಾನಿಗೆ ಒಳಗಾಗಿವೆ. ಪರತಂತ್ರ ಕೀಟಗಳ ಪ್ರಯೋಗದಿಂದಾಗಿ ಸಾಕಷ್ಟು ಪ್ರಮಾಣದಲ್ಲಿ ರೋಗ ನಿಯಂತ್ರಣಕ್ಕೆ ಬಂದಿದೆ.



ಹರಿಹರ ತಾಲ್ಲೂಕಿನ ಕಡರನಾಯ್ಕನಹಳ್ಳಿ ಸಮೀಪದ ಹೊಳೆಸಿರಿಗೆರೆಯಲ್ಲಿ ತೆಂಗಿನ ತೋಟವು ಕಪ್ಪು ತಲೆ ಹುಳು ಬಾಧೆಯಿಂದ ಒಣಗುತ್ತಿರುವುದು.

> **ಹತೋಟಿ ಕ್ರಮ ಕುರಿತು ರೈತರಿಗೆ ಮಾಹಿತಿ ನೀಡಲಾಗುತ್ತಿದೆ. ಸಮಗ್ರ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು**
> **ಡಾ.ಯೋಗೇಶ್,** ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ, ಹಾಸನ

> **ತೆಂಗಿನ ತೋಟಗಳಿಗೆ ಹಾನಿ ಆಗಿಲ್ಲ. ಇಳುವರಿ ಮೇಲೆ ಪರಿಣಾಮ ಬೀರಿದ್ದು, ರೋಗಕ್ಕೆ ತುತ್ತಾಗಿರುವ ಮರಗಳಲ್ಲಿ ಶೇ 20ರಿಂದ ಶೇ 30ರಷ್ಟು ಇಳುವರಿ ಕಡಿಮೆಯಾಗಿದೆ**
> **ನಂಜಪ್ಪ,ರೈತ,** ದಂಡಿನಶಿವರ (ತುಮಕೂರು)

'ಮಳೆಗಾಲದಲ್ಲಿ ಈ ಸಮಸ್ಯೆ ಇರುವುದಿಲ್ಲ. ತೋಟ ಸರಿಯಾಗಿ ನಿರ್ವಹಣೆ ಮಾಡದಿದ್ದರೆ ಅಲ್ಲಿ ಈ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಬಿಸಿಲಿನ ಪ್ರಮಾಣ ಹೆಚ್ಚಾದಂತೆ ರೋಗದ ತೀವ್ರತೆ ಹೆಚ್ಚಾಗುತ್ತದೆ' ಎನ್ನುತ್ತಾರೆ ವಿವಿಧ ಜಿಲ್ಲೆಗಳ ತೋಟಗಾರಿಕಾ ಇಲಾಖೆ ಉಪ ನಿರ್ದೇಶಕರಾದ ಡಾ.ಜಿ.ಸಿ. ರಾಘವೇಂದ್ರ ಪ್ರಸಾದ್ (ದಾವಣಗೆರೆ), ಜಿ.ಸವಿತಾ (ಚಿತ್ರದುರ್ಗ) ಮತ್ತು ರುದ್ರೇಶ್ (ಮೈಸೂರು).

ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ತೋಟಗಾರಿಕೆ ಇಲಾಖೆ ಹತೋಟಿಗೆ ಕ್ರಮ ಕೈಗೊಳ್ಳುತ್ತಿದೆ. ಬೆಳೆಗಾರರಿಗೆ ಮಾಹಿತಿ ನೀಡುತ್ತಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ 69 ಸಾವಿರ ಹೆಕ್ಟೇರ್ ತೆಂಗು ಬೆಳೆಯಲಾಗಿದೆ. ಹೊಸದುರ್ಗ ಮತ್ತು ಹೊಳಲ್ಕೆರೆ ಭಾಗದ 2,500 ಹೆಕ್ಟೇರ್‌ನಲ್ಲಿ ರೋಗ ಕಾಣಿಸಿಕೊಂಡಿದೆ. ದಾವಣಗೆರೆ ಜಿಲ್ಲೆಯಲ್ಲಿ 5 ಸಾವಿರ ಹೆಕ್ಟೇರ್ ತೆಂಗು ಬೆಳೆ ಇದೆ. ಶೇ 15ರಷ್ಟು ಮರಗಳಲ್ಲಿ ರೋಗ ಕಾಣಿಸಿಕೊಂಡಿದೆ.

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಈ ರೋಗದಿಂದ ತೆಂಗಿನ ಇಳುವರಿ ಕುಂಠಿತವಾಗಿದೆ.

ಕೊಬ್ಬರಿ ಉತ್ಪನ್ನವೂ ಕಡಿಮೆಯಾಗುತ್ತಿದೆ. ಸಾವಿರ ಕಾಯಿಗೆ 170 ಕೆ.ಜಿ. ಸಿಗುತ್ತಿದ್ದ ಕೊಬ್ಬರಿ, ಇದೀಗ 90 ಕೆ.ಜಿ.ಗೆ ಕುಸಿದಿದೆ.

ಮೈಸೂರು ಜಿಲ್ಲೆಯಲ್ಲಿ 20 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. ಅಲ್ಲಲ್ಲಿ ಸಣ್ಣ ಪ್ರಮಾಣದಲ್ಲಿ ಬಾಧೆ ಕಂಡುಬಂದಿದೆ. ಇದರಿಂದ ವ್ಯತಿರಿಕ್ತ ಪರಿಣಾಮವೇನೂ ಆಗಿಲ್ಲ.

ಪರತಂತ್ರ ಕೀಟ ಪ್ರಯೋಗ ಯಶಸ್ವಿ

ತುಮಕೂರು ಜಿಲ್ಲೆಯಲ್ಲಿ ಪರತಂತ್ರ ಕೀಟ ಪ್ರಯೋಗದಿಂದ ಕಪ್ಪುತಲೆ ಹುಳು ಬಾಧೆ ಭಾಗಶಃ ನಿಯಂತ್ರಣಕ್ಕೆ ಬಂದಿದೆ.

2013–14ರಲ್ಲಿ ತಿಪಟೂರು ಭಾಗದಲ್ಲಿ ತೀವ್ರ ಪ್ರಮಾಣದಲ್ಲಿ ಈ ರೋಗ ಕಾಣಿಸಿಕೊಂಡಿತ್ತು. ತೆಂಗಿನ ಮರದ ಸುಳಿ ತಿಂದು ಹಾಳು ಮಾಡುವ ಕಪ್ಪುತಲೆ ಹುಳುಗಳ ಮೇಲೆ ಪರತಂತ್ರ ಕೀಟಗಳ ಪ್ರಯೋಗ ಮಾಡಿದಾಗ ರೋಗ ನಿಯಂತ್ರಣಕ್ಕೆ ಬಂದಿತ್ತು. ಪ್ರಸ್ತುತ ಹಿಂದಿನಷ್ಟು ಸಮಸ್ಯೆಯಾಗಿಲ್ಲ. ತಿಪಟೂರು ತಾಲ್ಲೂಕಿನಲ್ಲಿ ಸುಮಾರು 34 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. ಅದರಲ್ಲಿ ಕಸಬಾ ಹೋಬಳಿಯ ಕಲ್ಕೆರೆ ಸುತ್ತಮುತ್ತಲಿನ ಏಳೆಂಟು ಹಳ್ಳಿಗಳಲ್ಲಿ ಒಂದು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರೋಗ ಬಾಧಿಸಿದೆ.

ಏನಿದು ಕಪ್ಪುತಲೆಯ ಹುಳು?

'ಒಪಿಸಿನಾ ಅರೆಸೋಸಿಲ್ಲ' (Orisina Arenosella) ಎಂಬ ವೈಜ್ಞಾನಿಕ ಹೆಸರಿನ ಕಪ್ಪುತಲೆ ಹುಳು (Black Headed Caterpillar) ಲಾರ್ವಾ ಹಂತದಿಂದಲೇ ತೆಂಗಿನ ಮರದ ಹಸಿರು ಭಾಗವಾದ ಗರಿಗಳ ತೆಂಗಿನ ಗರಿಯ ರಸ ಹೀರುತ್ತದೆ. ಇದರಿಂದ ಗರಿಗಳು ಒಣಗುತ್ತವೆ.

ಹುಳು ಕಾಣಿಸಿಕೊಂಡ ತಕ್ಷಣವೇ ಪರಿಹಾರ ಕೈಗೊಳ್ಳದಿದ್ದರೆ ವರ್ಷದೊಳಗೆ ಸಂಪೂರ್ಣ ತೋಟವನ್ನೇ ಆವರಿಸಿ ಹಾಳು ಮಾಡುತ್ತವೆ. ಇಡೀ ತೋಟ ಅಸ್ಥಿಪಂಜರದಂತೆ ಗೋಚರಿಸುತ್ತದೆ. ಹುಳು ಬಾಧೆಗೆ ತುತ್ತಾದ ತೆಂಗಿನಮರ ಕಾಯಿ ಬಿಡುವುದಿಲ್ಲ. ಈ ಗರಿಗಳನ್ನೂ ಕೂಡ ಬಳಸಲು ಬರುವುದಿಲ್ಲ. ಸಕಾಲದಲ್ಲಿ ಅವುಗಳನ್ನು ಸುಟ್ಟು ಹಾಕದಿದ್ದರೆ ಹುಳು ಪುನಃ ಉತ್ಪತ್ತಿಯಾಗಿ ಇತರೇ ತೋಟಗಳಿಗೂ ದಾಳಿ ಮಾಡುತ್ತವೆ.

ನಿಯಂತ್ರಣ ಹೇಗೆ?

ಜೈವಿಕ ವಿಧಾನ ಬಳಸಿ ಹುಳುಗಳ ಹತೋಟಿಗೆ ಕ್ರಮಕೈಗೊಳ್ಳಬಹುದು. ಪ್ರತಿ ಗಿಡಕ್ಕೆ ಗೊನಿಯೋಜಸ್ ನೆಫಾಂಟಿಡಿಸ್ (ಬೆಥಿಲಿಡೆ) ಇಲ್ಲವೇ ಬ್ರೆವಿಕಾರ್ನಿಸ್ (ಬ್ರಾಕೊನಿಡೆ) ಪರಾವಲಂಬಿ ಜೀವಿಗಳನ್ನು ಬಿಡಬೇಕು. ಅವು ಈ ಕಪ್ಪುತಲೆ ಹುಳು ತಿನ್ನುತ್ತವೆ.

ಬಾಧೆಗೆ ಒಳಗಾದ ಗರಿಗಳನ್ನು ಕತ್ತರಿಸಿ ಸುಟ್ಟು ಹಾಕಬೇಕು. ಒಂದು ಲೀಟರ್ ನೀರಿಗೆ 7 ಗ್ರಾಂ ಬೇವಿನ ಸೊಪ್ಪು ಬೆರಸಿ ಗರಿಗಳ ಕೆಳಭಾಗಕ್ಕೆ ಎರಡು ವಾರಗಳಿಗೊಮ್ಮೆ ಸಿಂಪಡಿಸಬೇಕು.

ಪ್ರತಿ ಲೀಟರ್ ನೀರಿಗೆ ಒಂದು ಎಂಎಲ್ ಮ್ಯಾಲಥಿಯನ್ 50 ಇಸಿ 0.05 % ಮಿಶ್ರಣ ಮಾಡಿ ಗರಿಯ ಅಡಿಭಾಗಕ್ಕೆ ಸಿಂಪಡಿಸಬೇಕು. ಇಲ್ಲವೇ ಪ್ರತಿ ಲೀಟರ್‌ಗೆ ಕ್ವಿನಾಲ್ಫಾಸ್ 0.05 % ಬೆರಸಿ ಸಿಂಪಡಿಸಬೇಕು.

ಲೋಕಾಯುಕ್ತರ ವಿರುದ್ಧ ರಾಷ್ಟ್ರಪತಿಗೆ ದೂರು

ಧಾರವಾಡ: 'ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿರುವ ಕರ್ನಾಟಕ ಲೋಕಾಯುಕ್ತ ಬಿ.ಎಸ್. ಪಾಟೀಲ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ರಾಷ್ಟ್ರಪತಿ, ಪ್ರಧಾನಮಂತ್ರಿ ಹಾಗೂ ಮುಖ್ಯಮಂತ್ರಿಗೆ ದೂರು ಸಲ್ಲಿಸಲಾಗಿದೆ' ಎಂದು ಸಮಾಜ ಪರಿವರ್ತನ ಸಮುದಾಯದ ಮುಖ್ಯಸ್ಥ ಎಸ್.ಆರ್. ಹಿರೇಮಠ ತಿಳಿಸಿದರು.

'ಬೆಂಗಳೂರಿನ ಕೆ.ಆರ್.ಪುರದ ಬಾಗಮಾನೆ ಡೆವಲಪ್‌ಮೆಂಟ್ ಪ್ರೈ. ಲಿ.ಗೆ ಸೇರಿದ ಕಟ್ಟಡ ತೆರವುಗೊಳಿಸಲು ಬಿಬಿಎಂಪಿ ಮುಂದಾಗಿತ್ತು. ಕಂಪನಿ ಮಾಲೀಕರು ಈ ಬಗ್ಗೆ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದರು. ಪ್ರಕರಣವು ತಮ್ಮ ವ್ಯಾಪ್ತಿಗೆ ಬರದಿದ್ದರೂ ವಿಚಾರಣೆ ನಡೆಸಿದ ಬಿ.ಎಸ್. ಪಾಟೀಲ ಅವರು, 2022ರ ಸೆ.19ರಂದು ಬಿಬಿಎಂಪಿ ಕಾರ್ಯಕ್ಕೆ ತಡೆಯಾಜ್ಞೆ ನೀಡಿದ್ದರು' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಲೋಕಾಯುಕ್ತರ ಈ ಕ್ರಮದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ಅವರ ಆದೇಶಕ್ಕೆ ತಡೆಯಾಜ್ಞೆ ನೀಡಿದೆ. ಲೋಕಾಯುಕ್ತ ಪಾಟೀಲ ಅವರ ಹೆಸರು ಬಳಸಿಕೊಂಡು ಅವರ ಪತ್ನಿ, ಪುತ್ರ ಹಾಗೂ ಪುತ್ರಿ ಸಹ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿರುವ ಬಗ್ಗೆ ಕೆಲ ವಕೀಲರು ಅಸಮಾಧಾನ ವ್ಯಕ್ತಪಡಿಸಿರುವ ವಿಡಿಯೊ ಹರಿದಾಡುತ್ತಿದೆ. ಈ ಎಲ್ಲ ದಾಖಲೆಗಳನ್ನು ಪರಿಗಣಿಸಿ ಲೋಕಾಯುಕ್ತರ ವಿರುದ್ಧ ಉನ್ನತಮಟ್ಟದ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

ವೈಮಾನಿಕ ಶಕ್ತಿ ಪ್ರದರ್ಶನಕ್ಕೆ ಸಜ್ಜು

ಒಂದನೇ ಪುಟದಿಂದ...

ವೈಮಾಂತರಿಕ್ಷ ಕಂಪನಿಗಳ ಬೃಹತ್ ಪ್ರದರ್ಶನ ಮತ್ತು ವ್ಯಾಪಾರ ಮೇಳದೊಂದಿಗೆ ವಿಮಾನಗಳ ವೈಮಾನಿಕ ಸಾಮರ್ಥ್ಯ ಮತ್ತು ಕ್ಷಮತೆಯ ಪ್ರದರ್ಶನಗಳನ್ನೂ ಒಳಗೊಂಡಿದೆ. ಈ ವರ್ಷದ ಪ್ರದರ್ಶನದಲ್ಲಿ ಹೆಚ್ಚಿನ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆಯೊಂದಿಗೆ ಅತಿದೊಡ್ಡ ವೈಮಾನಿಕ ಪ್ರದರ್ಶನವಾಗುವ ನಿರೀಕ್ಷೆ ಇದೆ.

ಪ್ರಮುಖ ಅಂತರರಾಷ್ಟ್ರೀಯ ಚಿಂತಕರ ತಂಡಗಳು, ತಜ್ಞರು, ಪ್ರಮುಖ ವೈಮಾನಿಕ ಕಂಪನಿಗಳ ಮತ್ತು ಜಾಗತಿಕ ನಾಯಕರು ಭಾಗಿಯಾಗಲಿದ್ದಾರೆ. ಭಾರತವು ಭರವಸೆಯ ವೈಮಾನಿಕ ಮತ್ತು ರಕ್ಷಣಾ ಉತ್ಪಾದನಾ ತಾಣವಾಗಿ ಹೊರ ಹೊಮ್ಮುತ್ತಿರುವುದರಿಂದ, ಜಾಗತಿಕ ಕಂಪನಿಗಳು ಹೊಸ ಪಾಲುದಾರಿಕೆಗಳನ್ನು ಕಂಡುಕೊಳ್ಳುತ್ತಿವೆ.

ಏರೋ ಇಂಡಿಯಾದಲ್ಲಿ ನಡೆಯುವ 'ಏರ್ ಶೋ' ಮತ್ತೊಂದು ಪ್ರಮುಖ ಆಕರ್ಷಣೆಯಾಗಿದೆ.

ಒಳನೋಟ ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ https://bit.ly/3XocL8f

ಹುಲಿ ದಾಳಿ: ಯುವಕ ಸಾವು

ಗೋಣಿಕೊಪ್ಪಲು (ಕೊಡಗು ಜಿಲ್ಲೆ): ನಾಗರಹೊಳೆ ಅರಣ್ಯ ದಂಚಿನ ಕೇರಳ ಗಡಿ ಭಾಗವಾದ ಕೆ.ಬಾಡಗ ಗ್ರಾಮ ತೋಟದಲ್ಲಿ ಕಾಫಿ ಕೊಯ್ಲು ಮಾಡುವಾಗ ಚೇತನ್ (18) ಭಾನುವಾರ ಸಂಜೆ ಹುಲಿ ದಾಳಿಗೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅವರ ಜೊತೆಯಲ್ಲಿದ್ದ ಕೂಲಿ ಕಾರ್ಮಿಕರು ಕೂಗಿ ಹುಲಿಯನ್ನು ಓಡಿಸಿದ್ದಾರೆ. ಆದರೆ, ಆ ವೇಳೆಗಾಗಲೇ ಹುಲಿಯು ಚೇತನ್ ಅವರ ಕುತ್ತಿಗೆ ಭಾಗಕ್ಕೆ ತೀವ್ರ ಗಾಯ ಮಾಡಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಕುಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಾವೇರಿ ವಿವಾದ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಎಸ್‌.ಎಂ.ಕೃಷ್ಣ ಅಭಿಮತ

ಜಲವಿವಾದ ಪರಿಹಾರಕ್ಕೆ ಮಾತುಕತೆ ಮಾರ್ಗವೇ ಉತ್ತಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಲವಿವಾದಗಳನ್ನು ಮಾತುಕತೆ ಮೂಲಕವೇ ಪರಿಹರಿಸಿಕೊಳ್ಳುವುದು ಉತ್ತಮ ಬೆಳವಣಿಗೆ' ಎಂದು ಬಿಜೆಪಿ ಮುಖಂಡ ಎಸ್.ಎಂ.ಕೃಷ್ಣ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ, ನಿವೃತ್ತ ಐಪಿಎಸ್ ಅಧಿಕಾರಿ ಸಿ.ಚಂದ್ರಶೇಖರ್ ಅವರ 'ಕಾವೇರಿ ವಿವಾದ...: ಒಂದು ಚಾರಿತ್ರಿಕ ಹಿನ್ನೋಟ' ಕೃತಿಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಮಾಜಿ ಪ್ರಧಾನಿ ದಿವಂಗತ ಎ.ಬಿ.ವಾಜಪೇಯಿ ಅವರು ಕಾವೇರಿ ಜಲವಿವಾದ ಕುರಿತು ಮತ್ತು ಜಯಲಲಿತಾ ನಡುವೆ ಮಧ್ಯಸ್ಥಿಕೆ ವಹಿಸಿದ್ದು, ಚಾಣಾಕ್ಷತನ ಹಾಗೂ ನಿಷ್ಪಕ್ಷಪಾತದಿಂದ ಸಂಧಾನ ಮಾಡಿದ್ದರು. ಜಯಲಲಿತಾ ಸಂಧಾನ ಸೂತ್ರ ಒಪ್ಪುತ್ತಿರಲಿಲ್ಲ. ಇದರಿಂದ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು' ಎಂದರು. 'ಕೋರ್ಟ್‌ನಲ್ಲಿ ನಾನು ಕ್ಷಮಾಪಣೆ ಕೇಳಬೇಕಾಗಿತ್ತು. ಆದರೆ, ವಕೀಲರ ವಾದದಿಂದ ಪಾರಾಗಿದ್ದೆ' ಎಂದರು.

'ಕರುಣಾನಿಧಿ ಅವರ ಜೊತೆಯಲ್ಲೂ ಕಾವೇರಿ ನದಿ ನೀರು ಹಂಚಿಕೆ ಬಗ್ಗೆ ಚರ್ಚಿಸಿದ್ದೆ. ಅವರು ಬಹಳ ತಾಳ್ಮೆಯಿಂದ ಉಪಾಯ ಹೇಳಿಕೊಡುತ್ತಿದ್ದರು. ಆದರೆ, ಜಯಲಲಿತಾ ಅವರು ಕರ್ನಾಟಕವನ್ನು ವಿರೋಧಿಸಲೇ ಬರುತ್ತಿದ್ದರು' ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, 'ಅಣೆಕಟ್ಟುಗಳ ಹೂಳು ತೆಗೆದು, ಸುರಕ್ಷತೆಯನ್ನು ಕಾಪಾಡಬೇಕು ಎಂದರು.

ಕಾಡು ಮಲ್ಲೇಶ್ವರ ಗೆಳೆಯರ ಬಳಗ ಅಧ್ಯಕ್ಷ ಬಿ.ಕೆ.ಶಿವರಾಂ ಅವರು, 'ಚಂದ್ರಶೇಖರ್ ಆಳವಾದ ಅಧ್ಯಯನ ನಡೆಸಿ ಕೃತಿ ಬರೆದಿದ್ದಾರೆ' ಎಂದರು.

ಲೇಖಕ ಸಿ.ಚಂದ್ರಶೇಖರ್, ಪತ್ರಕರ್ತ ಶೇಷಚಂದ್ರಿಕಾ, ಕೆಪಿಎಸ್‌ಸಿ ಸದಸ್ಯರಾದ ರೊನಾಲ್ಡೊ ಅನಿಲ್ ಫರ್ನಾಂಡಿಸ್, ಜಯಪ್ರಕಾಶ್, ಅಭಿರುಚಿ ಪ್ರಕಾಶನ ಪ್ರಕಾಶಕ ಗಣೇಶ್ ಇದ್ದರು.



ಬೆಂಗಳೂರಿನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ 'ಕಾವೇರಿ ವಿವಾದ...: ಒಂದು ಚಾರಿತ್ರಿಕ ಹಿನ್ನೋಟ' ಕೃತಿಯನ್ನು ಬಿಜೆಪಿ ಮುಖಂಡ ಎಸ್‌.ಎಂ.ಕೃಷ್ಣ ಬಿಡುಗಡೆ ಮಾಡಿದರು.

- ಕೃತಿ: 'ಕಾವೇರಿ ವಿವಾದ...' ಒಂದು ಚಾರಿತ್ರಿಕ ಹಿನ್ನೋಟ
- ಪ್ರಕಾಶನ: ಅಭಿರುಚಿ ಪ್ರಕಾಶನ
- ಬೆಲೆ: ₹ 450
- ಪುಟಗಳು: 195

ನಜೀರ್ ಸಹೋದರ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಉಪಾಧ್ಯಕ್ಷ

ಪ್ರಜಾವಾಣಿ ವಾರ್ತೆ

ನವದೆಹಲಿ: ನಿವೃತ್ತ ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್ ಅವರ ಸಹೋದರ ಮೊಹಮ್ಮದ್ ಫಾರೂಕ್ ಅವರು ಬಿಜೆಪಿ ರಾಜ್ಯ ಅಲ್ಪಸಂಖ್ಯಾತ ಮೋರ್ಚಾದ ಉಪಾಧ್ಯಕ್ಷರಾಗಿದ್ದಾರೆ.

ಈ ವರ್ಷದ ಜನವರಿಯಲ್ಲಿ ಅವರನ್ನು ಈ ಹುದ್ದೆಗೆ ನೇಮಿಸಲಾಗಿತ್ತು.

ಜೈನ್ ವಿ.ವಿಯಲ್ಲಿ ಅಂಬೇಡ್ಕರ್ ಅವಹೇಳನ ಪ್ರಕರಣ

ತನಿಖೆಗೆ ಉನ್ನತ ಶಿಕ್ಷಣ ಸಚಿವರ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜೈನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರದರ್ಶಿಸಿದ್ದ ಕಿರುನಾಟಕದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅವಹೇಳನ ಮಾಡಿದ್ದಾರೆ ಎಂಬ ಆರೋಪ ಕೇಳಿ ಬಂದಿದ್ದು, ಈ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥ ನಾರಾಯಣ ಅವರು ಸೂಚಿಸಿದ್ದಾರೆ.

'ಜೈನ್ ಕಾಲೇಜಿನಲ್ಲಿ ನಡೆದಿದೆ ಎನ್ನಲಾದ ಈ ಘಟನೆ ದುರದೃಷ್ಟಕರ. ಅಂಬೇಡ್ಕರ್ ಅವರು ಸಂವಿಧಾನ ಶಿಲ್ಪಿ. ಇಡೀ ಜಗತ್ತೇ ಅವರನ್ನು ಗೌರವಿಸುತ್ತಿದೆ. ಈ ಘಟನೆಯನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ಶನಿವಾರವೇ ಪ್ರಧಾನ ಕಾರ್ಯದರ್ಶಿಗೆ ಸೂಚನೆ ಕೊಡಲಾಗಿದ್ದು ಸದ್ಯದಲ್ಲೇ ಅವರು ವರದಿ ನೀಡಲಿದ್ದಾರೆ' ಎಂದು ಸಚಿವರು ತಿಳಿಸಿದ್ದಾರೆ.

ಎಸಿಪಿ ನೇತೃತ್ವದಲ್ಲಿ ತನಿಖೆ: ಪ್ರಕರಣ ಸಂಬಂಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಾಂಶುಪಾಲ, ಕಿರುನಾಟಕ ಅಭಿನಯಿಸಿದ್ದ ವಿದ್ಯಾರ್ಥಿಗಳು ಸೇರಿ ಹಲವರ ವಿರುದ್ಧ ಪ್ರಕರಣ ದಾಖಲಾಗಿದ್ದು ಎಸಿಪಿ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ.

'ಪ್ರಾಂಶುಪಾಲರು, ಡೀನ್, ನಾಟಕ ರಚನೆಕಾರ, ನಾಟಕದಲ್ಲಿ ಅಭಿನಯಿಸಿದ್ದ ವಿದ್ಯಾರ್ಥಿಗಳನ್ನು ಕರೆಸಿ ವಿಚಾರಣೆ ನಡೆಸಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ಪರಿಶೀಲಿಸಲಾಗಿದೆ. ಕಿರುನಾಟಕ ಪ್ರದರ್ಶನದ ಪೂರ್ಣ ವಿಡಿಯೊ ನೀಡಲು ಜೈನ್ ವಿ.ವಿ ಆಡಳಿತ ಮಂಡಳಿಗೆ ಸೂಚಿಸಲಾಗಿದೆ. ವಿಡಿಯೊ ಲಭಿಸಿದ ಕೂಡಲೇ ಮತ್ತೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅವಹೇಳನ ಪ್ರಕರಣ ಖಂಡಿಸಿ ಭಾನುವಾರ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ (ಸಿಎಂಎಸ್) ವಿಭಾಗದ ಎದುರು ದಲಿತ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು. ಬಳಿಕ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದು ಬಿಡುಗಡೆ ಮಾಡಿದರು.

ಜೈನ್ ವಿಶ್ವವಿದ್ಯಾಲಯದ ಕ್ಯಾಂಪಸ್ ಬಳಿ ಪೊಲೀಸ್ ಭದ್ರತೆ ಕಲ್ಪಿಸಲಾಗಿದೆ.

ಆರು ರಾಜ್ಯಪಾಲರ ನೇಮಕ

ಒಂದನೇ ಪುಟದಿಂದ...

₹500 ಹಾಗೂ ₹1,000 ಮುಖಬೆಲೆಯ ನೋಟುಗಳ ಅಮಾನ್ಯೀಕರಣ ಕಾನೂನುಬದ್ಧವಾಗಿದೆ ಎಂದು ಈ ವರ್ಷ ತೀರ್ಪು ನೀಡಿದ್ದ ಸಾಂವಿಧಾನಿಕ ಪೀಠದ ನೇತೃತ್ವವನ್ನು ನಜೀರ್ ಅವರು ವಹಿಸಿದ್ದರು.

ವಿವಾದ: ನಿವೃತ್ತ ಲೆಫ್ಟಿನೆಂಟ್ ಜನರಲ್ ಕೈವಲ್ಯ ತ್ರಿವಿಕ್ರಮ ಪರ್‌ನಾಯಕ್ ಅವರು ಸೇನೆಯ ಉತ್ತರ ಕಮಾಂಡ್‌ನ ಕಮಾಂಡರ್ ಆಗಿ ಕೆಲಸ ಮಾಡಿದ್ದರು. ಇವರ ಕಾಲಾವಧಿಯಲ್ಲಿ ಪಾಕಿಸ್ತಾನದ ಸೇನೆಯು ಪೂಂಚ್ ಸೆಕ್ಟರ್‌ನಲ್ಲಿ ಭಾರತದ ಇಬ್ಬರು ಸೈನಿಕರನ್ನು ಹತ್ಯೆ ಮಾಡಿ ಅವರ ಮೃತದೇಹಗಳನ್ನು ವಿರೂಪಗೊಳಿಸಿತ್ತು.

ರಾಜಸ್ಥಾನದಲ್ಲಿ ಈ ವರ್ಷದ ನವೆಂಬರ್‌ನಲ್ಲಿ ವಿಧಾನಸಭೆ ಚುನಾವಣೆ ನಡೆಯುವ ನಿರೀಕ್ಷೆ ಇದೆ. ಒಂದೊಮ್ಮೆ ಪಕ್ಷ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಗಾದಿಯ ಸ್ಪರ್ಧೆಯಲ್ಲಿ ಕಟಾರಿಯಾ ಹೆಸರು ಕೇಳಿಬರಬಹುದು. ಆಗ ಆಂತರಿಕ ಬೇಗುದಿ ಉಂಟಾಗುವುದನ್ನು ತಪ್ಪಿಸಲು ಹೈಕಮಾಂಡ್ ಕಟಾರಿಯಾ ಅವರನ್ನು ರಾಜ್ಯಪಾಲರ ಹುದ್ದೆಗೆ ನೇಮಿಸುವ ನಿರ್ಧಾರ ಕೈಗೊಂಡಿದೆ ಎಂದು ವಿಶ್ಲೇಷಿಸಲಾಗಿದೆ.

ಕಾಂಗ್ರೆಸ್ ಆಕ್ಷೇಪ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಅವರನ್ನು ರಾಜ್ಯಪಾಲರನ್ನಾಗಿ ನೇಮಿಸಿದ್ದಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದಿರುವ ಕಾಂಗ್ರೆಸ್, ಈ ರೀತಿಯ ನೇಮಕಗಳು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಬಹುದೊಡ್ಡ ಬೆದರಿಕೆ ಎಂದು ಆರೋಪಿಸಿದೆ.

ಬಿಜೆಪಿ ದಿವಂಗತ ನಾಯಕ, ಮಾಜಿ ಕೇಂದ್ರ ಸಚಿವ ಅರುಣ್ ಜೇಟ್ಲಿ ಅವರ ಹೇಳಿಕೆ ಇರುವ ವಿಡಿಯೊ ತುಣುಕನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಟ್ವೀಟ್ ಮಾಡಿದ್ದಾರೆ. ಅದರಲ್ಲಿ ಜೇಟ್ಲಿ ಅವರು, 'ನಿವೃತ್ತಿ ನಂತರ ದೊರಕುವ ಹುದ್ದೆಗಳು ನಿವೃತ್ತಿಗೂ ಮೊದಲು ನೀಡಲಾಗುವ ತೀರ್ಪುಗಳ ಮೇಲೆ ಪ್ರಭಾವ ಬೀರುತ್ತವೆ' ಎಂದಿದ್ದಾರೆ.

ಈ ವಿಡಿಯೊಗೆ ಅಡಿಬರಹ ನೀಡಿರುವ ರಮೇಶ್, 'ಕಳೆದ 3–4 ವರ್ಷಗಳಲ್ಲಿ ಈ ಹೇಳಿಕೆಗೆ ಸಮರ್ಪಕವಾದ ಸಾಕ್ಷ್ಯಗಳು ಲಭಿಸಿವೆ' ಎಂದು ಬರೆದಿದ್ದಾರೆ. ಕಾಂಗ್ರೆಸ್ ವಕ್ತಾರ ಅಭಿಷೇಕ್ ಮನು ಸಿಂಘ್ವಿ ಕೂಡಾ ಈ ಜೇಟ್ಲಿ ಅವರ ಹೇಳಿಕೆ ಉಲ್ಲೇಖಿಸಿ ನಜೀರ್ ಅವರ ನೇಮಕವನ್ನು ವಿರೋಧಿಸಿದ್ದಾರೆ.

ಬೆಳುವಾಯಿಯ ನ್ಯಾ. ಅಬ್ದುಲ್ ನಜೀರ್

ಮೂಡುಬಿದಿರೆ: ಆಂಧ್ರಪ್ರದೇಶ ರಾಜ್ಯಪಾಲರಾಗಿ ನೇಮಕವಾಗಿರುವ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್ ಅವರು ಮೂಡುಬಿದಿರೆ ತಾಲ್ಲೂಕಿನ ಬೆಳುವಾಯಿ ಕಾನಾ ನಿವಾಸಿ ಫಕೀರ್ ಸಾಬ್- ಹಮೀದಾಬಿ ದಂಪತಿಯ ಮೊದಲ ಮಗನಾಗಿ 1958ರ ಜ.5ರಂದು ಜನಿಸಿದರು.

ಕಡಲಕೆರೆ ಸಂತ ಇಗ್ನೇಶಿಯಸ್ ಶಾಲೆ ಮತ್ತು ಅಲಂಗಾರು ಸೇಂಟ್ ಥಾಮಸ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಮೂಡುಬಿದಿರೆ ಜೈನ್ ಹೈಸ್ಕೂಲ್‌ನಲ್ಲಿ ಪ್ರೌಢ ಶಿಕ್ಷಣ ಹಾಗೂ ಮಹಾವೀರ ಕಾಲೇಜಿನಲ್ಲಿ ಪದವಿಪೂರ್ವ ಹಾಗೂ ಬಿ.ಕಾಂ. ಪದವಿ ಪೂರೈಸಿದ ಬಳಿಕ ಮಂಗಳೂರಿನ ಎಸ್‌ಡಿಎಂ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದರು. ಕಾರ್ಕಳದ ಸಮೀರಾ ಅವರನ್ನು 1984ರಲ್ಲಿ ವಿವಾಹವಾಗಿದ್ದು, ದಂಪತಿಗೆ ಪುತ್ರ ಅಕೀಲ್ ಹಾಗೂ ಪುತ್ರಿ ಇರ್ಫಾನಾ ಇದ್ದಾರೆ. ಇವರಿಬ್ಬರೂ ಬೆಂಗಳೂರಿನಲ್ಲಿ ವಕೀಲ ವೃತ್ತಿ ನಡೆಸುತ್ತಿದ್ದಾರೆ.

ಆರ್‌ಎಸ್‌ಎಸ್‌ನ ಅಂಗಸಂಸ್ಥೆ ಅಖಿಲ ಭಾರತೀಯ ಅಧಿವಕ್ತ ಪರಿಷತ್ (ಎಬಿಎಪಿ) 2021ರ ಡಿಸೆಂಬರ್ 26ರಂದು ಹೈದರಾಬಾದ್‌ನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಂಡಳಿಯ 16ನೇ ಸಭೆಯಲ್ಲಿ ನಜೀರ್ ಅವರು, 'ಭಾರತೀಯ ಕಾನೂನು ವ್ಯವಸ್ಥೆಯ ವಸಾಹತೀಕರಣ' ವಿಷಯವಾಗಿ ಉಪನ್ಯಾಸ ನೀಡಿದ್ದರು. 'ಭಾರತೀಯ ನ್ಯಾಯಾಂಗ ವ್ಯವಸ್ಥೆಯು ವಸಾಹತುಶಾಹಿಯಾಗಿದ್ದು, ಭಾರತಕ್ಕೆ ಸೂಕ್ತವಾಗಿಲ್ಲ. ಮನು, ಕೌಟಿಲ್ಯ, ಕಾತ್ಯಾಯನ, ಬೃಹಸ್ಪತಿ, ನಾರದ, ಯಾಜ್ಞವಲ್ಕ್ಯ ಮತ್ತು ಪ್ರಾಚೀನ ಭಾರತವು ಹಾಕಿಕೊಟ್ಟ ಸಂಪ್ರದಾಯಗಳಿಂದ ಕಲಿತು, ನಮ್ಮ ನ್ಯಾಯಾಂಗ ವ್ಯವಸ್ಥೆಯನ್ನು ಭಾರತೀಯಗೊಳಿಸುವ ಕಾರ್ಯ ಆಗಬೇಕು' ಎಂದು ಅವರು ಅಲ್ಲಿ ಪ್ರತಿಪಾದಿಸಿದ್ದರು.

ಶಿಕ್ಷಣ



ಪೂರ್ವಸಿದ್ಧತಾ ಪರೀಕ್ಷೆಗಳು ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಬೂಸ್ಟರ್‌ಗಳಿದ್ದಂತೆ. ಅವು ಮುಖ್ಯಪರೀಕ್ಷೆಗೆ ಬೇಕಾದ ಶಿಸ್ತು ಕಲಿಸುತ್ತವೆ.

ಬೇಕು ಪೂರ್ವಸಿದ್ಧತಾ ಪರೀಕ್ಷೆಗಳು

ಸದಾಶಿವ್ ಸೊರಟೂರು

ಮೊದಲ ಬಾರಿ ದೊಡ್ಡ ಪರೀಕ್ಷೆಗೆ (ಎಸ್ಸೆಸ್ಸೆಲ್ಸಿ, ಪಿಯುಸಿ) ಕೂರುವ ಮಕ್ಕಳಿಗೆ ಆತ್ಮವಿಶ್ವಾಸ ಬೇಕು. ಅವರಿಗೆ ಈಗಾಗಲೇ ಇದರ ಬಗ್ಗೆ ಎಷ್ಟೇ ಹೇಳಿದರೂ ಏನೇ ಹೇಳಿದರೂ ಅಷ್ಟಕ್ಕೆ ಅವರ ಮನಸು ಒಪ್ಪುವುದಿಲ್ಲ. ಆ ಕೆಲಸಗಳನ್ನು ಪೂರ್ವ ಸಿದ್ಧತಾ ಪರೀಕ್ಷೆಗಳು (ಪ್ರಿಪ್ರೇಟರಿ ಪರೀಕ್ಷೆ) ಯಶಸ್ವಿಯಾಗಿ ಮಾಡಬಲ್ಲವು. ಕುಸ್ತಿಪಟು ಅಖಾಡಕ್ಕೆ ಇಳಿಯುವ ಮುನ್ನ ಬೆವರು ಹರಿಸಿ ಹೊಸಪಟ್ಟು ಕಲಿಯುತ್ತಾನೆ. ಹಾಗೆ ಮಕ್ಕಳಿಗೂ ಈ ಪೂರ್ವಸಿದ್ಧತಾ ಪರೀಕ್ಷೆಗಳ ತಾಲೀಮು ಯಶಸ್ಸು ತಂದುಕೊಡಬಲ್ಲದು.

ಈಗಾಗಲೇ ಶಾಲೆ ಕಾಲೇಜುಗಳಲ್ಲಿ ಪೂರ್ವ ಸಿದ್ಧತಾ ಪರೀಕ್ಷೆಗಳ ಸರಣಿಗಳು ಆರಂಭವಾಗಿವೆ. ಪೂರ್ವ ಸಿದ್ಧತಾ ಪರೀಕ್ಷೆಯಿಂದ ಮಗುವಿನ ಆತ್ಮವಿಶ್ವಾಸ ಹೇಗೆಲ್ಲ ಹೆಚ್ಚುತ್ತದೆ ಎಂಬುದನ್ನು ಇಲ್ಲಿ ಒಂದಷ್ಟು ಚರ್ಚಿಸಲಾಗಿದೆ.

1. ಪ್ರಶ್ನೆಪತ್ರಿಕೆಯ ಸ್ವರೂಪ, ಸಂರಚನೆಯ ಅರಿವು

ಪ್ರತಿ ಪ್ರಶ್ನೆಪತ್ರಿಕೆಯು ಒಂದು ನೀಲ ನಕಾಶೆಯನ್ನು ಆಧರಿಸಿರುತ್ತದೆ. ಒಂದು ಪತ್ರಿಕೆಯಲ್ಲಿ ಏನಿರಬೇಕು? ಎಷ್ಟಿರಬೇಕು? ಎಂಬುದರ ಬಗ್ಗೆ ಪರೀಕ್ಷಾ ಮಂಡಳಿ ಸ್ಪಷ್ಟವಾಗಿ ಸೂಚಿಸಿರುತ್ತದೆ. ಅದರಂತೆ ಪೂರ್ವ ಸಿದ್ಧತಾ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಇರುವುದರಿಂದ ಮಗುವಿಗೆ ತಾನು ಮುಂದೆ ಬರೆಯಬೇಕಾದ ಪತ್ರಿಕೆಯ ಬಗ್ಗೆ ಸ್ಪಷ್ಟನೆ ಸಿಗುತ್ತದೆ. ಕಠಿಣತೆಯ ಮಟ್ಟ, ಸರಳತೆ ಹಾಗೂ ಪ್ರಶ್ನೆಗಳ ಸ್ವರೂಪ ಇವುಗಳನ್ನು ಮಗು ಅವಲೋಕಿಸಿ ಅದರಂತೆ ತಯಾರಿ ಮಾಡಿಕೊಂಡು ಮುಖ್ಯ ಪರೀಕ್ಷೆಯಲ್ಲಿ ಸರಾಗವಾಗಿ ಬರೆಯಲು ಅನುಕೂಲವಾಗುತ್ತದೆ. ಪ್ರಶ್ನೆ ಪತ್ರಿಕೆಯೇ ಪರೀಕ್ಷೆ ಜೀವಾಳವಾದ್ದರಿಂದ ಮಗು ಮೂರುಗಂಟೆಯಲ್ಲಿ ಅದರ ಸ್ವರೂಪವನ್ನು ಸರಿಯಾಗಿ ಗ್ರಹಿಸಲು ಪೂರ್ವ ಸಿದ್ಧತಾ ಪರೀಕ್ಷೆ ಕಲಿಸಿಕೊಡುತ್ತದೆ.

2. ಸಮಯ ನಿರ್ವಹಣೆ

ಕೆಲವು ವಿದ್ಯಾರ್ಥಿಗಳು ಪರೀಕ್ಷೆ ಕೊಠಡಿಯಿಂದ ಹೊರಬಂದಾಗ ಅವರಲ್ಲಿ ಒಂದು ಗೊಣಗಾಟವಿರುತ್ತದೆ. 'ಸರ್, ಟೈಮ್ ಸಾಕಾಗಲಿಲ್ಲ. ಬೇಗ ಉತ್ತರ ಪತ್ರಿಕೆ ಕಿತ್ತುಕೊಂಡ್ರು' ಅಂತಾರೆ. ಪತ್ರಿಕೆಗಳಲ್ಲಿರುವ ಪ್ರಶ್ನೆಗಳಿಗೆ ಸಾಕಾಗುವಷ್ಟು ಸಮಯ ನೀಡಲಾಗಿರುತ್ತದೆ. ಸಮಯ ಸಾಕಾಗಿಲ್ಲ ಅಂದ್ರೆ ಅಗತ್ಯಕ್ಕಿಂತ ಹೆಚ್ಚು ಬರೆದಿದ್ದೀರಿ ಮತ್ತು ಕಾಲಹರಣ ಮಾಡಿದ್ದೀರಿ ಅಂತ ಅರ್ಥ. ಮಕ್ಕಳು ಪೂರ್ವಸಿದ್ಧತಾ ಪರೀಕ್ಷೆಯಲ್ಲಿಯೇ ತನ್ನ ಸಮಯ ಹೊಂದಾಣಿಕೆಯನ್ನು ಕಲಿಯಬಹುದು. ಎಷ್ಟು ಬರೆಯಬೇಕು. ಕಾಲಹರಣ ತಡೆಯುವುದು ಹೇಗೆ ಎಂಬುದನ್ನು ಮಗು ಕಲಿಯಬಹುದು.

3. ಶಿಕ್ಷಕರಿಗೆ ಸ್ಪಷ್ಟವಾದ ಹಿಮ್ಮಾಹಿತಿ

ಪೂರ್ವಸಿದ್ಧತಾ ಪರೀಕ್ಷೆಗಳು ಬರೀ ಮಕ್ಕಳಿಗೆ ವರದಾನ ಎಂದು ಭಾವಿಸಬಾರದು. ಅದು ಶಿಕ್ಷಕರಿಗೂ ಸಹಾಯಕ. ಶಿಕ್ಷಕ ತಾನು ಕಲಿಸುವ ವಿಷಯದಲ್ಲಿ ಯಾವ ಮಗು ಯಾವ ಹಂತದಲ್ಲಿದೆ. ಯಾವ ಮಗು ಯಾವ ತಪ್ಪು ಮಾಡಿದೆ. ಯಾವ ಮಗುವಿಗೆ ಇನ್ನಷ್ಟು ಹೇಳಿಕೊಡಬೇಕು. ಯಾವ ತಪ್ಪು ತಿದ್ದಬೇಕು. ಯಾವುದು ಸರಿ? ಯಾವುದು ತಪ್ಪು? ಯಾವುದು ಬೇಕು? ಯಾವುದು ಬೇಡ? ಇಂತಹ ಹತ್ತು ಹಲವು ವಿಚಾರಗಳ ಬಗ್ಗೆ ಪೂರ್ವ ಸಿದ್ಧತಾ ಪರೀಕ್ಷೆಯಿಂದ ಹಿಮ್ಮಾಹಿತಿ(Feedback) ಸಿಗುತ್ತದೆ. ಕಲಿಸುವ ಯೋಜನೆ ಮರು ರೂಪಿಸಿಕೊಳ್ಳಲು ಶಿಕ್ಷಕರಿಗೆ ಮತ್ತು ಯಶಸ್ವಿಯಾಗಿ ಪರೀಕ್ಷೆ ಬರೆಯುವಂತಾಗಲು ಮಗುವಿಗೆ ಸಹಾಯವಾಗುತ್ತದೆ.

4. ಆತ್ಮವಿಶ್ವಾಸ, ಭರವಸೆಯ ಬೂಸ್ಟರ್

ಇದನ್ನು ಬರೆಯಲು ಆಗುತ್ತದಾ? ನಾನು ಸತತ ಮೂರು ಗಂಟೆ ಕೂತು ಬರೆಯಬಲ್ಲೆನಾ? ಎಷ್ಟು ಬರೆಯಬೇಕು? ಹೇಗೆ ಬರೆದರೆ ಅಂಕ ಬರುತ್ತವೆ? ಮಕ್ಕಳ ಇಂತಹ ಹತ್ತೆಂಟು ಪ್ರಶ್ನೆಗಳಿಗೆ ಪೂರ್ವ ಸಿದ್ಧತಾ ಪರೀಕ್ಷೆ ಉತ್ತರ ಒದಗಿಸುತ್ತದೆ. ಮಕ್ಕಳಲ್ಲಿ ಆತ್ಮವಿಶ್ವಾಸ ರೂಪುಗೊಳ್ಳುತ್ತದೆ. ಪರೀಕ್ಷೆ ಅಂದರೆ ಭಯ ಪಡುವ ಬದಲು ಅದಕ್ಕೆ ಸರಿಯಾದ ತಯಾರಿ ನಡೆಸಲು ಪೂರ್ವ ಸಿದ್ಧತಾ ಪರೀಕ್ಷೆಗಳು ಸಹಕಾರಿ.

ಮುಖ್ಯ ಪರೀಕ್ಷೆ ಬಗ್ಗೆ ಮಗುವಿಗೆ ಸ್ವಾಭಾವಿಕವಾಗಿರುವ ಆತಂಕಗಳು ಈ ಪರೀಕ್ಷೆಯಿಂದ ದೂರವಾಗುತ್ತವೆ. ಮಗು ಮುಖ್ಯ ಪರೀಕ್ಷೆಯನ್ನು ಅಷ್ಟೊಂದು ಗಂಭೀರವಾಗಿ ತೆಗೆದುಕೊಂಡು ತಲ್ಲಣಿಸದೇ ಸ್ವಾಭಾವಿಕವಾಗಿಯೇ ಬರೆದು ಮುಗಿಸುವಂತೆ ಅಣಿಗೊಳಿಸುವ ಕಾರ್ಯವನ್ನು ಪೂರ್ವ ಸಿದ್ಧತಾ ಪರೀಕ್ಷೆ ಮಾಡುತ್ತದೆ.

> ಇದು ಮಗುವಿಗೆ ತನ್ನ ಅವಲೋಕನಕ್ಕೆ ಬೇಕೇ ಬೇಕಾದ ಒಂದು ತಂತ್ರ. ಮುಖ್ಯ ಪರೀಕ್ಷೆ ಬರೆದ ಮೇಲೆ ಅಲ್ಲಿ ತಿದ್ದಿಕೊಳ್ಳಲು ಅವಕಾಶ ಇಲ್ಲ. ಆದರೆ ಪೂರ್ವಸಿದ್ಧತಾ ಪರೀಕ್ಷೆಗಳಿಂದ ತಿದ್ದಿಕೊಳ್ಳಬಹುದು. ಪೂರ್ವ ಸಿದ್ಧತಾ ಪರೀಕ್ಷೆಗಳ ಯಶಸ್ಸು ಅದನ್ನು ಹೇಗೆ ಆಯೋಜಿಸುತ್ತೇವೆ ಅನ್ನುವುದರ ಮೇಲಿದೆ. ಪ್ರಾಮಾಣಿಕ ಆಯೋಜನೆಗೆ ಪ್ರಾಮಾಣಿಕ ಫಲಿತಾಂಶ ಲಭ್ಯ. ಮಕ್ಕಳು ಪೂರ್ವಸಿದ್ಧತಾ ಪರೀಕ್ಷೆಗಳಿಂದ ತಮ್ಮ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುತ್ತಾರೆ.
>
> **ರೇಣುಕಾ ಎಸ್,** ಹಿರಿಯ ಉಪನ್ಯಾಸಕರು. ಡಯಟ್, ಶಿವಮೊಗ್ಗ.

ಹೆಚ್ಚು ಸರಣಿ ಪರೀಕ್ಷೆಗಳು ಬೇಡ..

ಪೂರ್ವ ಸಿದ್ಧತಾ ಪರೀಕ್ಷೆಗಳು ಎರಡಾದರೆ ಚೆಂದ ಮತ್ತು ಉಪಯುಕ್ತ. ಕೆಲವರು ಶಾಲಾ ಹಂತ, ತಾಲ್ಲೂಕು ಹಂತ, ಜಿಲ್ಲಾ ಹಂತ, ರಾಜ್ಯ ಹಂತ.. ಅಂತ ಹಲವು ಪರೀಕ್ಷೆ ಮಾಡುತ್ತಾರೆ. ಮಗು ಒಂದು ತಿಂಗಳು ಸತತವಾಗಿ ಪರೀಕ್ಷೆ ಬರೆಯುತ್ತಲೇ ಕೂರಬೇಕಾಗುತ್ತದೆ. ಇದು ಅಧ್ಯಯನಕ್ಕೆ ಮತ್ತು ಮುಖ್ಯ ಪರೀಕ್ಷೆಯ ತಯಾರಿಗೆ ತೊಡಕಾಗುತ್ತದೆ. ಅಲ್ಲದೆ ಮಗುವಿಗೆ ಪರೀಕ್ಷೆ ಎಂದರೆ ಒಂದು ರೀತಿಯ ಅಸಹನೆ ಮೂಡಿ ಅದು ಮುಖ್ಯ ಪರೀಕ್ಷೆಯನ್ನು ಪ್ರಭಾವಿಸುತ್ತದೆ.



ಅವಶ್ಯಕ ತಾಲೀಮು

ಕೆಲವರು ಪೂರ್ವ ಸಿದ್ಧತಾ ಪರೀಕ್ಷೆಯನ್ನು ಲಘುವಾಗಿ ತೆಗೆದುಕೊಳ್ಳುತ್ತಾರೆ. ಆದರೆ ಅದು ಸರಿಯಲ್ಲ. ಮುಖ್ಯ ಪರೀಕ್ಷೆಗೆ ಇದು ಒಂದು ತಾಲೀಮು. ಪರೀಕ್ಷೆ ಎಂದರೆ ಕೇವಲ ಉತ್ತರ ಬರೆಯುವ ಕ್ರಿಯೆ ಅಲ್ಲ. ಅನೇಕ ಆತಂಕಗಳ ಮೊತ್ತ ಅದು. ಅದನ್ನು ಒಂದೊಂದಾಗಿ ಬಿಡಿಸುವ ಕೆಲಸವನ್ನು ಇದು ಮಾಡುತ್ತದೆ. ಎಲ್ಲಾ ರೀತಿಯಿಂದ ಇದೊಂದು ಅವಶ್ಯಕವಾಗಿ ಬೇಕಾದ ತಾಲೀಮು.

ಎಲ್‌ಎಸ್‌ಸಿಎಲ್ ಹಾರ್ಟಿಕಲ್ಚರ್ ಇಂಟರ್ನ್‌ಷಿಪ್ 2023

ವಿದ್ಯಾರ್ಥಿ ವೇತನ ಕೈಪಿಡಿ

ಲೂಧಿಯಾನ್ ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆ ಎಲ್‌ಎಸ್‌ಸಿಎಲ್ ಹಾರ್ಟಿಕಲ್ಚರ್ ಇಂಟರ್ನ್‌ಷಿಪ್ ಗಾಗಿ ಬಿ.ಎಸ್ಸಿ ಪದವೀಧರರಿಂದ ಅರ್ಜಿ ಆಹ್ವಾನಿಸಿದೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದು.

ತೋಟಗಾರಿಕೆ ವಿಷಯದಲ್ಲಿ ಬಿ.ಸಿ ಪದವಿ ಜೊತೆಗೆ, ಈ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಕೌಶಲ ಮತ್ತು ಆಸಕ್ತಿ ಇದ್ದವರು ಈ ಇಂಟರ್ನ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು. ಈ ಇಂಟರ್ನ್‌ಷಿಪ್ ಅವಧಿ 12 ತಿಂಗಳು ಅವಧಿಯವರೆಗೆ ಲಭ್ಯವಿರುತ್ತದೆ.

ಆರ್ಥಿಕ ನೆರವು: ಮಾಸಿಕ ₹ 12,000

ಅರ್ಜಿ ಸಲ್ಲಿಕೆ ಕೊನೆ ದಿನ: 28/2/2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ : www.b4s.in/praja/LHSI3

ಎಸ್ಸೆಸ್ಸೆಲ್ಸಿ- ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಮಾದರಿ ಪ್ರಶ್ನೋತ್ತರ

12) ಕೆಳಗಿನ ಸಂದರ್ಭಗಳನ್ನು ಕಲ್ಪಿಸಿಕೊಳ್ಳಿ

(1) ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು

(2) ದೇಹದಲ್ಲಿ ಏರುಪೇರಾಗುತ್ತಿರುವ ರಕ್ತದ ಒತ್ತಡ

ಈ ಸಂದರ್ಭಗಳು ಕ್ರಿಯಾತ್ಮಕವಾಗಿ ಹೇಗೆ ಭಿನ್ನವಾಗಿವೆ? ಕಾರಣ ಕೊಡಿ. (ಜೂನ್ 2019)

ಉತ್ತರ:- (1) ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು. ಇದು ಐಚ್ಛಿಕ ಕ್ರಿಯೆ ನಾವು ಮಾಡುವ ಆಲೋಚನೆಯ ಆಧಾರದ ಮೇಲೆ ನಡೆಯುವ ಕ್ರಿಯೆ. ಮುಮ್ಮೆದುಳಿನಿಂದ ನಿಯಂತ್ರಿಸಲ್ಪಡುತ್ತದೆ.

(2) ದೇಹದಲ್ಲಿ ಏರುಪೇರಾಗುತ್ತಿರುವ ರಕ್ತದ ಒತ್ತಡ ಇದು ಅನೈಚ್ಛಿಕ ಕ್ರಿಯೆ, ಆಲೋಚನೆ ನಿಯಂತ್ರಣವಿಲ್ಲದ ಕ್ರಿಯೆ, ಹಿಮ್ಮೆದುಳಿನಿಂದ ನಿಯಂತ್ರಿಸಲ್ಪಡುತ್ತದೆ.

13) ನಾವು ಕಾಡುಗಳ ಸಂರಕ್ಷಣೆಯನ್ನು ಪರಿಗಣಿಸುವಾಗ ಪಾಲುದಾರರು ಯಾರು ಯಾರು ಇದ್ದಾರೆ?


ಉತ್ತರ:-

- ನಾವು ಕಾಡುಗಳ ಸಂರಕ್ಷಣೆಯನ್ನು ಪರಿಗಣಿಸುವಾಗ ಪಾಲುದಾರರು ಯಾರು ಯಾರು ಎಂದರೆ ತಮ್ಮ ಜೀವನದ ಅನೇಕ ಅವಶ್ಯಕತೆಗಳಿಗಾಗಿ ಕಾಡಿನಲ್ಲಿ ಮತ್ತು ಅದರ ಸುತ್ತಮುತ್ತ ವಾಸಿಸುವ ಜನರು ಇವರು ಅರಣ್ಯ ಉತ್ಪನ್ನಗಳ ಮೇಲೆ ಅವಲಂಬಿತರಾಗಿದ್ದಾರೆ
- ಸರ್ಕಾರದ ಅರಣ್ಯ ಇಲಾಖೆಯು ಅರಣ್ಯ ಪ್ರದೇಶದ ಒಡೆತನವನ್ನು ಹೊಂದಿದ್ದು, ಅರಣ್ಯದಿಂದ ದೊರಕುವ ಸಂಪನ್ಮೂಲಗಳನ್ನು ನಿಯಂತ್ರಿಸುತ್ತದೆ.
- ತೆಂಡು ಎಲೆ(tendu leaves)ಗಳನ್ನು ಬಳಸಿ ಬೀಡಿ ಕಟ್ಟುವವರಿಂದ ಹಿಡಿದು, ಕಾಗದ ಕಾರ್ಖಾನೆಗಳ ಮಾಲೀಕರವರೆಗಿನ ಕೈಗಾರಿಕೋದ್ಯಮಿಗಳು ಅನೇಕ ಅರಣ್ಯ ಉತ್ಪನ್ನಗಳನ್ನು ಬಳಸುತ್ತಾರೆ. ಆದರೆ, ಅವರು ಯಾವುದೇ ಒಂದು ಪ್ರದೇಶದ ಅರಣ್ಯಗಳ ಮೇಲೆ ಅವಲಂಬಿತರಾಗಿರುವುದಿಲ್ಲ.
- ವನ್ಯಜೀವಿ ಮತ್ತು ನಿಸರ್ಗವನ್ನು ಪ್ರೀತಿಸುವ ಉತ್ಸಾಹಿಗಳು ನಿಸರ್ಗವನ್ನು ಅದರ ಮೂಲರೂಪದಲ್ಲೇ ಸಂರಕ್ಷಿಸಲು ಬಯಸುತ್ತಾರೆ.

14) ಗಾಜಿನ ಪಟ್ಟಕದ ಮೂಲಕ ಬೆಳಕಿನ ವರ್ಣವಿಭಜನೆ ಕುರಿತು ಬರೆಯಿರಿ.

ಉತ್ತರ:-ಕಾಮನಬಿಲ್ಲಿನ ಅದ್ಭುತ ಬಣ್ಣಗಳನ್ನು ನೋಡಲು ಸಾಧ್ಯ. ಸೂರ್ಯನ ಬಿಳಿ ಬೆಳಕು ವಿವಿಧ ಬಣ್ಣಗಳ ಕಾಮನಬಿಲ್ಲನ್ನು ಉಂಟುಮಾಡುತ್ತದೆ. ಪಟ್ಟಕದ ಮೂಲಕ ಬೆಳಕಿನ ವಕ್ರೀಭವನವನ್ನು ತಿಳಿಬಹುದು. ಇಳಿಜಾರಾದ ಗಾಜಿನ ಪಟ್ಟಕದ ವಕ್ರೀಭವನ ಮೇಲ್ಮೈಗಳು ಅತ್ಯಾಕರ್ಷಕ ವಿದ್ಯಮಾನವನ್ನು ತೋರುತ್ತವೆ.


ಪಟ್ಟಕವು ಪತನವಾದ ಬಿಳಿ ಬೆಳಕನ್ನು ಬಣ್ಣಗಳ ಗುಂಪನ್ನಾಗಿ ವಿಭಜಿಸುತ್ತದೆ. (ಕೆಳಗಿನ ಚಿತ್ರ ಗಮನಿಸಿ)



ಬಣ್ಣದ ಗುಂಪಿನ ಎರಡು ತುದಿಗಳಲ್ಲಿರುವ ಬಣ್ಣಗಳನ್ನು ಗಮನಿಸಿ. ಪರದೆಯ ಮೇಲೆ ನೇರಳೆ, ಊದಾ, ನೀಲಿ, ಹಸಿರು, ಹಳದಿ, ಕಿತ್ತಳೆ ಮತ್ತು ಕೆಂಪು ಬಣ್ಣಗಳನ್ನು ತೋರಿಸಿರುವಂತೆ ಚಿತ್ರಿತವಾಗಿದೆ. ಅಕ್ಷರಪುಂಜ VIBGYOR ಎಂದೂ ಬಣ್ಣಗಳ ಅನುಕ್ರಮ ಜೋಡಣೆಯನ್ನು ನೆನಪಿಟ್ಟುಕೊಳ್ಳುತ್ತೇವೆ. ಬೆಳಕಿನ ಕಿರಣದ ವರ್ಣಮಯ ಘಟಕಗಳ ಪಟ್ಟಿಯನ್ನು ರೋಹಿತವೆಂದು ಕರೆಯುತ್ತೇವೆ.


ಎಲ್ಲಾ ಬಣ್ಣಗಳನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಬಿಳಿಯ ಬಣ್ಣವು ಅದರ ವಿಭಿನ್ನ ಬಣ್ಣಗಳ ಘಟಕಗಳಾಗಿ ವಿಭಜನೆ ಹೊಂದುವುದನ್ನು ಬೆಳಕಿನ ವರ್ಣವಿಭಜನೆ ಎನ್ನುತ್ತೇವೆ. ಪಟ್ಟಕದ ಮೂಲಕ ಹಾಯುವ ಬಿಳಿ ಬೆಳಕು ಏಳು ಬಣ್ಣಗಳಾಗಿ ವಿಭಜನೆ ಹೊಂದುವುದು ಪಟ್ಟಕದ ಮೂಲಕ ಹಾದು ಹೋದಾಗ ಪತನ ಕಿರಣಕ್ಕೆ ಸಂಬಂಧಿಸಿದಂತೆ ಪ್ರತೀ ಬಣ್ಣವೂ ತನ್ನದೇ ಆದ ಕೋನದಿಂದ ಬಾಗುವುದು. ಕೆಂಪು ಬಣ್ಣವು ಕನಿಷ್ಠವಾಗಿ ಮತ್ತು ನೇರಳೆ ಬಣ್ಣವು ಗರಿಷ್ಠವಾಗಿ ಬಾಗುವುದು. ಆದ್ದರಿಂದ ಪ್ರತಿ ಬಣ್ಣವು ತನ್ನದೇ ಆದ ನಿರ್ಗಮ ಕೋನದ ಮೂಲಕ ಬೇರೆ ಪಥಗಳಲ್ಲಿ ಹೊರಹೊಮ್ಮುವುದರಿಂದ ವಿಶಿಷ್ಟವಾಗಿರುವುದು. ಈ ವಿಶಿಷ್ಟ ಬಣ್ಣಗಳ ಪಟ್ಟಿಯನ್ನು ನಾವು ರೋಹಿತದಲ್ಲಿ ನೋಡುತ್ತೇವೆ

ಸರ್ ಐಸಾಕ್ ನ್ಯೂಟನ್‌ರವರು ಸೂರ್ಯನ ಬೆಳಕಿನ ರೋಹಿತವನ್ನು ಪಡೆಯಲು ಗಾಜಿನ ಪಟ್ಟಕವನ್ನು ಬಳಸಿದ ಮೊದಲಿಗರು. ಅವರು ಮತ್ತೊಂದು ಸಮರೂಪಿ ಪಟ್ಟಕವನ್ನು ಬಳಸಿ ರೋಹಿತದ ಬಣ್ಣಗಳನ್ನು ಬೇರ್ಪಡಿಸಲು ಪ್ರಯತ್ನಿಸಿದರು. ಅವರಿಗೆ ಹೆಚ್ಚಿನ ಬಣ್ಣಗಳು ದೊರೆಯಲಿಲ್ಲ. ಆದರೆ ಅವರು ಸಮರೂಪಿಯಾದ ಮತ್ತೊಂದು ಪಟ್ಟಕವನ್ನು ಮೊದಲಿನ ಪಟ್ಟಕದ ವಿರುದ್ಧ ದಿಕ್ಕಿನಲ್ಲಿ ತಲೆಕೆಳಗಾಗಿ ಚಿತ್ರದಲ್ಲಿರುವಂತೆ ಇರಿಸಿದರು.



ಇದು ರೋಹಿತದ ಎಲ್ಲಾ ಬಣ್ಣಗಳು ತಲೆಕೆಳಗಾದ ಪಟ್ಟಕದ ಮೂಲಕ ಹಾದು ಹೋಗಲು ಅವಕಾಶ ಕಲ್ಪಿಸಿತು. ಎರಡನೇ ಪಟ್ಟಕದ ಮತ್ತೊಂದು ಕಡೆಯಿಂದ ನಿರ್ಗಮಿಸುವ ಬೆಳಕು ಬಿಳಿಬಣ್ಣದಾಗಿತ್ತು. ಈ ವೀಕ್ಷಣೆಯು ಸೂರ್ಯನ ಬೆಳಕು ಏಳು ಬಣ್ಣಗಳಿಂದುಂಟಾಗಿದೆ ಎಂದು ತೀರ್ಮಾನಿಸಿಲು ನ್ಯೂಟನ್‌ರಿಗೆ ಸುಳಿವು ನೀಡಿತು. ಸೂರ್ಯನ ರೋಹಿತದಂತಹ ರೋಹಿತವನ್ನು ನೀಡುವ ಯಾವುದೇ ಬೆಳಕನ್ನು ಬಿಳಿಯ ಬೆಳಕು ಎಂದು ಕರೆಯುವರು.

ಕಾಮನಬಿಲ್ಲು ಮಳೆಯ ನಂತರ ಆಕಾಶದಲ್ಲಿ ಕಾಣುವ ನೈಸರ್ಗಿಕ ರೋಹಿತವಾಗಿದೆ. (ಚಿತ್ರದಲ್ಲಿರುವಂತೆ)



ಇದು ವಾತಾವರಣದಲ್ಲಿರುವ ಅತಿಸಣ್ಣ ನೀರಿನ ಹನಿಗಳಿಂದ ಉಂಟಾಗುವ ಸೌರಕಿರಣಗಳ ವರ್ಣವಿಭಜನೆಯಾಗಿದೆ. ಕಾಮನಬಿಲ್ಲು ಯಾವಾಗಲೂ ಸೂರ್ಯನ ವಿರುದ್ಧ ದಿಕ್ಕಿನಲಿ.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಗಣಿತ ವಿಷಯದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಮಾದರಿ ಪ್ರಶ್ನೆಗಳು

45) ಕೊಟ್ಟಿರುವ ಸಮೀಕರಣದಿಂದ x ಮತ್ತು yಗಳ ಬೆಲೆಗಳನ್ನು ಕಂಡುಹಿಡಿಯಿರಿ.

$$2\begin{bmatrix} x & 5 \\ 7 & y-3 \end{bmatrix} + \begin{bmatrix} 3 & -4 \\ 1 & 2 \end{bmatrix} = \begin{bmatrix} 7 & 6 \\ 15 & 14 \end{bmatrix}$$

ಪರಿಹಾರ: ಈಗ $2\begin{bmatrix} x & 5 \\ 7 & y-3 \end{bmatrix} + \begin{bmatrix} 3 & -4 \\ 1 & 2 \end{bmatrix} = \begin{bmatrix} 7 & 6 \\ 15 & 14 \end{bmatrix}$

$$\Rightarrow \begin{bmatrix} 2x & 10 \\ 14 & 2y-6 \end{bmatrix} + \begin{bmatrix} 3 & -4 \\ 1 & 2 \end{bmatrix} = \begin{bmatrix} 7 & 6 \\ 15 & 14 \end{bmatrix}$$

$$\begin{bmatrix} 2x+3 & 10-4 \\ 14+1 & 2y-6+2 \end{bmatrix} = \begin{bmatrix} 7 & 6 \\ 15 & 14 \end{bmatrix}$$

$$\Rightarrow \begin{bmatrix} 2x+3 & 6 \\ 15 & 2y-4 \end{bmatrix} = \begin{bmatrix} 7 & 6 \\ 15 & 14 \end{bmatrix}$$

$\Rightarrow$ $2x+3=7$ ಮತ್ತು $2y-4=14$ (ಏಕೆ ?)

$\Rightarrow$ $2x=7-3$ ಮತ್ತು $2y=18$

$\Rightarrow$ $x=\frac{4}{2}$ ಮತ್ತು $y=\frac{18}{2}$

i.e. $x=2$ ಮತ್ತು $y=9$

46) $\int \frac{dx}{(x+1)(x+2)}$ ಕಂಡುಹಿಡಿಯಿರಿ.

ಪರಿಹಾರ:- ಇಲ್ಲಿ ಅನುಕಲನೀಯ ಒಂದು ಶುದ್ಧ ಭಾಗಲಬ್ಧ ಭಿನ್ನರಾಶಿ, ಆದ್ದರಿಂದ ಆಂಶಿಕ ಭಿನ್ನರಾಶಿಯ ರೂಪವನ್ನು ಬಳಸಿ

$$\frac{1}{(x+1)(x+2)} = \frac{A}{x+1} + \frac{B}{x+2}$$ ಎಂದು ಬರೆಯುತ್ತೇವೆ. ... (1)

ಇಲ್ಲಿ ವಾಸ್ತವಿಕ ಸಂಖ್ಯೆಗಳು A ಮತ್ತು B ಗಳನ್ನು ಸರಿ ಹೊಂದುವ ರೀತಿಯಲ್ಲಿ ಕಂಡುಹಿಡಿಯುತ್ತೇವೆ. ಸಮೀಕರಣ (1)ರ ಪ್ರಕಾರ

$1 = A(x+2) + B(x+1)$. ಸಿಗುತ್ತದೆ.

x ನ ಸಹ ಗುಣಕ ಮತ್ತು ಸ್ಥಿರ ಪದಗಳನ್ನು ಸಮಾಂತರಿಸಿದಾಗ

$A + B = 0$

ಮತ್ತು $2A + B = 1$

ಈ ಸಮೀಕರಣಗಳನ್ನು ಪರಿಹರಿಸಿದಾಗ $A = 1$ ಮತ್ತು $B = -1$ ಸಿಗುತ್ತದೆ. ಆದ್ದರಿಂದ ಅನುಕಲನೀಯವನ್ನು ಕೆಳಕಂಡಂತೆ ನೀಡಬಹುದು.

$$\frac{1}{(x+1)(x+2)} = \frac{1}{x+1} + \frac{-1}{x+2}$$

ಆದ್ದರಿಂದ

$$\int \frac{dx}{(x+1)(x+2)} = \int \frac{dx}{x+1} - \int \frac{dx}{x+2}$$

$$= \log|x+1| - \log|x+2| + C$$

$$= \log\left|\frac{x+1}{x+2}\right| + C$$

47) $\int_0^2 (x^2+1)dx$ ನ್ನು ಮೊತ್ತದ ಮಿತಿಯನ್ನಾಗಿ ಕಂಡುಹಿಡಿಯಿರಿ.

ಪರಿಹಾರ: ವ್ಯಾಖ್ಯೆಯಂತೆ

$$\int_a^b f(x)dx = (b-a)\lim_{n\to\infty}\frac{1}{n}\left[f(a)+f(a+h)+\dots+f(a+(n-1)h)\right],$$

ಇಲ್ಲಿ

$$h = \frac{b-a}{n}$$

$$a=0,\ b=2,\ f(x)=x^2+1,\ h=\frac{2-0}{n}=\frac{2}{n}$$

ಆದ್ದರಿಂದ

$$\int_0^2 (x^2+1)dx = 2\lim_{n\to\infty}\frac{1}{n}\left[f(0)+f\left(\frac{2}{n}\right)+f\left(\frac{4}{n}\right)+\dots+f\left(\frac{2(n-1)}{n}\right)\right]$$

$$= 2\lim_{x\to\infty}\frac{1}{n}\left[1+\left(\frac{2^2}{n^2}+1\right)+\left(\frac{4^2}{n^2}+1\right)+\dots+\left(\frac{(2n-2)^2}{n^2}+1\right)\right]$$

$$= 2\lim_{x\to\infty}\frac{1}{n}\left[\underbrace{(1+1+\dots+1)}_{n\text{-terms}}+\frac{1}{n^2}(2^2+4^2+\dots+(2n-2)^2\right]$$

$$= 2\lim_{n\to\infty}\frac{1}{n}\left[n+\frac{2^2}{n^2}(1^2+2^2+\dots+(n-1)^2\right]$$

$$= 2\lim_{n\to\infty}\frac{1}{n}\left[n+\frac{4}{n^2}\frac{(n-1)n(2n-1)}{6}\right]$$

$$= 2\lim_{n\to\infty}\frac{1}{n}\left[n+\frac{2}{3}\frac{(n-1)(2n-1)}{n}\right]$$

$$= 2\lim_{n\to\infty}\left[1+\frac{2}{3}\left(1-\frac{1}{n}\right)\left(2-\frac{1}{n}\right)\right] = 2\left[1+\frac{4}{3}\right] = \frac{14}{3}$$


ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯು ಭೌತವಿಜ್ಞಾನದ ಆಂಗ್ಲ ಭಾಷೆಯ ಪುನಾವರ್ತನೆ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ತರಬೇತಿ ಕೇಂದ್ರ, ಬೆಂಗಳೂರು

ಸ್ಕಾಲರ್‌ಷಿಪ್ ಪಡೆಯುವುದು ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ಶೇ 80ರಷ್ಟು ಅಂಕದೊಂದಿಗೆ ಎಸ್ಸೆಸ್ಸೆಲ್ಸಿ ಮುಗಿಸಿದ್ದೇನೆ. ಅಪ್ಪನಿಗೆ ಅನಾರೋಗ್ಯ; ಅಮ್ಮ ಅಂಗವೈಕಲ್ಯದಿಂದ ಬಳಲುತ್ತಿದ್ದಾರೆ; ತಂಗಿ 8ನೇ ತರಗತಿ ಓದುತ್ತಿದ್ದಾಳೆ. ಅನಿವಾರ್ಯವಾಗಿ ಹೊಲಿಗೆ ಕೆಲಸ ಮಾಡುತ್ತಿದ್ದೇನೆ. ಮುಂದೆ ಬಹಳ ಓದಬೇಕೆಂಬ ಆಸೆಯಿದೆ. ಹಣಕ್ಕಾಗಿ ನೆಂಟರ ಮುಂದೆ ಕೈಯೊಡ್ಡಲು ಇಷ್ಟವಿಲ್ಲ. ಬಡವರಿಗಾಗಿಯೇ ಇರುವ ವಿದ್ಯಾರ್ಥಿ ವೇತನ, ಶೈಕ್ಷಣಿಕ ಸಾಲದ ಬಗ್ಗೆ ಮಾಹಿತಿ ನೀಡಿ.

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಸಾಮರ್ಥ್ಯ, ಸ್ವಾಭಾವಿಕ ಪ್ರತಿಭೆ ಮತ್ತು ಆಸಕ್ತಿಯನ್ನು ಪ್ರತಿಬಿಂಬಿಸುವ ವೃತ್ತಿಯ ಬಗ್ಗೆ ಚಿಂತಿಸಿ. ಅದರಂತೆ ಕೋರ್ಸ್ ಆಯ್ಕೆ ಮಾಡಿ, ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮುಂದುವರಿಸಿ. ಆರ್ಥಿಕ ಸಮಸ್ಯೆಯಿರುವ ವಿದ್ಯಾರ್ಥಿಗಳಿಗೆ ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಅನೇಕ ಸ್ಕಾಲರ್‌ಶಿಪ್, ಉಚಿತ ಪುಸ್ತಕಗಳು, ವಿದ್ಯಾರ್ಥಿ ವೇತನಗಳನ್ನು ನೀಡಲಾಗುತ್ತಿದೆ. ಈ ಬಗ್ಗೆ ಮಾಹಿತಿ ಕಲೆಹಾಕಿ ಆ ಅನುಕೂಲಗಳನ್ನು ಪಡೆದುಕೊಳ್ಳಿ. ಅಧ್ಯಯನದೊಂದಿಗೆ ಹೊಲಿಗೆ ಕೆಲಸ ಅಥವಾ ಇನ್ನಿತರ ಅರೆಕಾಲಿಕ ಕೆಲಸಗಳನ್ನು ಕೂಡಾ ಮಾಡಬಹುದು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ವಿದ್ಯಾರ್ಥಿ ವೇತನ ಸೌಲಭ್ಯಗಳಿವೆ. ಹೆಚ್ಚಿನ ವಿವರಗಳಿಗಾಗಿ ಈ ಜಾಲತಾಣ ಗಳನ್ನು ಗಮನಿಸಿ. www. scholarships.gov.in, www.buddy4study.com/article/karnataka-scholarships

ಕೆಲ ಬ್ಯಾಂಕ್‌ಗಳಲ್ಲಿ ಕಡಿಮೆ ಬಡ್ಡಿ ದರದಲ್ಲಿ ಶೈಕ್ಷಣಿಕ ಸಾಲ ಸಿಗುತ್ತದೆ. ಕೇಂದ್ರ ಹಣಕಾಸು ಸಚಿವಾಲಯ, ಉನ್ನತ ಶಿಕ್ಷಣ ಇಲಾಖೆ ಮತ್ತು ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಷನ್ ಮಾರ್ಗದರ್ಶನದಲ್ಲಿ ಈ ಸಾಲಗಳನ್ನು ಪಡೆಯಲು ವಿದ್ಯಾಲಕ್ಷ್ಮಿ ಜಾಲತಾಣ ಅಭಿವೃದ್ಧಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ: www.vidyalakshmi.co.in/Students/ ನೋಡಿ.

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ www.prajavani.net/education-Careers ಗೆ ಭೇಟಿ ನೀಡಿ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ: ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತ ವೃತ್ತಿಯ ಆಯ್ಕೆ ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ, ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಹಾಗೂ ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ.ಪ್ರಶ್ನೆಗಳನ್ನು **shikshana@prajavani.co.in**ಗೆ ಕಳಿಸಬಹುದು.




❦ ಸುಭಾಷಿತ ❦

ಅದೃಷ್ಟವಂತ ಎಂದರೆ ಅವಕಾಶವನ್ನು ಪಡೆಯುವವನು,
ಬುದ್ಧಿವಂತ ಎಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವವನು.
–ಸ್ವಾಮಿ ವಿವೇಕಾನಂದ

ರೆಪೊ ದರ ಏರಿಕೆ ನಿರೀಕ್ಷಿತ ಸರ್ಕಾರದ ಸಹಾಯಹಸ್ತ ಬೇಕು

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರವನ್ನು ಮತ್ತಷ್ಟು ಹೆಚ್ಚು ಮಾಡಲಿದೆ ಎಂಬುದು ನಿರೀಕ್ಷಿತವೇ ಆಗಿತ್ತು. ರೆಪೊ ದರದ ಏರಿಕೆಯು ಶೇಕಡ 0.25ರಷ್ಟು ಇರಲಿದೆ ಎಂಬ ಅಂದಾಜನ್ನು ಕೂಡ ಹಣಕಾಸು ತಜ್ಞರು ಮಾಡಿದ್ದರು. ಅದಕ್ಕೆ ಅನುಗುಣವಾಗಿ ಇದೆ ಸಮಿತಿ ಮಾಡಿರುವ ರೆಪೊ ದರ ಏರಿಕೆ ಪ್ರಮಾಣ. ಫೆಬ್ರುವರಿ 8ರಂದು ಆಗಿರುವ ದರ ಏರಿಕೆಯ ನಂತರದಲ್ಲಿ ರೆಪೊ ಈಗ ಶೇ 6.50ಕ್ಕೆ ತಲುಪಿದೆ. ಇದು, ಕೇಂದ್ರೀಯ ಬ್ಯಾಂಕ್ ಇತರ ಬ್ಯಾಂಕ್‌ಗಳಿಗೆ ನೀಡುವ ಸಾಲಕ್ಕೆ ವಿಧಿಸುವ ಬಡ್ಡಿ ದರ. ಈ ಹೆಚ್ಚಳದ ಪರಿಣಾಮವಾಗಿ ಎಲ್ಲ ಬಗೆಯ ಸಾಲಗಳ ಮೇಲಿನ ಬಡ್ಡಿ ದರವು ಸಹಜವಾಗಿಯೇ ಹೆಚ್ಚಲಿದೆ. ಡಿಸೆಂಬರ್‌ನಲ್ಲಿ ನಡೆದ ಸಭೆಯಲ್ಲಿ ಹಣಕಾಸು ನೀತಿ ಸಮಿತಿಯು ರೆಪೊ ದರವನ್ನು ಶೇ 0.35ರಷ್ಟು ಹೆಚ್ಚು ಮಾಡಿತ್ತು. ಹಿಂದಿನ ವರ್ಷದ ಮೇ ತಿಂಗಳ ನಂತರದಲ್ಲಿ ರೆಪೊ ದರದಲ್ಲಿ ಆಗಿರುವ ಏರಿಕೆಯು ಶೇ 2.50ರಷ್ಟು ಇದೆ. ಹಣದುಬ್ಬರವನ್ನು ನಿಯಂತ್ರಣಕ್ಕೆ ತರುವ ಉದ್ದೇಶದಿಂದ ನಡೆಸಿರುವ ದೀರ್ಘ ಸಮರವು ಇನ್ನೂ ಕೊನೆಗೊಂಡಿಲ್ಲ ಎಂಬುದನ್ನು ಆರ್‌ಬಿಐ ಸೂಚ್ಯವಾಗಿ ಹೇಳಿದೆ. ಅಲ್ಲದೆ, ಮುಂದಿನ ದಿನಗಳಲ್ಲಿ ರೆಪೊ ದರವನ್ನು ಇನ್ನಷ್ಟು ಹೆಚ್ಚು ಮಾಡಲು ಅವಕಾಶವನ್ನು ಮುಕ್ತವಾಗಿ ಇರಿಸಿಕೊಂಡಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಈಚೆಗೆ ಶೇ 6ಕ್ಕಿಂತ ಕಡಿಮೆ ಆಗಿದೆಯಾದರೂ, ಇಂಧನ ಹಾಗೂ ಆಹಾರ ವಸ್ತುಗಳನ್ನು ಹೊರತುಪಡಿಸಿ ಇತರ ಉತ್ಪನ್ನಗಳು ಹಾಗೂ ಸೇವೆಗಳ ಹಣದುಬ್ಬರ ಪ್ರಮಾಣವು ಈಗಲೂ ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿಯೇ ಉಳಿದಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 4ಕ್ಕೆ ಮಿತಿಗೊಳಿಸಬೇಕಾದ ಹೊಣೆ ಆರ್‌ಬಿಐ ಮೇಲಿದೆ. ಆದರೆ ಆರ್‌ಬಿಐ ತನ್ನ ಹೊಣೆ ನಿಭಾಯಿಸುವಲ್ಲಿ ವಿಫಲವಾಗಿರುವುದು ಈಗ ಬಹಳಷ್ಟು ಚರ್ಚೆಯಾಗಿರುವ ಸಂಗತಿ. ಅದೇನೇ ಇದ್ದರೂ, ಹಣದುಬ್ಬರದ ಸಮಸ್ಯೆಯು ಕೊನೆಗೊಂಡಿಲ್ಲ ಎಂಬುದನ್ನು ಆರ್‌ಬಿಐ ಗುರುತಿಸಿರುವುದು ಈಗ ಸ್ಪಷ್ಟ. ಹೀಗಾಗಿಯೇ ಅದು ರೆಪೊ ದರವನ್ನು ಇನ್ನಷ್ಟು ಹೆಚ್ಚು ಮಾಡುವ ಅವಕಾಶವನ್ನು ಮುಕ್ತವಾಗಿ ಇರಿಸಿಕೊಂಡಿದೆ.



ಹಣದುಬ್ಬರವು ಹೆಚ್ಚಿನ ಅವಧಿಗೆ ಮೇಲ್ಮಟ್ಟದಲ್ಲಿಯೇ ಉಳಿಯುವುದು ಸರ್ವಥಾ ಸರಿಯಲ್ಲ

ಹಣದುಬ್ಬರ ನಿಯಂತ್ರಣಕ್ಕೆ ಬರಬೇಕು ಎಂದಾದರೆ ರೆಪೊ ದರವನ್ನು ಆರ್‌ಬಿಐ ಹೆಚ್ಚಿಸಲೇಬೇಕು. ಹಣದುಬ್ಬರವು ಹೆಚ್ಚಿನ ಅವಧಿಗೆ ಮೇಲ್ಮಟ್ಟದಲ್ಲಿಯೇ ಉಳಿಯುವುದು ಸರ್ವಥಾ ಸರಿಯಲ್ಲ. ಸಾಲವು ಬಹಳ ಅಗ್ಗವಾಗಿ ಸಿಗಬೇಕು ಎಂದು ಬಯಸಲಾಗದು. ಆದರೆ ಆರ್‌ಬಿಐನ ಈ ತೀರ್ಮಾನದ ಪರಿಣಾಮವಾಗಿ ಸಾಲವು ತುಟ್ಟಿಯಾಗುತ್ತಿದೆ. ಅದರಿಂದಾಗಿ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ದಿಮೆಗಳಿಗೆ ಬಂಡವಾಳ ಸಂಗ್ರಹವು ದುಬಾರಿ ಆಗುತ್ತಿದೆ ಎಂಬುದು ಉಲ್ಲೇಖಾರ್ಹ ಅಂಶ. ಈ ವಿಚಾರವಾಗಿ ಎಂಎಸ್‌ಎಂಇ ವಲಯದ ಪ್ರತಿನಿಧಿಗಳು ಈಗಾಗಲೇ ದನಿ ಎತ್ತಿದ್ದಾರೆ. ಈ ವಲಯದ ಉದ್ದಿಮೆಗಳಿಗೆ ಬ್ಯಾಂಕ್ ಹೊರತುಪಡಿಸಿ ಬೇರೆಡೆಯಿಂದ ಬಂಡವಾಳ ತರುವುದು ಸುಲಭವಲ್ಲ. ರೆಪೊ ದರ ಏರಿಕೆಯ ಸಂದರ್ಭದಲ್ಲಿ ಮುಂದಿನ ದಿನಗಳಲ್ಲಿ ಆರ್‌ಬಿಐ ಈ ಆಯಾಮವನ್ನೂ ಗಮನದಲ್ಲಿ ಇರಿಸಿಕೊಳ್ಳಬೇಕು. ಅದರ ಜೊತೆಯಲ್ಲಿಯೇ ಹಣದುಬ್ಬರ ನಿಯಂತ್ರಣದ ಹೊಣೆಯನ್ನು ಆರ್‌ಬಿಐ ಮೇಲೆ ಸಂಪೂರ್ಣವಾಗಿ ವರ್ಗಾವಣೆ ಮಾಡುವ ಬದಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಕೈಲಾದ ಸಹಾಯ ಮಾಡಬೇಕು. ಹಣದುಬ್ಬರವು ಅತಿಯಾಗಿರುವ ನಿರ್ದಿಷ್ಟ ಉತ್ಪನ್ನಗಳು ಹಾಗೂ ಸೇವೆಗಳ ವಿಚಾರದಲ್ಲಿ ಮಧ್ಯಪ್ರವೇಶ ಮಾಡಿ, ಅಲ್ಲಿ ಹಣದುಬ್ಬರ ನಿಯಂತ್ರಿಸಲು ಸಾಧ್ಯವೇ ಎಂಬುದನ್ನು ಸರ್ಕಾರಗಳು ಪರಿಶೀಲಿಸಬೇಕು.

ಈಗಿನ ರೆಪೊ ದರವು ಹಣದುಬ್ಬರದ ಮಟ್ಟಕ್ಕೆ ಹೊಂದಾಣಿಕೆ ಮಾಡಿ ಲೆಕ್ಕ ಹಾಕಿದರೆ ಕೋವಿಡ್ ಪೂರ್ವದ ಸಂದರ್ಭಕ್ಕಿಂತ ಈಗಲೂ ಕಡಿಮೆ ಇದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಪ್ರತಿಪಾದಿಸಿದ್ದಾರೆ. ಅದೇನೇ ಇದ್ದರೂ, ಆಹಾರ ಮತ್ತು ಇಂಧನ ಹೊರತುಪಡಿಸಿ ಇತರ ಸೇವೆಗಳು ಹಾಗೂ ಉತ್ಪನ್ನಗಳ ಹಣದುಬ್ಬರವು ಈಗಲೂ ಕಳವಳಕಾರಿ ಮಟ್ಟದಲ್ಲಿಯೇ ಇದೆ. ಮುಂದಿನ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 5.3ರಷ್ಟು ಇರಬಹುದು ಎಂದು ಆರ್‌ಬಿಐ ಅಂದಾಜು ಮಾಡಿದೆ. ಇದು ಬಹಳ ಆರೋಗ್ಯಕರ ಮಟ್ಟವೇನೂ ಅಲ್ಲ. ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ವಿಚಾರದಲ್ಲಿ ಆರ್‌ಬಿಐ ಬಹಳ ಆಶಾವಾದಿಯಾಗಿ ಇದೆ. ಜಿಡಿಪಿ ಬೆಳವಣಿಗೆ ದರವು 2023-24ರಲ್ಲಿ ಶೇ 6.4ರಷ್ಟು ಆಗಬಹುದು ಎಂದು ಆರ್‌ಬಿಐ ಅಂದಾಜಿಸಿದೆ. ರೆಪೊ ದರದಲ್ಲಿ ಈಗ ಮಾಡಿರುವ ಏರಿಕೆಗಳು ಅರ್ಥ ವ್ಯವಸ್ಥೆಯಲ್ಲಿ ಪರಿಣಾಮಗಳನ್ನು ಬೀರುತ್ತಿವೆ ಎಂದು ಗವರ್ನರ್ ದಾಸ್ ಹೇಳಿದ್ದಾರೆ. ಖಾಸಗಿ ವಲಯವು ಬಂಡವಾಳ ವೆಚ್ಚದಲ್ಲಿ ಹೊಸದಾಗಿ ತೊಡಗಿಸಿಕೊಳ್ಳಲು ಹಿಂದೇಟು ಹಾಕುತ್ತಿರುವಂತಿದೆ. ಖಾಸಗಿ ವಲಯಕ್ಕೆ ನೀಡುವ ಸಾಲದ ಬೆಳವಣಿಗೆ ಪ್ರಮಾಣವು ಈಚಿನ ತಿಂಗಳುಗಳಲ್ಲಿ ಕಡಿಮೆ ಆಗಿದೆ. ರೆಪೊ ದರ ಏರಿಕೆಯ ಪರಿಣಾಮಗಳ ಬಗ್ಗೆ ಆಲೋಚಿಸುವಾಗ ಇದು ಕೂಡ ಗಮನದಲ್ಲಿ ಇರಬೇಕು. ಆರ್‌ಬಿಐ ಪಾಲಿಗೆ ಈಗ ಹಣದುಬ್ಬರದ ನಿಯಂತ್ರಣವೇ ಅತಿದೊಡ್ಡ ಗುರಿಯಾಗಿ ಕಣ್ಣ ಮುಂದೆ ಇರುವಂತಿದೆ. ಏಕೆಂದರೆ, ಅತಿಯಾದ ಹಣದುಬ್ಬರವು ದೀರ್ಘಾವಧಿಯಲ್ಲಿ ಅರ್ಥ ವ್ಯವಸ್ಥೆಯ ಮೇಲೆ ನಿಧಾನಗತಿಯ ಬೆಳವಣಿಗೆಗಿಂತ ಹೆಚ್ಚಿನ ದುಷ್ಪರಿಣಾಮವನ್ನು ಉಂಟು ಮಾಡಬಹುದು.

ಕರ್ನಾಟಕ ಚುನಾವಣಾ ಕಣದಲ್ಲಿ ಮತೀಯ ಧ್ರುವೀಕರಣ ಮತ್ತು ಜಾತಿ ಸಮೀಕರಣ

ಉತ್ತರ ಸಿಗದ ಐದು ನಿರ್ಣಾಯಕ ಪ್ರಶ್ನೆ



ಅನುರಣನ

ನಾರಾಯಣ ಎ.

ಪ್ರತಿಯೊಂದು ಚುನಾವಣೆಗೂ ಒಂದು ಸಾಮಾಜಿಕ ಮುಖ ಇರುತ್ತದೆ. ಅಂದರೆ, ಉಳಿದೆಲ್ಲ ವಿಚಾರಗಳ ಆಚೆಗೆ ಆಯಾ ರಾಜ್ಯದ ವಿವಿಧ ಜಾತಿ ಮತ್ತು ಮತಧರ್ಮಗಳ ಮತದಾರರು ವಿವಿಧ ಪಕ್ಷಗಳ ಕುರಿತಾಗಿ ಯಾವ ರೀತಿಯ ಒಲವು ನಿಲುವುಗಳನ್ನು ಹೊಂದಿರುತ್ತಾರೆ ಎನ್ನುವುದು ಚುನಾವಣೆಯ ಫಲಿತಾಂಶವನ್ನು ನಿರ್ಧರಿಸುವಲ್ಲಿ ದೊಡ್ಡ ಪಾತ್ರ ವಹಿಸುತ್ತದೆ. ಈ ದಿಸೆಯಲ್ಲಿ, ಇನ್ನೇನು ಬಂದೇಬಿಟ್ಟಿರುವ 2023ರ ಕರ್ನಾಟಕ ವಿಧಾನಸಭಾ ಚುನಾವಣೆಯ ದೃಷ್ಟಿಯಿಂದ ಐದು ಪ್ರಶ್ನೆಗಳು ಮುಖ್ಯವಾಗುತ್ತವೆ.

ಮೊದಲ ಪ್ರಶ್ನೆ ಹಿಂದುತ್ವಕ್ಕೆ ಸಂಬಂಧಿಸಿದ್ದು. 2018ರ ಚುನಾವಣೆಗೆ ಹೋಲಿಸಿದರೆ ಮತದಾರರು ಇನ್ನಷ್ಟು ಹೆಚ್ಚು ಹಿಂದುತ್ವ-ರಾಜಕಾರಣದ ಪ್ರಭಾವಕ್ಕೆ ಒಳಗಾಗಿದ್ದಾರೆಯೇ? ಕರಾವಳಿ ಕರ್ನಾಟಕದ ವ್ಯಾಪ್ತಿಯಲ್ಲಿ ಬಿಜೆಪಿಗೆ ಹಿಂದುತ್ವದ ಅಜೆಂಡಾವನ್ನು ಈತನಕ ಯಶಸ್ವಿಯಾಗಿ ಬಳಸಿಕೊಳ್ಳಲು ಸಾಧ್ಯವಾಗಿತ್ತು. ಈ ಬಾರಿ ಹಿಂದುತ್ವದ ಹೆಸರಿನಲ್ಲಿ ಮತಬೇಟೆ ನಡೆಸುವ ಬಿಜೆಪಿಯ ತಂತ್ರ ಕರಾವಳಿಯಾಚೆಗೂ ಮತದಾರರನ್ನು ಮರುಳುಗೊಳಿಸುತ್ತಿದೆಯೇ? ಈ ಪ್ರಶ್ನೆಗೆ ಉತ್ತರ ‘ಹೌದು’ ಎಂದಾದರೆ, ಮತದಾರರು ಭ್ರಷ್ಟಾಚಾರ, ಭಿನ್ನಮತ, ಆಡಳಿತ ವೈಫಲ್ಯ, ಬೆಲೆ ಏರಿಕೆಯಂತಹ ಎಲ್ಲ ವಿಚಾರಗಳನ್ನು ಮರೆತು ಆಡಳಿತ ಪಕ್ಷಕ್ಕೆ ಮತ್ತೊಮ್ಮೆ ಮನ್ನಣೆ ನೀಡುವ ಸಾಧ್ಯತೆ ಇದೆ.

ನಿಜ, ಕರ್ನಾಟಕದ ಮತದಾರರು ಹಿಂದಿನ ನಾಲ್ಕೂವರೆ ದಶಕಗಳಿಂದ ಆಡಳಿತ ಪಕ್ಷಗಳನ್ನು ಚುನಾವಣೆಯಲ್ಲಿ ತಿರಸ್ಕರಿಸುತ್ತಾ ಬಂದಿದ್ದಾರೆ. ಇದು ಮತದಾರರ ರಾಜಕೀಯ ಪ್ರಜ್ಞಾವಂತಿಕೆಯೂ ಹೌದು. ಆದರೆ ಯಾವುದೇ ರೀತಿಯ ಧಾರ್ಮಿಕ ಅಮಲಿನ ರಾಜಕಾರಣದ ಮುಂದೆ ರಾಜಕೀಯ ಪ್ರಜ್ಞಾವಂತಿಕೆ ಮಂಕಾಗಿಬಿಡುತ್ತದೆ. ಇದನ್ನರಿತೇ ಬಿಜೆಪಿಯು ಹಿಂದೂಗಳನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟುವ ಮತ್ತು ಬಿಜೆಪಿ ಇಲ್ಲದೇಹೋದರೆ ಹಿಂದೂ ಧರ್ಮ ನಾಶವಾಗುತ್ತದೆ ಎನ್ನುವ ಹುಸಿ ಆತಂಕ ಸೃಷ್ಟಿಸುವ ಹಿಂದುತ್ವದ ರಾಜಕಾರಣವನ್ನು ವಿಸ್ತರಿಸುವ ಎಲ್ಲ ರೀತಿಯ ಪ್ರಯತ್ನಗಳನ್ನೂ ಇತ್ತೀಚೆಗೆ ತೀವ್ರಗೊಳಿಸಿರುವುದು.

ಹಿಂದುತ್ವದ ಪ್ರಭಾವ ಕರಾವಳಿಯಾಚೆಗೂ ಪಸರಿಸಿದ ಹಾಗೆ ಮೇಲ್ನೋಟಕ್ಕೆ ಕಾಣಿಸುತ್ತಿದೆ. ಎಷ್ಟರ ಮಟ್ಟಿಗೆ ಹೀಗಾಗಿದೆ ಮತ್ತು ಇದರಿಂದಾಗಿ ಬಿಜೆಪಿಗೆ ಹೆಚ್ಚುವರಿಯಾಗಿ ಎಷ್ಟು ಮತಗಳು ಬೀಳಬಹುದು ಅಂತ ಹೇಳಲಾಗದೆ ಹೋದರೂ, ಬಿಜೆಪಿಯ ಪರಿವಾರ ಸೃಷ್ಟಿಸಿರುವ ದ್ವೇಷ ರಾಜಕಾರಣದ ಭೂತ ಈಗ ತುಳುನಾಡಿಗಷ್ಟೇ ಸೀಮಿತವಾಗಿ ಉಳಿದಿಲ್ಲ. ಈ ಹಿಂದುತ್ವ ರಾಜಕಾರಣವನ್ನು ಹಿಮ್ಮೆಟ್ಟಿಸುವ ದಿಸೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಕಡೆಯಿಂದ ಆಗುತ್ತಿರುವ ಪ್ರಯತ್ನಗಳಲ್ಲಿ ಒಂದು ಕಾರ್ಯತಂತ್ರವಾಗಲೀ ಒಂದು ನಿರಂತರತೆಯಾಗಲೀ ಕಾಣಿಸುತ್ತಿಲ್ಲ. ಹಿಂದುತ್ವ ರಾಜಕಾರಣದ ವಿರುದ್ಧ ಕಾಂಗ್ರೆಸ್ಸಿನ ಕೆಲವು ನಾಯಕರು ಆಗಾಗ ನೀಡುವ ಬಿಡಿ ಹೇಳಿಕೆಗಳಾಗಲೀ ಜೆಡಿಎಸ್‌ನವರು ಆಗೊಮ್ಮೆ ಈಗೊಮ್ಮೆ ನೀಡುವ ಎಚ್ಚರಿಕೆಯಾಗಲೀ ಬಿಜೆಪಿಯ ಕಡೆಯಿಂದ ಹಿಂದುತ್ವವನ್ನು ದೊಡ್ಡ ಮಟ್ಟದಲ್ಲಿ ಬಳಸಿಕೊಳ್ಳಲು ನಡೆಯುತ್ತಿರುವ ಪ್ರತ್ಯಕ್ಷ ಹಾಗೂ ಪರೋಕ್ಷ (ಇದೇ ಹೆಚ್ಚು) ಪ್ರಯತ್ನಗಳ ಮುಂದೆ ಪೇಲವವಾಗಿ ಕಾಣಿಸುತ್ತಿವೆ.

ಎರಡನೆಯ ಪ್ರಮುಖ ಪ್ರಶ್ನೆ, ಪ್ರಬಲ ಲಿಂಗಾಯತ ಮತ್ತು ಒಕ್ಕಲಿಗ ಮತದಾರರ ರಾಜಕೀಯ ಒಲವು ಹೋದ ಚುನಾವಣೆಯ ವೇಳೆಗಿಂತ ಈಗ ಯಾವ ರೀತಿ ಮತ್ತು ಎಷ್ಟರಮಟ್ಟಿಗೆ ಬದಲಾಗಿದೆ ಎನ್ನುವುದು. ಹೋದ ಚುನಾವಣೆಯಲ್ಲಿ ಲಿಂಗಾಯತರು ಕಾಂಗ್ರೆಸ್ಸಿಗೆ ವಿರುದ್ಧವಾಗಿದ್ದರು ಎನ್ನುವ ಅಭಿಪ್ರಾಯವಿದೆ. ತಮಗೆ ಪ್ರತ್ಯೇಕ ಧರ್ಮದ ಮನ್ನಣೆ ಬೇಕೆಂಬ ಕೆಲ ಲಿಂಗಾಯತರ ಬೇಡಿಕೆಗೆ ಅಂದಿನ ಮುಖ್ಯಮಂತ್ರಿ, ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಬೆಂಬಲ ನೀಡಿದ್ದರಿಂದ ಸಾಮಾನ್ಯ ಲಿಂಗಾಯತ ಮತದಾರರು ಅವರ ಮೇಲೆ ಕೋಪಗೊಂಡದ್ದಕ್ಕೆ ಹೀಗಾಯಿತು ಎನ್ನಲಾಗುತ್ತಿದೆ. ಇದು ಪೂರ್ತಿ ಸತ್ಯವಲ್ಲ. ಯಾಕೆಂದರೆ 2018ರ ಫಲಿತಾಂಶ ನೋಡಿದರೆ, ಲಿಂಗಾಯತರ ಪ್ರಾಬಲ್ಯ ಇರುವ ಪ್ರದೇಶಗಳಲ್ಲಿ ಕಾಂಗ್ರೆಸ್ಸಿನ ಸಾಧನೆ ಅಷ್ಟೇನೂ ಕಳಪೆಯಾಗಿರಲಿಲ್ಲ. ಹಾಗಂತ, ಬಿಜೆಪಿಗೆ ನೀಡಿದಷ್ಟು ಬೆಂಬಲವನ್ನು ಲಿಂಗಾಯತ ಸಮುದಾಯವು ಕಾಂಗ್ರೆಸ್ಸಿಗೆ ನೀಡಿಲ್ಲ ಎನ್ನುವುದನ್ನು ಮಾತ್ರ ಅಲ್ಲಗಳೆಯಲಾಗದು.

ಹಾಗಾಗಿ ಈಗ ಇರುವ ಪ್ರಶ್ನೆ ಏನೆಂದರೆ, ಈ ಬಾರಿ ಲಿಂಗಾಯತರು ಬಿಜೆಪಿಯ ಜತೆಯೇ ಮತ್ತೆ ಗಟ್ಟಿಯಾಗಿ ನಿಲ್ಲುತ್ತಾರೆಯೇ ಅಥವಾ ಹೋದ ಸಲಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ಸಿನತ್ತ ಒಲವು ತೋರುತ್ತಾರೆಯೇ ಎನ್ನುವುದು. ಪಂಚಮಸಾಲಿ ಲಿಂಗಾಯತರ ಮೀಸಲಾತಿ ಬೇಡಿಕೆಯನ್ನು ಬಿಜೆಪಿ ನೇತೃತ್ವದ ಸರ್ಕಾರ ನಿರ್ವಹಿಸಿದ ರೀತಿ, ಬಿ.ಎಸ್.ಯಡಿಯೂರಪ್ಪ ಅವರ ಸ್ಥಾನಮಾನದ ಪ್ರಶ್ನೆಯಂತಹವುಗಳಿಂದಾಗಿ ಬಿಜೆಪಿಯ ಬಗ್ಗೆ ಲಿಂಗಾಯತರಿಗೆ ಹೋದ ಬಾರಿ ಇದ್ದಷ್ಟು ಮಮತೆ ಇಲ್ಲದೇ ಇರಬಹುದು. ಈ ಅಸಮಾಧಾನ ಬಿಜೆಪಿ ವಿರುದ್ಧ ಮತಗಳಾಗಿ ಎಷ್ಟರಮಟ್ಟಿಗೆ ಪರಿವರ್ತನೆ ಆಗಬಹುದು ಎನ್ನುವ ಬಗ್ಗೆ ಸ್ಪಷ್ಟತೆ ಗೋಚರಿಸುತ್ತಿಲ್ಲ.

ಒಕ್ಕಲಿಗ ಸಮುದಾಯದ ವಿಚಾರವೂ ಅಷ್ಟೆ.



ಬರಬರುತ್ತಾ ಜೆಡಿಎಸ್ ಪಕ್ಷವು ಕೌಟುಂಬಿಕ ಪಕ್ಷವಾಗಿ ಬಿಟ್ಟಿದೆ ಎನ್ನುವ ಅಸಮಾಧಾನ ಒಕ್ಕಲಿಗರಲ್ಲಿ ಇರುವುದು ಕಾಣಿಸುತ್ತದೆ. ಅದನ್ನು ಶಮನಗೊಳಿಸಿ ಅವರ ಬೆಂಬಲ ಉಳಿಸಿಕೊಳ್ಳುವ ಪ್ರಯತ್ನವನ್ನು ಆ ಪಕ್ಷ ಮಾಡುತ್ತಿದೆ.

ಬಿಜೆಪಿಯಂತೂ ಈ ಅವಕಾಶವನ್ನು ಮತಗಳಾಗಿ ಪರಿವರ್ತಿಸಲು ‘ಒಕ್ಕಲಿಗ ಪ್ಯಾಕೇಜ್’ ಒಂದನ್ನು ಅನುಷ್ಠಾನಗೊಳಿಸುತ್ತಿದೆ. ಹೋದ ಚುನಾವಣೆಯ ವೇಳೆಗೆ ಸಿದ್ದರಾಮಯ್ಯ ಅವರ ವಿರುದ್ಧದ ಒಕ್ಕಲಿಗ ಮತದಾರರ ಸಿಟ್ಟು ಹಳೆ ಮೈಸೂರು ಪ್ರದೇಶಗಳಲ್ಲಿ ಕಾಂಗ್ರೆಸ್ಸಿಗೆ ದೊಡ್ಡ ನಷ್ಟ ತಂದಿತು. ಆ ಸಿಟ್ಟು ಈಗ ಕಡಿಮೆಯಾಗಿದೆಯೇ? ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಒಕ್ಕಲಿಗ ಸಮುದಾಯಕ್ಕೆ ಸೇರಿದವರು ಎನ್ನುವ ಅಂಶ ಕಾಂಗ್ರೆಸ್ಸಿಗೆ ಎಷ್ಟರಮಟ್ಟಿಗೆ ಇಲ್ಲಿ ನೆರವಾದೀತು? ಇವು ಕೂಡಾ ಸದ್ಯಕ್ಕೆ ಸ್ಪಷ್ಟ ಉತ್ತರಗಳಿಲ್ಲದ ನಿರ್ಣಾಯಕ ಪ್ರಶ್ನೆಗಳು.

ಮೂರನೆಯ ಪ್ರಶ್ನೆ, ಕುರುಬರ ಹೊರತಾದ ಹಿಂದುಳಿದ ಜಾತಿಗಳದ್ದು. ಮೂಲತಃ ಕಾಂಗ್ರೆಸ್ಸಿನ ವೋಟ್‌ಬ್ಯಾಂಕುಗಳಾಗಿದ್ದ ಈ ಸಮೂಹ ಇತ್ತೀಚಿನ ವರ್ಷಗಳಲ್ಲಿ ಬಿಜೆಪಿಯತ್ತ ಮುಖ ಮಾಡಿತ್ತು. ಇವರನ್ನು ತನ್ನತ್ತ ಇನ್ನಷ್ಟು ಸೆಳೆದುಕೊಳ್ಳುವ ಪ್ರಯತ್ನಕ್ಕೆ ಈ ಬಾರಿ ಒಂದು ಅಡ್ಡಿ ಕಾಣಿಸುತ್ತದೆ. ಬಿಜೆಪಿಯು ಒಬಿಸಿ ಸಮುದಾಯಗಳ ಯುವಕರನ್ನು ‘ಬಳಸಿ ಎಸೆಯುವ’ ರಾಜಕೀಯ ಮಾಡುತ್ತಿದೆ ಎನ್ನುವ ಅಸಮಾಧಾನವೊಂದು ಅಲ್ಲಲ್ಲಿ ಗೋಚರಿಸುತ್ತದೆ. ಬಹಳ ಕಾಲದ ನಂತರ ಹಿಂದುಳಿದವರ ನಡುವೆ ಹುಟ್ಟಿಕೊಂಡಿರುವ ಒಂದು ರಾಜಕೀಯ ಜಾಗೃತಿಯಂತೆ ಕಾಣಿಸುತ್ತಿರುವ ಈ ಬೆಳವಣಿಗೆಯು ಬಿಜೆಪಿಯತ್ತ ವಾಲುತ್ತಿರುವ ನೂರಾರು ಸಂಖ್ಯೆಯ ಸಣ್ಣಪುಟ್ಟ ಹಿಂದುಳಿದ ಸಮುದಾಯಗಳನ್ನು ತಡೆದು ನಿಲ್ಲಿಸೀತೆ? ನಿಲ್ಲಿಸಿದರೆ ಅಷ್ಟರಮಟ್ಟಿಗೆ ಹಿಂದುತ್ವ ರಾಜಕೀಯಕ್ಕೆ ಅದೊಂದು ಸ್ಪಷ್ಟ ಪ್ರತಿರೋಧ ಎನ್ನಬಹುದು.

ಇನ್ನೊಂದು ಪ್ರಶ್ನೆ, ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಮತದಾರರಿಗೆ ಸಂಬಂಧಿಸಿದ್ದು. ಹಿಂದುಳಿದ ವರ್ಗಗಳಂತೆಯೇ ಗಣನೀಯ ಪ್ರಮಾಣದ ಎಸ್‌ಸಿ, ಎಸ್‌ಟಿ ಮತದಾರರೂ ಇತ್ತೀಚಿನ ವರ್ಷಗಳಲ್ಲಿ ಬಿಜೆಪಿಯತ್ತ ವಾಲಿದ್ದು ಸತ್ಯ. ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿದ ಕಾರಣಕ್ಕೆ ಬಿಜೆಪಿ ಬಗೆಗಿನ ಈ ಸಮುದಾಯಗಳ ಪ್ರೀತಿ ಇನ್ನಷ್ಟು ಹೆಚ್ಚಾಗಿದೆಯೇ? ಮೀಸಲಾತಿಯ ವಿಚಾರವನ್ನು ಬಳಸಿಕೊಳ್ಳಲು ಬಿಜೆಪಿ ತುದಿಗಾಲಲ್ಲಿ ನಿಂತಿದೆ. ಆದರೆ ಮೀಸಲಾತಿಯ ಕುರಿತಾದ ಗೊಂದಲಗಳೂ ಹೆಚ್ಚುತ್ತಿವೆ.

ಕೊನೆಯದಾಗಿ, ಮುಸ್ಲಿಂ ಮತಗಳು. ಬಿಜೆಪಿಯ ಉಗ್ರಸ್ವರೂಪಿ ಹಿಂದುತ್ವ ರಾಜಕಾರಣವು ಮುಸ್ಲಿಮರಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಅಭದ್ರತೆಯನ್ನು ಉಂಟುಮಾಡಿದೆ. ಈ ಅಭದ್ರತೆಯಿಂದ ಅವರು ಎಲ್ಲೆಡೆ ಒಟ್ಟಾಗಿ ಕಾಂಗ್ರೆಸ್ಸಿಗೆ ಮತ ನೀಡಬಹುದೇ? ಕಾಂಗ್ರೆಸ್ ಹಾಗೆ ಭಾವಿಸಿರಬಹುದು. ಆದರೆ ಮುಸ್ಲಿಂ ಸಮುದಾಯದಲ್ಲಿ ಎಲ್ಲರೂ ಒಂದೇ ರೀತಿ ಯೋಚಿಸುವ ಅಥವಾ ಅವರನ್ನು ಒಂದೇ ರೀತಿಯಲ್ಲಿ ಯೋಚಿಸುವಂತೆ ಮಾಡಬಹುದಾದ ಕಾಲ ಕಳೆದುಹೋಗಿದೆ. ಸಾಲದು ಎಂಬಂತೆ ಮುಸ್ಲಿಂ ಮತಗಳ ವಿಭಜನೆಗೆ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಭರ್ಜರಿ ಪ್ರಯತ್ನ ನಡೆಸುತ್ತಿವೆ.

ಉತ್ತರ ಸ್ಪಷ್ಟವಿಲ್ಲದೆ ಹೋದರೂ ಈ ಐದು ಪ್ರಶ್ನೆಗಳು 2023ರ ಕರ್ನಾಟಕ ವಿಧಾನಸಭಾ ಚುನಾವಣೆಯ ಕಣದ ಜಾತೀಯ- ಮತೀಯ ಸ್ಥೂಲ ಚಿತ್ರಣವೊಂದನ್ನು ಒದಗಿಸುತ್ತವೆ.

ಚುರುಮುರಿ



ಬಲೂನು ಬೇಹುಗಾರಿಕೆ

• ಸುಮಂಗಲಾ

ಚೀನೀ ಬಲೂನುಗಳನ್ನು ಅಮೆರಿಕ ಹೊಡೆದುರುಳಿಸಿದ್ದನ್ನು ಬೆಕ್ಕಣ್ಣ ಬಿಟ್ಟೂಬಿಡದೆ ಓದುತ್ತಿತ್ತು.

‘ಅಮೆರಿಕದ ಆಕಾಶದಾಗೆ ಚೀನಾ ಬಲೂನು ಬಿಟ್ಟದ್ದು ಸರೀನಾ ಅಥ್ವಾ ತನ್ನ ಆಕಾಶದಾಗೆ ಹಾರುತ್ತಿದ್ದ ಬಲೂನನ್ನು ಅಮೆರಿಕ ಹೊಡೆದು ಉರುಳಿಸಿದ್ದು ಸರೀನಾ’ ಬೆಕ್ಕಣ್ಣ ಮೀಸೆ ಸವರುತ್ತ ಕೇಳಿತು.

‘ಎರಡೂ ಸರಿ ಮತ್ತು ಎರಡೂ ತಪ್ಪು’ ನಾನು ಪೊಲಿಟಿಕಲಿ ಕರೆಕ್ಟ್ ಆದ ಉತ್ತರ ಕೊಟ್ಟೆ.

‘ಬೇರೆ ದೇಶದ ಆಕಾಶದಲ್ಲಿ ಬೇಹುಗಾರಿಕೆ ಬಲೂನು ಬಿಡದೇನೋ ತಪ್ಪು. ಆದರೆ ನಮ್ಮ ದೇಶದ ಆಕಾಶದಲ್ಲಿ ನಾವೇ ಬೇಹುಗಾರಿಕೆ ಬಲೂನು ಬಿಟ್ಟರೆ ತಪ್ಪೇನಿಲ್ಲ, ಹೌದಿಲ್ಲೋ?’ ಬೆಕ್ಕಣ್ಣ ಜಾಣತನದ ಪ್ರಶ್ನೆ ಎಸೆಯಿತು.

‘ನಮ್ಮ ಮ್ಯಾಗೆ ನಾವೇ ಎದಕ್ಕ ಬೇಹುಗಾರಿಕೆ ಮಾಡೂಣು?’

‘ಚುನಾವಣೆ ಟೈಮಿನಾಗೆ ಬೇಹುಗಾರಿಕೆ ಬೇಕಾಗತೈತಿ. ದಿಲ್ಲಿಯಿಂದ ಬಂದವ್ರು ಗುಪ್ತ ಸಭೆ ಮಾಡ್ತಾರಲ್ಲ, ಆವಾಗ ಸಭೆ ನಡೀತಿರೋ ಜಾಗದ ಮ್ಯಾಗೆ ಎದುರಾಳಿ ಪಕ್ಷದವರು ಒಂದು ಬಲೂನು ಹಾರಿಸಿ, ಒಳಗಿದ್ದವರು ಏನೇನು ಮಾತುಕತೆ ನಡೆಸಿದ್ರು ಅಂತ ಕೇಳಬೌದು’ ಬೆಕ್ಕಣ್ಣ ಬಲೂನು ಬೇಹುಗಾರಿಕೆಯ ಪ್ಲಾನ್ ಹೇಳಿತು.

‘ಅಷ್ಟೇ ಯಾಕೆ... ಒಂದೇ ಪಕ್ಷದಾಗೆ ಭಿನ್ನಮತೀಯರೂ ಹಿಂಗೆ ಮಾಡಬೌದು. ಹಾಸನದಾಗೆ ಭವಾನಕ್ಕನ ಪಾಳೆಯದೊಳಗೆ ಏನು ನಡೀತೈತೆ ಅಂತ ಕುಮಾರಣ್ಣ ಇಲ್ಲಿ ಕುಂತೇ ಬಲೂನು ಹಾರಿಸಿ ತಿಳೀಬೌದು’.

‘ಸಿದ್ದು ಅಂಕಲ್ ಮತ್ತೇನು ಕಂತ್ರಾಟು ನಡೆಸಿಯಾರೆ ಅಂತ ನೋಡಾಕೆ ಡಿಕೆಶಿ ಅಂಕಲ್ಲು ಬಲೂನು ಹಾರಿಸಬೌದು. ಹಳೇಹುಲಿ ಯೆಡ್ಯೂರಜ್ಜಾರು ಮತ್ತೇನು ದಾಳ ಉರುಳಿಸಬೌದು ಅಂತ ನೋಡಾಕೆ ಬೊಮ್ಮಾಯಿ ಅಂಕಲ್ಲು ಬಲೂನು ಹಾರಿಸಬೌದು’.

‘ಮತದಾರ್ರ ಮನಸ್ಸಿನಾಗೆ ಏನೈತೆ ಅಂತ ತಿಳಿಯಾಕೆ ಎಲ್ಲ ಪಕ್ಷದವ್ರೂ ಬಲೂನು ಹಾರಿಸಬೌದು. ಹಂಗಾರೆ ಚುನಾವಣೆ ಹೊತ್ತಿಗೆ ಆಕಾಶದ ತುಂಬ ಸಾವಿರಾರು ಬಲೂನು’ ಎಂದು ನಕ್ಕೆ.

‘ಆದರೆ ಅಭ್ಯರ್ಥಿಗಳು ಹಾರಿಸಿದ ಹಂತಾ ಬಲೂನುಗಳಿಗೆ ಎಲ್ಲಿ ಸೂಜಿ ಚುಚ್ಚಿ, ಹೆಂಗ ಠುಸ್ಸೆನ್ನಿಸಬೇಕು ಅಂತ ಮತದಾರ್ರಿಗೆ ಗೊತ್ತಿರತೈತೆ ಬಿಡು’ ಎನ್ನುತ್ತ ಬೆಕ್ಕಣ್ಣನೂ ಮುಸಿಮುಸಿ ನಕ್ಕಿತು.

ದಿನದ ಟ್ವೀಟ್

ಅಂತರ ಬೇಡವೇ?



ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಬ್ದುಲ್ ನಜೀರ್ ಅವರನ್ನು ನಿವೃತ್ತರಾದ ಒಂದು ತಿಂಗಳಲ್ಲೇ ಆಂಧ್ರಪ್ರದೇಶದ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ಒಬ್ಬ ನ್ಯಾಯಮೂರ್ತಿಯು ನಿವೃತ್ತರಾದ ಬಳಿಕ ಸಾಂವಿಧಾನಿಕ ಹುದ್ದೆಯೊಂದಕ್ಕೆ ನೇಮಕಗೊಳ್ಳಲು ಕನಿಷ್ಠ ಒಂದು ವರ್ಷವಾದರೂ ಅಂತರ ಇರಬೇಡವೇ? ಗಮನಾರ್ಹ: ಅಯೋಧ್ಯೆಗೆ ಸಂಬಂಧಿಸಿದಂತೆ ಒಮ್ಮತದ ತೀರ್ಪು ಪ್ರಕಟಿಸಿದ ನ್ಯಾಯಪೀಠದಲ್ಲಿ ಇವರೂ ಒಬ್ಬರಾಗಿದ್ದರು.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ



ರಾಜಕೀಯ ನಾಯಕರು ತಮ್ಮ ನಂಬಿಕೆಗೆ ತಕ್ಕಂತೆ ಯಾವುದೇ ಪೂಜಾ ಸ್ಥಳಕ್ಕೆ ಖಂಡಿತವಾಗಿಯೂ ಭೇಟಿ ನೀಡಬಹುದು, ಅದು ಖಾಸಗಿ ಭೇಟಿಯಾಗಿರಬೇಕು. ಆದರೆ ನಾಯಕರು ಅಂತಹ ಸ್ಥಳಗಳಿಗೆ ಮಾಧ್ಯಮದವರ ಜೊತೆ ಹೋಗುತ್ತಾರೆ ಮತ್ತು ಅದು ನೇರ ಪ್ರಸಾರವಾಗುತ್ತದೆ! ರಾಜಕೀಯ ಉದ್ದೇಶಗಳಿಗಾಗಿ ಧಾರ್ಮಿಕ ಸಂಕೇತಗಳ ಬಳಕೆಯನ್ನು ನಿಲ್ಲಿಸಿ.

ಚಂದ್ರ ಕುಮಾರ್ ಬೋಸ್, ಸಾಮಾಜಿಕ ಕಾರ್ಯಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 13-2-1998

• **ತ್ರಿಪುರಾ: ಚುನಾವಣಾ ಹಿಂಸೆಗೆ 20 ಬಲಿ**

ಅಗರ್ತಲ, ಫೆ. 12 (ಪಿಟಿಐ, ಯುಎನ್‌ಐ)– ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗೆ ಇನ್ನು ಕೇವಲ ಮೂರು ದಿನ ಬಾಕಿ ಇರುವಂತೆ ತ್ರಿಪುರಾದಲ್ಲಿ ಚುನಾವಣಾ ಪೂರ್ವ ಹಿಂಸಾಚಾರ ಭುಗಿಲೆದ್ದಿದ್ದು, ನಿನ್ನೆ ರಾತ್ರಿಯಿಂದೀಚೆಗೆ ನಡೆದ ಹಿಂಸಾಚಾರದಲ್ಲಿ ರಕ್ಷಣಾ ಪಡೆಯ ಆರು ಮಂದಿಯೂ ಸೇರಿದಂತೆ 20 ಜನರು ಹತ್ಯೆಗೀಡಾಗಿದ್ದಾರೆ.

ಬುಡಕಟ್ಟು ಗೆರಿಲ್ಲಾಗಳು ನಡೆಸಿದ ಹಿಂಸಾಕೃತ್ಯಗಳಲ್ಲಿ ಅನೇಕರು ಗಾಯಗೊಂಡಿದ್ದು, ಹಲವಾರು ಮನೆಗಳು ಬೆಂಕಿಗೆ ಆಹುತಿಯಾಗಿವೆ.

• **ವಿಮಾನ ದುರಂತ**

ಕೈರೊ, ಫೆ. 12 (ಪಿಟಿಐ)– ದಕ್ಷಿಣ ಸೂಡಾನಿನಲ್ಲಿ ಇಂದು ಸಂಭವಿಸಿದ ವಿಮಾನ ದುರಂತದಲ್ಲಿ ಸೂಡಾನ್ ಉಪಾಧ್ಯಕ್ಷ ಮೇಜರ್ ಜನರಲ್ ಅಲ್ ಝುಬೇರ್ ಮಹಮದ್ ಸಾಲೇ ಮತ್ತು ಇತರ ಕೆಲವು ಉನ್ನತಾಧಿಕಾರಿಗಳು ಮೃತಪಟ್ಟರೆಂದು ಖಾರ್ಟೂಂ ಸರ್ಕಾರ ಪ್ರಕಟಿಸಿದೆ.

50 ವರ್ಷಗಳ ಹಿಂದೆ

ಮಂಗಳವಾರ, 13-2-1973

• **ಆಂಧ್ರ ಚಳವಳಿಗಾರರ ಮೇಲೆ ಗುಂಡು: ಐದು ಸಾವು; ಹಲವರಿಗೆ ಗಾಯ**

ಹೈದರಾಬಾದ್, ಫೆ. 12– ಶ್ರೀಕಾಕುಳಂ ಜಿಲ್ಲೆಯ ಚೀಪುರಪಲ್ಲಿ ಸಮೀಪದ ಪೊಂದೂರಿನಲ್ಲಿ ಪ್ರತ್ಯೇಕ ಆಂಧ್ರ ಚಳವಳಿಗಾರರ ಉದ್ರಿಕ್ತ ಗುಂಪಿನ ಮೇಲೆ ನಿನ್ನೆ ಸಂಜೆ ಪೊಲೀಸರು ಗುಂಡು ಹಾರಿಸಿದಾಗ ಐದು ಮಂದಿ ಸತ್ತರು ಎಂದು ಇಂದು ಇಲ್ಲಿ ವರದಿಯಾಗಿದೆ.

ಹತ್ತು ಸಾವಿರ ಮಂದಿಯ ಭಾರಿ ಗುಂಪು ಪೊಲೀಸ್ ಠಾಣೆ ಮತ್ತು ಸಬ್‌ಇನ್‌ಸ್ಪೆಕ್ಟರ್ ಮೇಲೆ ದಾಳಿ ನಡೆಸಿತೆಂದು ವರದಿ ತಿಳಿಸಿದೆ.

• **ಡಾಲರ್ ಬಿಕ್ಕಟ್ಟು: ವಿಶ್ವ ವಿನಿಮಯ ಮಾರುಕಟ್ಟೆ ಸ್ತಬ್ಧ**

ಪ್ಯಾರಿಸ್, ಫೆ. 12– ಕಮ್ಯುನಿಸ್ಟೇತರ ಪ್ರಮುಖ ರಾಷ್ಟ್ರಗಳಾದ್ಯಂತ ವಿದೇಶಿ ವಿನಿಮಯ ವಹಿವಾಟನ್ನು ತತ್ಕಾಲಕ್ಕೆ ನಿಲ್ಲಿಸಲಾಗಿದೆ. ಅಮೆರಿಕದ ಡಾಲರ್ ಬಿಕ್ಕಟ್ಟಿಗೆ ಒಳಗಾಗಿ ಯಾವ ಪರಿಹಾರವೂ ಕಾಣದೆ ಇರುವುದೇ ಇದಕ್ಕೆ ಕಾರಣ.

ಸಂಗತ

ವಿಜ್ಞಾನ ಕಲಿಕೆ: ಇರಲಿ ಲಿಂಗ ಸಮಾನತೆ

ಪ್ರಗತಿಯ ಎಲ್ಲ ಆಯಾಮಗಳಿಗೂ ಅಡಿಪಾಯವಾದ ವಿಜ್ಞಾನ ವ್ಯಾಸಂಗಕ್ಕೆ ಹೆಣ್ಣುಮಕ್ಕಳನ್ನು ಪ್ರೋತ್ಸಾಹಿಸುವುದು ಅತ್ಯಗತ್ಯ

• ಬಿ.ಎಸ್.ಭಗವಾನ್

ಜನಪ್ರಿಯ ವಿಜ್ಞಾನ ಸಾಹಿತಿಯೊಬ್ಬರು, ಇತಿಹಾಸದಲ್ಲಿ ಸಂದ ಅತ್ಯಂತ ಬುದ್ಧಿಶಾಲಿ ವಿಜ್ಞಾನಿಗಳ ಹೆಸರು ಪ್ರಸ್ತಾಪದೊಂದಿಗೆ ಭಾಷಣ ಆರಂಭಿಸಿದ್ದರು. ಸಭಿಕರೊಬ್ಬರು ‘ಇದೇನು ಸರ್, ಈ ಪಟ್ಟಿಯಲ್ಲಿ ಒಬ್ಬ ಮಹಿಳೆಯೂ ಇಲ್ಲವಲ್ಲ?’ ಅಂದಾಗ ಸಾಹಿತಿ ತಳಮಳಿಸಿದರು. ಕಡೆಗೆ ‘ಆ ಮೇಧಾವಿಗಳಿಗೆ ಜನ್ಮ ಕೊಟ್ಟಿದ್ದು ಮಾತೆಯರು ತಾನೆ, ಬಿಡಿ’ ಅಂತ ಹೇಳಿ ಅವರು ಪಾರಾದ ಮಾತು ಬೇರೆ.

ವಿಜ್ಞಾನವೇಕೆ ಪುರುಷಪ್ರಧಾನವೆಂಬ ಪ್ರಶ್ನೆ ಕಾಡುತ್ತಲೇ ಇದೆ. ಪ್ರೌಢಶಾಲೆ ಮುಗಿಸಿ ಪಿ.ಯು. ಸೇರುವಾಗ ಹೆಣ್ಣುಮಕ್ಕಳಿಗೆ ‘ನೀನು ಸೈನ್ಸ್ ಓದಿ ಆಗಬೇಕಾದ್ದೇನು?’ ಎಂದು ಮೂಗು ಮುರಿದು ವಿಜ್ಞಾನೇತರ ಐಚ್ಛಿಕ ವಿಷಯಗಳನ್ನೇ ಕೊಡಿಸುವ ಪೋಷಕರು ಈಗಲೂ ಉಂಟು. ಗಣಿತ ತಲೆನೋವು, ಭೌತವಿಜ್ಞಾನ ಕಷ್ಟ, ರಸಾಯನ ವಿಜ್ಞಾನಕ್ಕೆ ನೆನಪಿನ ಶಕ್ತಿ ಬೇಕು... ಹೀಗೆಂದು ನಿರುತ್ತೇಜಿಸುವವರು ಪೋಷಕರು, ಬೋಧಕರೇ. ಬಹುಶಃ ವೈದ್ಯರಾಗುವ ಉದ್ದೇಶದಿಂದ ಪ್ರಾಣಿವಿಜ್ಞಾನವನ್ನೊ ಅಥವಾ ಮನೋವಿಜ್ಞಾನವನ್ನೊ ಆಯ್ಕೆ ಮಾಡಿಕೊಳ್ಳಲು ಆಸ್ಪದ ನೀಡಿದರೆ ಅದೇ ಅತಿಶಯ. ಇದಕ್ಕೆ ಅಪವಾದವಿದೆ ಎನ್ನೋಣ.

ವಿಜ್ಞಾನ ಸರ್ವವ್ಯಾಪಿ. ಅದು ಪ್ರಗತಿಯ ಎಲ್ಲ ಆಯಾಮಗಳಿಗೂ ಅಡಿಪಾಯ. ಹೆಣ್ಣುಮಕ್ಕಳನ್ನು ವಿಜ್ಞಾನ ವ್ಯಾಸಂಗಕ್ಕೆ ಪ್ರೋತ್ಸಾಹಿಸುವುದು ಅತ್ಯಗತ್ಯ. ತನ್ಮೂಲಕ ಪ್ರಾಪ್ತವಾಗುವ ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವ ಸಹಜವಾಗಿಯೇ ಮೌಢ್ಯವನ್ನು ಶಮನಗೊಳಿಸುವುದು. ಒಬ್ಬ ಹೆಣ್ಣುಮಗಳು ವಿದ್ಯಾವಂತಳಾದರೆ ಇಡೀ ಕುಟುಂಬಕ್ಕೆ ದಕ್ಷ ಶಿಕ್ಷಕಿ ದೊರೆತ ಹಾಗೆ. ಈ ನುಡಿ ವಿಜ್ಞಾನಕ್ಕಂತೂ ಹೇಳಿಮಾಡಿಸಿದಂತಿದೆ. ಅತ್ತೆ, ಮಾತೆ, ಅಜ್ಜಿಯರು ಬಾಣಂತನ ನಿರ್ವಹಣೆಯಲ್ಲಿ ಅನುಸರಿಸುವ ಸಾಂಪ್ರದಾಯಿಕ ವಿಧಾನಗಳಲ್ಲಿ ವಿಜ್ಞಾನ ತುಂಬಿತುಳುಕುತ್ತದೆ. ಅವರ ಪ್ರಾಯೋಗಿಕ ಜ್ಞಾನ ಅಷ್ಟು ದೊಡ್ಡದು.

ಗ್ರೀಕ್‌ನ ಅಲೆಗ್ಸಾಂಡ್ರಿಯಾದಲ್ಲಿ ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ ಜೀವಿಸಿದ್ದ ಹೈಪಟಿಯಾ ಎಂಬ ಮಹಿಳೆ ಗಣಿತ ಮತ್ತು ಖಗೋಳ ವಿಜ್ಞಾನದಲ್ಲಿ ಅಪಾರ ಪರಿಣತಿ ಹೊಂದಿದ್ದಳು. ಆಕೆ ಸಾಧಿಸುವುದು ಬಹಳವಿತ್ತು. ಜಗತ್ತಿನ ಮೊದಲ ವಿಜ್ಞಾನಿ ಎನ್ನಲಾಗುವ ಈಕೆ ಪ್ರಭುತ್ವದ ಮುಂದೆ ಸೈದ್ಧಾಂತಿಕ ಭಿನ್ನಾಭಿಪ್ರಾಯ ಎದುರಿಸಲಾಗದೆ ಹತ್ಯೆಗೊಳಗಾದಳು. ಮೇರಿ ಕ್ಯೂರಿ ಅವರಿಗೆ ಭೌತ ವಿಜ್ಞಾನ ಹಾಗೂ ರಸಾಯನ ವಿಜ್ಞಾನಕ್ಕೆ ಒಟ್ಟು ಎರಡು ಬಾರಿ ನೊಬೆಲ್ ಪ್ರಶಸ್ತಿ ದೊರೆಯಿತು. ಇಬ್ಬರು ಹೆಣ್ಣುಮಕ್ಕಳ ಕುಟುಂಬದ ಹೊಣೆ ಮತ್ತು ವಿಜ್ಞಾನ ಸಂಶೋಧನೆ ಎರಡನ್ನೂ ಯಶಸ್ವಿಯಾಗಿ ಸರಿದೂಗಿಸಿದ ಗಟ್ಟಿಗಿತ್ತಿ ಆಕೆ. ರಷ್ಯಾದ ಮಹಿಳೆ ವ್ಯಾಲೆಂಟಿನಾ ಟೆರಿಶ್ಕೋವಾ ದಶಕಗಳ ಹಿಂದೆ ಮೊದಲ ಬಾರಿಗೆ ವಸ್ಟಾಕ್- 6 ನೌಕೆಯಲ್ಲಿ ಅಂತರಿಕ್ಷ ಯಾನ ಕೈಗೊಂಡರು. ಆಗ ಅವರ ವಯಸ್ಸು ಬರೀ 26 ವರ್ಷ.

ಮನೆಯೆಂಬ ಶಾಲೆಯಲ್ಲಿ ಅಡುಗೆಮನೆಯೇ ಮಹಿಳೆಯರ ಪಾಲಿಗೆ ಪ್ರಯೋಗಾಲಯ. ಪಾಕವಿಧಾನ, ಗಣಿತ ಎರಡನ್ನೂ ಉಪಾಸಿಸುವ ನೆಲೆಯದು. ಹವಾಮಾನ ಮುನ್ಸೂಚನೆ, ವಾತಾವರಣ ವ್ಯತ್ಯಯ, ಆಹಾರ ಕ್ರಮ, ಆಲಸ್ಯ, ಅಲರ್ಜಿ, ಸಾಗಾಣಿಕೆ ವಿಧಾನ, ಮನೆಬಳಕೆ ವಿದ್ಯುನ್ಮಾನ ಪರಿಕರಗಳ ಕಾರ್ಯತಂತ್ರ, ಅರ್ಥಶಾಸ್ತ್ರ ಹೀಗೆ ಈ ತಾಣ ಕಲಿಸದ ವಿಜ್ಞಾನದ ಶಾಖೋಪಶಾಖೆಗಳೇ ಇಲ್ಲ.

ಸ್ವಾರಸ್ಯವೆಂದರೆ, ಹೆಣ್ಣುಮಕ್ಕಳಿರಲಿ, ಗಂಡು ಮಕ್ಕಳಿರಲಿ ಪಠ್ಯವೆಂದು ಕಲಿಸಲೆತ್ನಿಸಿದರೆ ನಿರಾಸಕ್ತರಾಗುತ್ತಾರೆ. ಅವೇ ವಿಜ್ಞಾನ ತತ್ವಗಳನ್ನು ಪ್ರಾಯೋಗಿಕವಾಗಿ ಉದಾಹರಿಸಿ ತಿಳಿಸಿದರೆ ಸಮರ್ಥವಾಗಿ ಪರಿಚಯಿಸಿಕೊಳ್ಳುತ್ತಾರೆ. ಎಂದಮೇಲೆ ವಿಜ್ಞಾನವನ್ನು ಸಮಾಜವಿಜ್ಞಾನವಾಗಿ ಕಲಿಸಬೇಕಿದೆ. ಜಗತ್ತಿನ ಜನಸಂಖ್ಯೆಯಲ್ಲಿ ಮಹಿಳೆಯರು ಮತ್ತು ಬಾಲಕಿಯರು ಅರ್ಧದಷ್ಟು ಇದ್ದಾರೆ. ವಿಜ್ಞಾನ ಪ್ರಸರಣದಲ್ಲಿ ಲಿಂಗ ಸಮಾನತೆ ಇದ್ದರೆ ಮಾತ್ರ ಮಾನವ ಹಕ್ಕಿಗೆ ಮತ್ತು ನೆಮ್ಮದಿಯ ಸಮಾಜಕ್ಕೆ ದಿಕ್ಸೂಚಿ.

ಸ್ತ್ರೀಯರು ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚು ತೊಡಗಬೇಕು. ತರಗತಿಗಳಲ್ಲಿ, ಉನ್ನತ ಅಧ್ಯಯನದಲ್ಲಿ, ಸಂಶೋಧನಾಲಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅವರ ಸಹಭಾಗಿತ್ವ ಇರಬೇಕು. ಯುನೆಸ್ಕೊ ವರದಿಯಂತೆ, ಪ್ರಸ್ತುತ ಜಾಗತಿಕವಾಗಿ ವಿಜ್ಞಾನದ ಉನ್ನತ ವ್ಯಾಸಂಗದಲ್ಲಿ ತೊಡಗುವ ಮಹಿಳೆಯರು ಶೇಕಡ 30ಕ್ಕಿಂತಲೂ ಕಡಿಮೆ. ಸಾಲದೆಂಬಂತೆ ವಿದ್ಯಾರ್ಜನೆಯ ನಡುವೆಯೇ ಬಿಟ್ಟುಹೋಗುವವರ ಸಂಖ್ಯೆ ಕಡಿಮೆಯೇನಿಲ್ಲ.



ಯುನೆಸ್ಕೊ ಇವೆಲ್ಲವನ್ನೂ ದೃಷ್ಟಿಯಲ್ಲಿ ಇರಿಸಿಕೊಂಡು ಪ್ರತಿವರ್ಷ ಫೆಬ್ರುವರಿ 11, ‘ಅಂತರರಾಷ್ಟ್ರೀಯ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ವಿಜ್ಞಾನ ದಿನ’ ಎಂದು ಘೋಷಿಸಿದೆ. ವಿಜ್ಞಾನ ವೃತ್ತಿಯೆಂದರೆ ಜ್ಞಾನವನ್ನು ಜೀವನಪರ್ಯಂತ ಅರಸುವ ಪಯಣ. ವಿಜ್ಞಾನವೆಂದರೆ ಏನಿದ್ದರೂ ಪುರುಷರ ಜಗತ್ತು ಎನ್ನುವ ಭಾವ ಹೋಗಬೇಕಿದೆ.

ಒಂದು ವಿಪರ್ಯಾಸ ಗಮನಾರ್ಹ. ಐನ್‌ಸ್ಟೀನ್‌ರ ಸಾಪೇಕ್ಷತಾ ವಾದ ಬೋಧಿಸುವ ಪ್ರೊಫೆಸರ್, ‘ಒಬ್ಬ’ ವೇಗವಾಗಿ ಓಡಿದಾಗ ಅವನ ಪಾಲಿಗೆ ಸಮಯ ಬೇಗ ಸರಿದಿರುತ್ತದೆ ಅಂತ ಹೇಳುತ್ತಾರೆ. ಬಾಲಕನ ಚಿತ್ರವನ್ನು ಬೋರ್ಡಿನ ಮೇಲೆ ಬರೆಯುತ್ತಾರೆ. ಆದರೆ ‘ಒಬ್ಬ’ ಬದಲಿಗೆ ‘ಒಬ್ಬಳು’ ಎಂದು ಉದಾಹರಿಸುವುದು, ಬಾಲಕಿಯ ಚಿತ್ರ ಬರೆಯುವುದು ತೀರಾ ವಿರಳ! ಇಲ್ಲಿಂದಲೇ ಲಿಂಗ ತಾರತಮ್ಯದ ಆರಂಭ ಎನ್ನೋಣವೆ?

ವಿಜ್ಞಾನೋಪಾಸನೆಗೆ ಹೆಣ್ಣುಮಕ್ಕಳನ್ನು ಪ್ರೋತ್ಸಾಹಿಸದ ಸಮಾಜ ಸೊರಗುತ್ತದೆ. ಹೈಪಟಿಯಾ ಅಂತಹ ಮಹಿಳೆಯರ ವಿಜ್ಞಾನ ಕೈಂಕರ್ಯ ಅವಿರತವಾಗಿ ಸಾಗಲು ವಿಶೇಷವಾಗಿ ಪೋಷಕರು ಸಂಕಲ್ಪಿಸಿ ಹುರಿದುಂಬಿಸಬೇಕಿದೆ.

ವಾಚಕರ ವಾಣಿ

ಇವರಿಗೆ ಇವರೇ ಮಾದರಿಯೋ ಅಥವಾ...?

ಡ್ರೈವರ್ ಕಂ ಕಂಡಕ್ಟರ್ ಹುದ್ದೆ ನೇಮಕಾತಿಗಾಗಿ ನಡೆದ ದೇಹದಾರ್ಢ್ಯ ಪರೀಕ್ಷೆಯಲ್ಲಿ ಪಾಸಾಗಲು ತನ್ನ ತೊಡೆಗಳಿಗೆ ಚಪಾತಿ ಹಿಟ್ಟನ್ನು ಕಟ್ಟಿಕೊಳ್ಳುವ ಮೂಲಕ ಒಬ್ಬ ವ್ಯಕ್ತಿ ದೇಹದ ತೂಕ ಹೆಚ್ಚಿಸಿಕೊಳ್ಳಲು ಮುಂದಾದರೆ, ಇನ್ನೊಬ್ಬ ಒಳ ಉಡುಪಿನಲ್ಲಿ 5 ಕೆ.ಜಿ. ತೂಕದ ಬಟ್ಟು ಇಟ್ಟುಕೊಂಡು ಬಂದು ಸಿಕ್ಕಿಹಾಕಿಕೊಂಡಿರುವುದು ನಾಚಿಕೆಗೇಡು. ಹೀಗೆ ತಾವು ಚಾಪೆಯ ಕೆಳಗೆ ತೂರಲು ನೋಡಿದರೆ ಅಧಿಕಾರಿಗಳು ರಂಗೋಲಿ ಕೆಳಗೆ ನುಗ್ಗಿ ತಮ್ಮನ್ನು ಹಿಡಿಯಬಲ್ಲರು ಎಂಬುದನ್ನು ಅಭ್ಯರ್ಥಿಗಳು ಮರೆತುಬಿಟ್ಟಿದ್ದಾರೆ. ಇನ್ನು ಯಾವ ಯಾವ ತಂತ್ರಗಳನ್ನು ಬಲ್ಲವರಿದ್ದಾರೆಯೋ ಕಾದು ನೋಡಬೇಕು. ಇವರಿಗೆ ಇವರೇ ಮಾದರಿಯೋ ಅಥವಾ ಈ ರೀತಿಯಲ್ಲಿ ಏಮಾರಿಸಿ ಯಾರಾದರೂ ಉದ್ಯೋಗ ಗಿಟ್ಟಿಸಿಕೊಂಡಿದ್ದರೆ ಅವರು ಮಾದರಿಯೋ?

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

ಅರಿಯಿರಿ ಬಳಕೆ ಕೈಪಿಡಿಯ ವಿವರ

ಬಾಗಲಕೋಟೆ ಜಿಲ್ಲೆಯ ಸಾವಳಗಿ ಗ್ರಾಮದ ಅಂಗನವಾಡಿಯಲ್ಲಿ ಇತ್ತೀಚೆಗೆ ಕುಕ್ಕರ್ ಸ್ಫೋಟವಾಗಿ ಇಬ್ಬರು ಮಕ್ಕಳು ಆಸ್ಪತ್ರೆಗೆ ದಾಖಲಾದರು. ಸಾಮಾನ್ಯವಾಗಿ ಮನೆಗಳಲ್ಲಿ ಆಗಾಗ ಕುಕ್ಕರ್ ಸ್ಫೋಟಗೊಂಡು ಗೃಹಿಣಿಯರಿಗೆ ಸಣ್ಣಪುಟ್ಟ ಗಾಯಗಳಾಗುತ್ತಿರುತ್ತವೆ. ಆದರೆ ಇದನ್ನು ಎಂದೂ ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಪ್ರತೀ ಬಾರಿ ಬಳಸಿದಾಗಲೂ ಕುಕ್ಕರ್ ಅನ್ನು ಚೆನ್ನಾಗಿ ಸ್ವಚ್ಛಗೊಳಿಸಬೇಕು. ಅಂದರೆ ಸೋಪು ಹಾಕಿ ತಿಕ್ಕುವುದಷ್ಟೇ ಅಲ್ಲ, ಗ್ಯಾಸ್ಕೆಟ್ ಅನ್ನೂ ಸ್ವಚ್ಛಗೊಳಿಸಬೇಕು. ವೆಂಟ್ ಪೈಪ್ ಹಾಗೂ ಅದರ ಕೆಳಗಿನ ರಂಧ್ರಗಳಲ್ಲಿ ಆಹಾರದ ತುಣುಕುಗಳು ಸಿಕ್ಕಿಹಾಕಿಕೊಂಡಿರುತ್ತವೆ. ಅವನ್ನು ಸಣ್ಣ ತಂತಿಯಿಂದ ತೆಗೆಯಬೇಕು. ವಿಷಲ್‌ನ ಒಳಗೆ ಕೂಡ ಇದೇ ಸಮಸ್ಯೆ ಇದ್ದು, ಅದನ್ನೂ ಸ್ವಚ್ಛಗೊಳಿಸಬೇಕು. ಪ್ರತೀ ಬಾರಿ ಈ ರೀತಿ ಮಾಡಿದರೆ ಯಾವುದೇ ತೊಂದರೆ ಆಗುವುದಿಲ್ಲ.

ಇನ್ನು ಇಂತಹ ಸಮಸ್ಯೆಯಾದರೆ ಸ್ವಯಂ ಪರಿಹಾರವಾಗಿ ಕುಕ್ಕರ್‌ನ ಮುಚ್ಚಳದಲ್ಲಿ ಸೇಫ್ಟಿ ವಾಲ್ವ್ ಅಳವಡಿಸಿರುತ್ತಾರೆ. ಇಂತಹ ಸಂದರ್ಭದಲ್ಲಿ ಅದರ ವ್ಯಾಕ್ಸ್ ಕರಗಿ, ಗಾಳಿಯೆಲ್ಲಾ ಹೊರಗೆ ಹೋಗುವಂತೆ ಮಾಡಿರುತ್ತಾರೆ. ಆಗ ಸ್ಫೋಟ ಸಂಭವಿಸುವುದಿಲ್ಲ. ಆದರೆ ಬಹಳಷ್ಟು ಪ್ರಕರಣಗಳಲ್ಲಿ ಸೇಫ್ಟಿ ವಾಲ್ವ್ ತೆರೆದುಕೊಳ್ಳದೆ ಸಮಸ್ಯೆಗಳು ಎದುರಾಗುತ್ತಿವೆ. ಆದ್ದರಿಂದ ಕುಕ್ಕರ್‌ಗಳ ಕಾರ್ಯಕ್ಷಮತೆಯ ಬಗ್ಗೆ ಸಂಬಂಧಿಸಿದ ತಜ್ಞರು ಪರಿಶೀಲಿಸಬೇಕಿದೆ. ಸರ್ಕಾರವೂ ಈ ಬಗ್ಗೆ ಗಮನಹರಿಸಬೇಕು. ಕುಕ್ಕರ್ ಬಳಸುವವರು ಬಳಕೆ ಹಾಗೂ ನಿರ್ವಹಣೆಯ ಬಗ್ಗೆ ನೀಡಿರುವ ಸೂಚನೆಗಳನ್ನು ಮೊದಲು ತಿಳಿದುಕೊಳ್ಳಬೇಕು. ಯಾವುದೇ ವಸ್ತುಗಳ ಬಳಕೆ ಕೈಪಿಡಿಗಳಲ್ಲಿನ ವಿವರಗಳನ್ನು ಆಯಾ ರಾಜ್ಯಗಳ ಆಡಳಿತ ಭಾಷೆಗಳಲ್ಲಿ ತಿಳಿಸುವುದನ್ನು ಸರ್ಕಾರ ಕಡ್ಡಾಯ ಮಾಡಬೇಕು.

ಮುಳ್ಳೂರು ಪ್ರಕಾಶ್, ಮೈಸೂರು

ಕಳ್ಳರಿಗೆ ಹಬ್ಬದ ಅಡುಗೆ ಮಾಡಿ ಹಾಕದಿರಿ!

ಬೆಳ್ಳಿ, ಬಂಗಾರ, ನಗದು ಕಳವು ಆಗುವುದರ ಬಗ್ಗೆ ಆಗಾಗ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗುವುದು ಸಾಮಾನ್ಯವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕಳವು ಪ್ರಕರಣಗಳು ನಡೆದರೆ ಅರಿವಿನ ಕೊರತೆ ಅಂತ ಹೇಳಬಹುದೇನೊ! ಆದರೆ ನಗರ– ಪಟ್ಟಣ ಪ್ರದೇಶಗಳಲ್ಲಿ ಅದರಲ್ಲೂ ಸುಶಿಕ್ಷಿತರ ಮನೆಗಳಲ್ಲಿ ಕಳವು ಆಗಿರುವ ಸುದ್ದಿ ಓದಿದಾಗ ಆಶ್ಚರ್ಯ ಆಗದಿರದು. ಇಲ್ಲಿನ ನಿವಾಸಿಗಳಿಗೆ ಬ್ಯಾಂಕುಗಳಲ್ಲಿರುವ ಲಾಕರ್ ಸೌಲಭ್ಯದ ಬಗೆಗೆ ಮಾಹಿತಿಯ ಕೊರತೆಯೇ, ಬ್ಯಾಂಕುಗಳಲ್ಲಿ ಲಾಕರ್ ಸೌಲಭ್ಯದ ಅಭಾವವೇ ಅಥವಾ ಬ್ಯಾಂಕಿಗೆ ಹೋಗಿಬರಲು ಸೋಮಾರಿತನವೇ... ತಿಳಿಯದು.

ಹಲವು ಬ್ಯಾಂಕುಗಳಲ್ಲಿ ‘ಲಾಕರ್ ಸೌಲಭ್ಯ ಇದೆ’ ಎಂಬ ಫಲಕ ಹಾಕಿರುವುದನ್ನು ಕಾಣುತ್ತೇವೆ. ಹಾಗೆಯೇ, ವಾರ್ಷಿಕ ಬಾಡಿಗೆ ಸಹ ಮಧ್ಯಮ ವರ್ಗದವರ ಜೇಬಿಗೆ ಭಾರವಾಗದು. ಆಭರಣಗಳ ಬೆಲೆಯಲ್ಲಿ ಪ್ರತಿದಿನವೂ ಏರಿಕೆ ಆಗುತ್ತಲಿದ್ದು, ರಜಾ ದಿನಗಳಲ್ಲಿ ಪ್ರವಾಸಕ್ಕೆ ಹೋಗುವಾಗ ಬ್ಯಾಂಕ್ ಲಾಕರ್ ಸೌಲಭ್ಯಗಳನ್ನು ಪಡೆಯುವುದು ಯುಕ್ತ. ನಮ್ಮ ನಿರ್ಲಕ್ಷ್ಯವು ಕಳ್ಳರಿಗೆ ಹಬ್ಬದ ಅಡುಗೆ ಮಾಡಿ ಹಾಕಿದಂತೆಯೇ ಸರಿ.

ರಘುನಾಥರಾವ್ ತಾಪ್ಸೆ, ದಾವಣಗೆರೆ

ಟ್ರ್ಯಾಕ್ಟರ್ ಸಂಚಾರ: ಸಂಪೂರ್ಣ ನಿರ್ಬಂಧವಿರಲಿ

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಟ್ರ್ಯಾಕ್ಟರ್ ಸಂಚಾರ ನಿರ್ಬಂಧಿಸಿರುವುದು ಸಮಯೋಚಿತವಾಗಿದೆ. ನಗರಗಳಲ್ಲಿ ಮೂಲತಃ ಟ್ರ್ಯಾಕ್ಟರ್ ಸಂಚಾರಕ್ಕೆ ಸಾರಿಗೆ ನೀತಿಯಲ್ಲಿ ಅವಕಾಶವಿಲ್ಲ ಎಂಬ ಮೂಲ ಕಾನೂನು ಅರಿವು ಬಹುಶಃ ಈ ನಿರ್ಧಾರದ ವಿರುದ್ಧ ಪ್ರತಿಭಟನೆ ನಡೆಸಿದ ಟ್ರ್ಯಾಕ್ಟರ್ ಮಾಲೀಕರು ಹಾಗೂ ಕಾರ್ಮಿಕರಿಗೆ ಮನವರಿಕೆ ಆಗಿಲ್ಲವೆಂದು ತೋರುತ್ತದೆ. ಟ್ರ್ಯಾಕ್ಟರ್ ಕೃಷಿ ಉದ್ದೇಶಕ್ಕೆ ಮೀಸಲಾಗಿದೆಯೇ ವಿನಾ ನಗರಗಳಲ್ಲಿ ಸಂಚರಿಸಲು ಅಲ್ಲ.

ನಗರ ವ್ಯಾಪ್ತಿಯಲ್ಲಿ ಗುತ್ತಿಗೆದಾರರಿಗೆ ಅನುಕೂಲವಾಗುವಂತೆ ನಿಯಮ ಮಾರ್ಪಡಿಸಲು ಬಿಬಿಎಂಪಿ ಅಧಿಕಾರಿಗಳು ಸಾರಿಗೆ ಅಧಿಕಾರಿಗಳಿಗೆ ಮನವಿ ಮಾಡಿಕೊಂಡ ಪರಿಣಾಮವಾಗಿ ನಗರದಲ್ಲಿ ಟ್ರ್ಯಾಕ್ಟರ್ ಸಂಚಾರಕ್ಕೆ ತಾತ್ಕಾಲಿಕವಾಗಿ ಅನುಮತಿ ನೀಡಲಾಯಿತು. ಆದರೆ ಟ್ರ್ಯಾಕ್ಟರ್‌ಗಳ ಅತಿ ವೇಗದ ಚಾಲನೆ, ಅವರು ಮಾಡುತ್ತಿರುವ ಅಪಘಾತಗಳು, ಕರ್ಕಶ ಹಾರ್ನ್ ಶಬ್ದವನ್ನು ಅಗತ್ಯವಾಗಿ ನಿಯಂತ್ರಿಸಬೇಕಾಗಿದೆ. ಈಗ ಬೆಳಿಗ್ಗೆ 8ರಿಂದ 11 ಹಾಗೂ ಸಂಜೆ 4ರಿಂದ ರಾತ್ರಿ 8 ಗಂಟೆಯವರೆಗೆ ನಿರ್ಬಂಧಿಸಿರುವುದರ ಬದಲು ನಗರ ವ್ಯಾಪ್ತಿಯಲ್ಲಿ ಸಂಪೂರ್ಣವಾಗಿ ನಿರ್ಬಂಧಿಸಿದರೆ ಸಾರ್ವಜನಿಕರು ನೆಮ್ಮದಿಯಿಂದ ಸಂಚರಿಸಲು ಅನುವಾಗುತ್ತದೆ.

ಟಿ.ಉಮಾ ಶಂಕರ್, ಬೆಂಗಳೂರು

ಸಾಂಕೇತಿಕ ಆಚರಣೆಯಷ್ಟೇ ಸಾಲದು

ಸಾಂಕೇತಿಕ ಆಚರಣೆಗಳ ಮೂಲಕ ಗೋವಿನ ಮೇಲೆ ಪ್ರೀತಿ ತೋರಿಸುವ ಪ್ರವೃತ್ತಿ ನಮ್ಮಲ್ಲಿ ಹೆಚ್ಚುತ್ತಿದೆ. ಇದರಲ್ಲಿ ರಾಜಕೀಯವೂ ಅಡಕವಾಗಿದೆ. ಅದಿರಲಿ. ಸಾಂಕೇತಿಕ ಉಪಕ್ರಮಗಳಿಗಿಂತ ಜಾನುವಾರುಗಳ ಚಿಕಿತ್ಸೆಗೆ ಪೂರಕವಾಗಿ ಪಶು ಆಸ್ಪತ್ರೆಗಳಲ್ಲಿ ಮೂಲ ಸೌಕರ್ಯಗಳನ್ನು ಹೆಚ್ಚಿಸುವುದು ಇಂದಿನ ತುರ್ತು ಅಗತ್ಯ. ನಮ್ಮ ಸರ್ಕಾರ ಅದರತ್ತ ಗಮನಹರಿಸಬೇಕಿದೆ. ಜನಪ್ರತಿನಿಧಿಗಳು ಈ ಸಂಬಂಧದ ಕುಂದುಕೊರತೆಗಳ ನಿವಾರಣೆಗೆ ಆಸ್ಥೆ ವಹಿಸಬೇಕಿದೆ.

ವೈದ್ಯರು ಹಾಗೂ ಸಿಬ್ಬಂದಿಯ ಕೊರತೆ ನಿವಾರಿಸಿ, ಅಗತ್ಯ ಔಷಧಿ, ಲಸಿಕೆಗಳನ್ನು ಪೂರೈಸುವ ಮೂಲಕ ಗೋವುಗಳ ಮೇಲಿನ ಪ್ರೀತಿಯನ್ನು ಪ್ರಕಟಗೊಳಿಸುವುದು ಗೋಮಾತೆಯನ್ನು ಪೂಜಿಸುವುದಕ್ಕಿಂತ ಮತ್ತು ಅಪ್ಪಿಕೊಳ್ಳುವುದಕ್ಕಿಂತ ಹೆಚ್ಚು ಉಪಯುಕ್ತವಲ್ಲವೇ?

ಡಾ. ಟಿ.ಜಯರಾಂ, ಕೋಲಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅಮೆರಿಕ ವೀಸಾ ನೀತಿ ಬದಲಾವಣೆ ಸನ್ನಿಹಿತ

ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತಶಾಸ್ತ್ರ (ಎಸ್‌ಟಿಇಎಂ) ಕ್ಷೇತ್ರಗಳಲ್ಲಿನ ಪರಿಣತ ಕೆಲಸಗಾರರ ಕೊರತೆಯನ್ನು ನೀಗಿಸುವುದಕ್ಕಾಗಿ ಅಮೆರಿಕವು 1990ರಲ್ಲಿ ಹೊಸ ನೀತಿಯನ್ನು ಜಾರಿಗೆ ತಂದಿತು. ಅದರಂತೆ ಎಚ್1ಬಿ ಮತ್ತು ಇತರ ರೀತಿಯ ವೀಸಾಗಳನ್ನು ನೀಡಲು ನಿರ್ಧರಿಸಲಾಯಿತು. ಅಮೆರಿಕದ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಇದರಿಂದ ಭಾರಿ ಅನುಕೂಲವಾಯಿತು. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದ ಭಾರತದಂತಹ ದೇಶಗಳ ಯುವ ತಂತ್ರಜ್ಞರಿಗೂ ಇದರಿಂದ ಪ್ರಯೋಜನವಾಯಿತು. ಆದರೆ, ಹಲವು ಲೋಪಗಳು ಮತ್ತು ಸಮಸ್ಯೆಗಳು ಈ ವ್ಯವಸ್ಥೆಯಲ್ಲಿ ಇವೆ. ಹಾಗಾಗಿ, ಈ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಅಮೆರಿಕದ ಪೌರತ್ವ ಮತ್ತು ವಲಸೆ ಸೇವಾ ವಿಭಾಗವು ನಿರ್ಧರಿಸಿದೆ. ಈ ಕುರಿತ ಮಾಹಿತಿ ಇಲ್ಲಿದೆ...

> ಆರಂಭದಲ್ಲಿ ಎಷ್ಟು ಮಂದಿಗೆ ಅಮೆರಿಕದಲ್ಲಿ ಇದ್ದುಕೊಂಡೇ ವೀಸಾ ನವೀಕರಿಸಲು ಅವಕಾಶ ದೊರೆಯಬಹುದು ಎಂದು ಹೇಳಲಾಗದು. 1-2 ವರ್ಷದಲ್ಲಿ ಇದನ್ನು ಎಲ್ಲರಿಗೂ ಅನ್ವಯಿಸಲಾಗುವುದು. ಅಲ್ಲಿಯವರೆಗೆ ಸಣ್ಣ ಸಂಖ್ಯೆಯ ಜನರಿಗಷ್ಟೇ ಈ ಅನುಕೂಲ ದೊರೆಯಲಿದೆ
>
> ವಿದೇಶಾಂಗ ಸಚಿವಾಲಯದ ವಕ್ತಾರ

ಪ್ರಜಾವಾಣಿ ವಾರ್ತೆ

ಪರಿಣತ ಕೆಲಸಗಾರರಿಗೆ ಅಮೆರಿಕದಲ್ಲಿ ಕೆಲಸ ಮಾಡುವುದಕ್ಕಾಗಿ ನೀಡಲಾಗುವ ಎಚ್1ಬಿ ವೀಸಾ ವ್ಯವಸ್ಥೆಯಲ್ಲಿ ಹಲವು ಲೋಪಗಳಿವೆ. ಅವುಗಳಲ್ಲಿ ಮುಖ್ಯವಾದುದು ವೀಸಾ ಅವಧಿ ಮುಗಿದ ಬಳಿಕ ನವೀಕರಣಕ್ಕೆ ಸಂಬಂಧಿಸಿ ಇರುವ ಸಮಸ್ಯೆ. ಮೂರು ವರ್ಷಗಳ ಅವಧಿ ಮುಗಿದ ಬಳಿಕ ವೀಸಾದಾರರು ತಮ್ಮ ದೇಶಕ್ಕೆ ಮರಳಿ ಅಲ್ಲಿರುವ ಕಾನ್ಸಲ್ ಕಚೇರಿಯ ಮೂಲಕವೇ ವೀಸಾವನ್ನು ನವೀಕರಣ ಮಾಡಬೇಕು. ಆದರೆ, ಇದು ಅತ್ಯಂತ ಸುದೀರ್ಘವಾದ ಪ್ರಕ್ರಿಯೆ. ವೀಸಾ ನವೀಕರಣಕ್ಕೆ ಕಾನ್ಸಲ್ ಕಚೇರಿ ಭೇಟಿಗೆ ಸಮಯ ಗೊತ್ತು ಮಾಡುವುದಕ್ಕೇ ಎರಡು ವರ್ಷದವರೆಗೆ ಸಮಯ ತಗಲುತ್ತದೆ. ಈ ಸಮಸ್ಯೆಯನ್ನು ಪರಿಹರಿಸಲು ಅಮೆರಿಕದಲ್ಲಿದ್ದುಕೊಂಡೇ ವೀಸಾ ನವೀಕರಣ ಮಾಡುವ ವ್ಯವಸ್ಥೆ ಜಾರಿಗೆ ತರಲು ನಿರ್ಧರಿಸಲಾಗಿದೆ. ಈ ವರ್ಷದಲ್ಲಿಯೇ ಇದು ಪ್ರಾಯೋಗಿಕವಾಗಿ ಆರಂಭ ಆಗಬಹುದು ಎನ್ನಲಾಗಿದೆ.

ವೀಸಾ ನವೀಕರಣಕ್ಕೆ ಹೆಚ್ಚು ಸಮಯ ಹಿಡಿಯಲು ಹಲವು ಕಾರಣಗಳಿವೆ. ಕೋವಿಡ್ ಸಾಂಕ್ರಾಮಿಕದ ಬಳಿಕ ಅಮೆರಿಕಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯಲ್ಲಿ ಆಗಿರುವ ಏರಿಕೆ ಒಂದು ಕಾರಣ. ಕಾನ್ಸಲ್ ಕಚೇರಿಗಳು ಪ್ರವಾಸಿ ವೀಸಾಗಳ ಮೇಲೆ ಗಮನ ಕೇಂದ್ರೀಕರಿಸಿವೆ. ಕಾನ್ಸಲ್ ಕಚೇರಿಗಳಲ್ಲಿ ಸಿಬ್ಬಂದಿಯ ಕೊರತೆಯೂ ಇದೆ. ವಿದ್ಯಾರ್ಥಿಗಳು ಮತ್ತು ವೃತ್ತಿಪರರು ಸಲ್ಲಿಸಿರುವ ಅರ್ಜಿಗಳ ರಾಶಿಯೇ ಕಾನ್ಸಲ್ ಕಚೇರಿಗಳಲ್ಲಿ ಇವೆ. ಅಮೆರಿಕದ ವೀಸಾ ನೀತಿಯು ಅತ್ಯಂತ ಕಟ್ಟುನಿಟ್ಟಾಗಿ ಇರುವುದರಿಂದ ವೀಸಾ ನೀಡಿಕೆ ಪ್ರಕ್ರಿಯೆಯು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ.

2004ರ ನಂತರ ವೀಸಾ ನೀತಿಯಲ್ಲಿ ಹಲವು ಬದಲಾವಣೆಗಳನ್ನು ಮಾಡಿಕೊಂಡಿದ್ದೇ ಈಗ ಹಲವು ಸಮಸ್ಯೆಗಳು ಸೃಷ್ಟಿಯಾಗಲು ಕಾರಣ. 1990ರಲ್ಲಿ ಎಚ್1ಬಿ ವೀಸಾ ನೀತಿ ಜಾರಿಗೆ ಬಂದಾಗ ವಾರ್ಷಿಕ, 1.95 ಲಕ್ಷ ಮಂದಿಗೆ ವೀಸಾ ನೀಡಲು ನಿರ್ಧರಿಸಲಾಗಿತ್ತು. ಕ್ರಮೇಣ ಇದು ಬದಲಾಯಿತು. ಈಗ ವಾರ್ಷಿಕ 65 ಸಾವಿರ ವೀಸಾಗಳನ್ನು ಮಾತ್ರ ನೀಡಲಾಗುತ್ತಿದೆ. ಅಮೆರಿಕದಲ್ಲಿಯೇ ಪದವಿ ಪಡೆದ ವಿದೇಶಿಯರಿಗೆ ಹೆಚ್ಚುವರಿಯಾಗಿ 20 ಸಾವಿರ ವೀಸಾಗಳನ್ನು ನೀಡಲಾಗುತ್ತಿದೆ. ಮಾಹಿತಿ ತಂತ್ರಜ್ಞಾನ ಮತ್ತು ಎಂಜಿನಿಯರಿಂಗ್‌ನಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಲೇ ಇರುವ ಸಂದರ್ಭದಲ್ಲಿ ವೀಸಾ ನೀಡಿಕೆ ಸಂಖ್ಯೆಯನ್ನು ಕಡಿಮೆ ಮಾಡಿರುವುದು ದೊಡ್ಡ ಹೊಡೆತವಾಗಿದೆ.

ಅಮೆರಿಕದ ಪೌರತ್ವ ಮತ್ತು ವಲಸೆ ಸೇವಾ ವಿಭಾಗದ (ಯುಎಸ್‌ಸಿಐಎಸ್) ಪ್ರಕಾರ, ಅಮೆರಿಕದಲ್ಲಿ ಈಗಿರುವ ಎಚ್1ಬಿ ವೀಸಾದಾರರ ಸಂಖ್ಯೆ 5.65 ಲಕ್ಷ. ಪ್ರತಿ ವರ್ಷವೂ ವೀಸಾಕ್ಕೆ ಅರ್ಜಿ ಸಲ್ಲಿಸುವವರ ಸಂಖ್ಯೆ ಏರುತ್ತಲೇ ಇದೆ. ಹಾಗಾಗಿಯೇ, ಈಗ ವೀಸಾ ನೀತಿಯಲ್ಲಿ ಬದಲಾವಣೆ ತರಲು ನಿರ್ಧರಿಸಲಾಗಿದೆ. 2004ರಲ್ಲಿ ಎಚ್1ಬಿ ವೀಸಾಕ್ಕೆ ಸಲ್ಲಿಕೆಯಾಗಿದ್ದ ಅರ್ಜಿಗಳ ಸಂಖ್ಯೆ 85 ಸಾವಿರ ಮಾತ್ರ ಇತ್ತು. ಆದರೆ, 2023ರಲ್ಲಿ 4,83,927 ಅರ್ಜಿಗಳು ಸಲ್ಲಿಕೆಯಾಗಿವೆ.

ವೀಸಾ ನೀಡಿಕೆ ಕಡಿತಗೊಳಿಸಿರುವುದು ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಕ್ಷೇತ್ರವನ್ನು ಹೆಚ್ಚು ಬಾಧಿಸಿದೆ. ಅಮೆರಿಕದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಮತ್ತು ಪ್ರೋಗ್ರಾಮರ್‌ಗಳ ಕೊರತೆ ತೀವ್ರವಾಗಿದೆ. ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿಯೂ ಕೆಲಸಗಾರರ ಕೊರತೆ ಇದೆ. ಕೃತಕ ಬುದ್ಧಿಮತ್ತೆಯು ಮಾಹಿತಿ ತಂತ್ರಜ್ಞಾನದ ಕ್ಷೇತ್ರದ ಸಣ್ಣ ಭಾಗವೇ ಆಗಿದ್ದರೂ ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಲ್ಲಿ ಶೇ 55ರಷ್ಟು ಮಂದಿ ವಿದೇಶಿಯರೇ ಇದ್ದಾರೆ.

2020ರಲ್ಲಿ ಸಲ್ಲಿಕೆಯಾದ ಅರ್ಜಿಗಳ ಪೈಕಿ ಶೇ 69.5ರಷ್ಟು ಕಂಪ್ಯೂಟರ್ ಸಂಬಂಧಿ ಉದ್ಯೋಗಾಕಾಂಕ್ಷಿಗಳದ್ದೇ ಆಗಿತ್ತು ಎಂಬುದು ಈ ಕ್ಷೇತ್ರದಲ್ಲಿ ಈ ವೀಸಾಕ್ಕೆ ಎಷ್ಟು ಬೇಡಿಕೆ ಇದೆ ಎಂಬುದನ್ನು ಸೂಚಿಸುತ್ತದೆ.

ವೀಸಾ: ಹತ್ತಾರು ವಿಧ



ದೇಶಕ್ಕೆ ಭೇಟಿ ನೀಡುವ ವಿದೇಶಿಯರಿಗೆ ಅಮೆರಿಕವು ಹತ್ತಾರು ರೀತಿಯ ವೀಸಾಗಳನ್ನು ಒದಗಿಸುತ್ತದೆ. ಯಾವ ಉದ್ದೇಶಕ್ಕೆ ಭೇಟಿ ನೀಡುತ್ತಾರೆ ಎಂಬುದರ ಮೇಲೆ ಯಾವ ವೀಸಾ ಎಂದು ನಿರ್ಧರಿಸಲಾಗುತ್ತದೆ. ತಾತ್ಕಾಲಿಕ ವೀಸಾ, ಕಾಯಂ ವೀಸಾ, ವಿದ್ಯಾರ್ಥಿ ವೀಸಾ ಮತ್ತು ವ್ಯಾಪಾರದ ಉದ್ದೇಶಕ್ಕೆ ಭೇಟಿ ನೀಡಲು ವೀಸಾ ನೀಡಲಾಗುತ್ತದೆ. ಅಮೆರಿಕದಲ್ಲಿ ನಿಗದಿತ ಅವಧಿವರೆಗೆ ಉದ್ಯೋಗ ಮಾಡಲು ಬಯಸುವ ವಿದೇಶಿ ನೌಕರರಿಗೆ ತಾತ್ಕಾಲಿಕ ವೀಸಾ ನೀಡಲಾಗುತ್ತದೆ. ಉದ್ಯೋಗಿಯ ಸಂಗಾತಿ ಅಥವಾ ಅವಲಂಬಿತರಿಗೂ ವೀಸಾ ನೀಡಲಾಗುತ್ತದೆ. ಉದ್ಯೋಗಿಗಳ ಪರವಾಗಿ ಉದ್ಯೋಗದಾತ ಸಂಸ್ಥೆಯು ವೀಸಾಕ್ಕೆ ಅರ್ಜಿ ಸಲ್ಲಿಸಬೇಕು.

ಎಚ್1ಬಿ: ಎಚ್ ವರ್ಗದ ವೀಸಾಗಳಲ್ಲಿ ಎಚ್1ಬಿ ವೀಸಾ ಪ್ರಮುಖವಾದುದು. ವಿದೇಶಗಳ ನುರಿತ ತಂತ್ರಜ್ಞರು, ಶೈಕ್ಷಣಿಕ ವಲಯದ ವೃತ್ತಿಪರರು, ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ವಿಶೇಷ ಪರಿಣತಿ ಇರುವವರಿಗೆ ಈ ವೀಸಾ ಸಿಗುತ್ತದೆ. ಉದ್ಯೋಗಕ್ಕೆ ಬೇಕಾದಷ್ಟು ಅಥವಾ ಅದಕ್ಕೂ ಹೆಚ್ಚಿನ ದರ್ಜೆಯ ಪದವಿ ಪಡೆದಿರಬೇಕು. ಅಮೆರಿಕದ ಉದ್ಯೋಗದಾತ ಸಂಸ್ಥೆಯು ಉದ್ಯೋಗಿಯ ಪರವಾಗಿ ವೀಸಾಕ್ಕೆ ಅರ್ಜಿ ಸಲ್ಲಿಸುತ್ತದೆ. ಈ ಕೆಲಸವನ್ನು ಮಾಡಬಲ್ಲ ಕೌಶಲದ ಉದ್ಯೋಗಿಗಳು ಅಮೆರಿಕದಲ್ಲಿ ಇಲ್ಲ ಎಂಬುದನ್ನು ಕಂಪನಿಯು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕು. ಎಚ್1ಬಿ ವೀಸಾ ಅವಧಿ 3 ವರ್ಷ.

ಎಚ್-2ಎ ಮತ್ತು ಎಚ್-2ಬಿ: ನಿರ್ದಿಷ್ಟ ಋತುವೊಂದರಲ್ಲಿ ಕೆಲಸದ ಒತ್ತಡ ಹೆಚ್ಚಿದ ಸಂದರ್ಭದಲ್ಲಿ ಈ ಎರಡು ರೀತಿಯ ತಾತ್ಕಾಲಿಕ ವೀಸಾಗಳನ್ನು ನೀಡಲಾಗುತ್ತದೆ. ಕೃಷಿ ಸಂಬಂಧಿತ ಕೆಲಸಗಳಿಗೆ ಎಚ್-2ಎ ಮತ್ತು ಕೃಷಿಯೇತರ ಕೆಲಸದ ಸಂದರ್ಭಗಳಲ್ಲಿ ಎಚ್-2ಬಿ ನೀಡಲಾಗುತ್ತದೆ. ಒಂದು ವರ್ಷದ ಒಳಗೆ ಇವುಗಳ ಅವಧಿ ಮುಗಿಯುತ್ತದೆ.

ಎಚ್-3: ವೈದ್ಯಕೀಯ ಶಿಕ್ಷಣ ಹೊರತುಪಡಿಸಿ, ಬೇರಾವುದೇ ವಿಶೇಷ ಶಿಕ್ಷಣ, ತರಬೇತಿ ಪಡೆಯುವ ಉದ್ದೇಶಕ್ಕೆ ಈ ರೀತಿಯ ವೀಸಾ ನೀಡಲಾಗುತ್ತದೆ. ಈ ವೀಸಾದಡಿ ತರಬೇತಿ ಪಡೆಯುವವರಿಗೆ, ಅಮೆರಿಕದಲ್ಲಿ ಉದ್ಯೋಗ ಮಾಡಲು ಅವಕಾಶ ಇರುವುದಿಲ್ಲ.

ಎಚ್-4: ಎಚ್-1 ಬಿ ಹಾಗೂ ಎಚ್-2ಎ ವೀಸಾ ಪಡೆದಿರುವ ಉದ್ಯೋಗಿಗಳ ಸಂಗಾತಿ, ಪೋಷಕರು ಅಥವಾ ಅವರ 21 ವರ್ಷದೊಳಗಿನ ಮಕ್ಕಳಿಗೆ ಅಮೆರಿಕದಲ್ಲಿ ವಾಸಿಸಲು ಎಚ್-4 ವೀಸಾ ನೀಡಲಾಗುತ್ತದೆ.

ಗ್ರೀನ್ ಕಾರ್ಡ್

ಪರಿಣತ ಉದ್ಯೋಗಿಗಳು ಹಾಗೂ ಅವರ ಕುಟುಂಬ ಸದಸ್ಯರಿಗೆ ಅಮೆರಿಕದಲ್ಲಿ ಕಾಯಂ ಆಗಿ ನೆಲೆಸಲು 'ಗ್ರೀನ್ ಕಾರ್ಡ್' ನೀಡಲಾಗುತ್ತದೆ. ಅಮೆರಿಕ ಪ್ರತಿ ವರ್ಷ 1.40 ಲಕ್ಷ ಗ್ರೀನ್ ಕಾರ್ಡ್‌ಗಳನ್ನು ಉದ್ಯೋಗ ಆಧಾರಿತವಾಗಿ ನೀಡುತ್ತದೆ. ಅಮೆರಿಕದಲ್ಲಿ ಈಗಾಗಲೇ ಉದ್ಯೋಗದಲ್ಲಿರುವ ನೌಕರರು ಇದಕ್ಕೆ ಅರ್ಜಿ ಸಲ್ಲಿಸಲು ಅರ್ಹರು.

ವೃತ್ತಿ ಆಧಾರಿತ ಇನ್ನಷ್ಟು ವೀಸಾಗಳನ್ನು ಅಮೆರಿಕ ನೀಡುತ್ತದೆ. ವಾಣಿಜ್ಯ ವೃತ್ತಿಪರರು, ಶಿಕ್ಷಣ ಹಾಗೂ ಸಂಶೋಧನೆ, ವಿಜ್ಞಾನ, ಕಲೆಯಲ್ಲಿ ಅಪಾರ ಪರಿಣತಿ ಪಡೆದಿರುವವರಿಗೆ ಮೊದಲ ಪ್ರಾಶಸ್ತ್ಯದ ಇಬಿ-1 ವೀಸಾ ನೀಡಲಾಗುತ್ತದೆ. ಕನಿಷ್ಠ 10 ವರ್ಷಗಳ ಅನುಭವ ಇರುವ ವೃತ್ತಿಪರರಿಗೆ ಎರಡನೇ ಪ್ರಾಶಸ್ತ್ಯದ ಇಬಿ-2 ವೀಸಾ ಇದೆ. ಅಮೆರಿಕದ ಕಂಪನಿಯೊಂದಕ್ಕೆ ತಾತ್ಕಾಲಿಕವಾಗಿ ಅಗತ್ಯವಿರುವ ಕಾರ್ಮಿಕರ ನೇಮಕಕ್ಕೆ ಇಬಿ-3 ವೀಸಾ ಮೀಸಲಾಗಿದೆ. ಹಾಗೆಯೇ ಉದ್ಯೋಗ ಆಧಾರಿತವಾದ ಇಬಿ-4 ಮತ್ತು ಇಬಿ-5 ಎಂಬ ವೀಸಾಗಳನ್ನೂ ಅಮೆರಿಕ ಪರಿಚಯಿಸಿದೆ.

ಎಲ್-1ಎ ಮತ್ತು ಎಲ್-1 ಬಿ: ಕೆಲಸ ಮಾಡುವ ಕಂಪನಿಯೊಳಗೆ ತಾತ್ಕಾಲಿಕವಾಗಿ ವರ್ಗಾವಣೆ ಆಗುವ ಉದ್ಯೋಗಿಗಳಿಗೆ ಇವುಗಳನ್ನು ನೀಡಲಾಗುತ್ತದೆ. ಕಾರ್ಯನಿರ್ವಹಣಾ ಅಥವಾ ನಿರ್ವಹಣಾ ಶ್ರೇಣಿಯ ಉದ್ಯೋಗಿಗಳಿಗೆ ಎಲ್-1ಎ ವೀಸಾವನ್ನು 3 ವರ್ಷಗಳ ಅವಧಿಗೂ, ವಿಶೇಷ ಪರಿಣತಿಯ ಶ್ರೇಣಿಯ ಉದ್ಯೋಗಿಗೆ ಎಲ್-1 ಬಿ ವೀಸಾವನ್ನು ಒಂದು ವರ್ಷದ ಅವಧಿಗೆ ನೀಡಲಾಗುತ್ತದೆ.

ಐ ವೀಸಾ: ಇದೊಂದು ಮಾಧ್ಯಮ ವೀಸಾ. ವಿದೇಶಗಳಲ್ಲಿ ಮುದ್ರಣ ಮಾಧ್ಯಮ, ರೇಡಿಯೊ, ಸಿನಿಮಾ ಕ್ಷೇತ್ರದಲ್ಲಿ ಕೆಲಸ ಮಾಡುವ ವರದಿಗಾರರು, ಸಂಪಾದಕರು ಅಥವಾ ಸಿನಿಮಾ ತಂಡದ ಸಿಬ್ಬಂದಿಗೆ ಈ ವೀಸಾ ಮೀಸಲಾಗಿದೆ. ಈ ವೀಸಾಗೆ ಇಂತಿಷ್ಟೇ ಅವಧಿ ಎಂದು ನಿಗದಿಯಿಲ್ಲ.

ಒ-ವೀಸಾ: ಅಸಾಧಾರಣ ಸಾಮರ್ಥ್ಯ ಮತ್ತು ಅಸಾಧಾರಣ ಸಾಧನೆ ಮಾಡಿರುವ ಜನರಿಗೆ ಒ-ವೀಸಾ ಸಿಗುತ್ತದೆ. ಇಂತಹ ವ್ಯಕ್ತಿಗಳ ಜೊತೆ ಪ್ರಯಾಣಿಸುವ ಕುಟುಂಬದವರಿಗೂ ವೀಸಾ ಸಿಗುತ್ತದೆ.

ಪಿ-ವೀಸಾ: ಕಾರ್ಯಕ್ರಮ ಆಧಾರಿತ ವೀಸಾ ಇದಾಗಿದ್ದು, ಅಥ್ಲೆಟಿಕ್ಸ್, ಪ್ರದರ್ಶನ, ವಿವಿಧ ಕಲೆಗಳಲ್ಲಿ ಅನುಪಮ ಸಾಧನೆ ಮಾಡಿರುವ ವ್ಯಕ್ತಿಗಳಿಗೆ ಇದು ಮೀಸಲು.

ಆರ್-ವೀಸಾ: ಧಾರ್ಮಿಕ ಪಂಗಡವೊಂದಕ್ಕೆ ಸೇರಿರುವ ಹಾಗೂ ಧಾರ್ಮಿಕ ಕೆಲಸಕ್ಕಾಗಿ ಅಮೆರಿಕಕ್ಕೆ ಭೇಟಿ ನೀಡುವ ವ್ಯಕ್ತಿಗೆ ಆರ್-ವೀಸಾ ನೀಡಲಾಗುತ್ತದೆ.

ವಿದ್ಯಾರ್ಥಿ ವೀಸಾ: ಅಮೆರಿಕದ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಲು ಇಚ್ಛಿಸುವ ಹಾಗೂ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಅಡಿ ದೇಶಕ್ಕೆ ಬರಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ವೀಸಾ ನೀಡಲಾಗುತ್ತದೆ. ಇದರಡಿ, ಎಫ್-1 ವೀಸಾ ಪಡೆಯುವ ವಿದ್ಯಾರ್ಥಿಯು, ಒಂದು ವರ್ಷದ ಬಳಿಕ ತನ್ನ ವಿದ್ಯಾಭ್ಯಾಸದ ಜತೆಗೆ ಉದ್ಯೋಗವನ್ನೂ ಮಾಡಬಹುದು. ವಿದ್ಯಾರ್ಥಿಯ ಕುಟುಂಬದವರಿಗೆ ಎಫ್-2 ವೀಸಾ ಸಿಗುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಎಂ-ವೀಸಾ, ಜೆ-ವೀಸಾ ವ್ಯವಸ್ಥೆಗಳೂ ಇವೆ.

ವ್ಯವಹಾರ ವೀಸಾ: ತಾತ್ಕಾಲಿಕವಾಗಿ, ವ್ಯವಹಾರವೊಂದರ ಸಲುವಾಗಿ ಅಮೆರಿಕಕ್ಕೆ ಭೇಟಿ ನೀಡುವ ಉದ್ಯಮಿಗಳಿಗೆ ಬಿ-1 ಹೆಸರಿನ ವೀಸಾ ಇದೆ. ಬಿ-1 ವೀಸಾದಾರರ ಕುಟುಂಬದವರಿಗೆ ಅವರ ಜೊತೆ ಪ್ರಯಾಣಿಸಲು ಅವಕಾಶವಿಲ್ಲ.

ನವೀಕರಣ: ಪ್ರತ್ಯೇಕ ಘಟಕಕ್ಕೆ ಸಲಹೆ

ಏಷ್ಯಾ ಅಮೆರಿಕನ್ ಜನರ ಕುರಿತು ರಚಿಸಲಾಗಿರುವ ಅಮೆರಿಕ ಅಧ್ಯಕ್ಷರ ಸಲಹಾ ಆಯೋಗದ ಶಿಫಾರಸಿನಂತೆ ವೀಸಾ ನವೀಕರಣ ವ್ಯವಸ್ಥೆಯಲ್ಲಿ ಬದಲಾವಣೆಗೆ ನಿರ್ಧರಿಸಲಾಗಿದೆ. ಎಚ್1ಬಿ ಮತ್ತು ಎಲ್ ವೀಸಾಗಳ ನವೀಕರಣಕ್ಕೆ ಪ್ರತ್ಯೇಕ ಇಲಾಖೆಯನ್ನೇ ರೂಪಿಸಬೇಕು ಎಂದೂ ಯುಎಸ್‌ಸಿಐಎಸ್‌ಗೆ ಸಲಹೆ ನೀಡಿದೆ.

ವೀಸಾ ನವೀಕರಣದ ಇಡೀ ಪ್ರಕ್ರಿಯೆಯು ಅತ್ಯಂತ ತ್ರಾಸದಾಯಕವಾಗಿದೆ. ಇಲ್ಲಿ ಕೆಲಸ ಮಾಡುವುದಕ್ಕಾಗಿ ಇಲ್ಲಿನ ಕಂಪನಿಗಳ ಆಹ್ವಾನದ ಮೇರೆಗೆ ಕಾನೂನುಬದ್ಧವಾಗಿ ಅಮೆರಿಕಕ್ಕೆ ಬರುವವರಿಗೆ ತೊಂದರೆ ಕೊಡುವ ರೀತಿಯಲ್ಲಿ ಈ ವ್ಯವಸ್ಥೆ ಇದೆ. ಹೀಗೆ ಬಂದವರು ಅಮೆರಿಕದ ಕಂಪನಿಗಳು ಮತ್ತು ಅರ್ಥವ್ಯವಸ್ಥೆಗೆ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ ಎಂದು ಆಯೋಗವು ಅಮೆರಿಕದ ಅಧ್ಯಕ್ಷರಿಗೆ ಸಲ್ಲಿಸಿದ ಶಿಫಾರಸಿನಲ್ಲಿ ಹೇಳಿದೆ.

ತಂತ್ರಜ್ಞಾನ ಕಂಪನಿಗಳೇ ಮುಂದು

ಅಮೆರಿಕ ನೀಡುವ ಉದ್ಯೋಗ ಆಧಾರಿತ, ಪ್ರತಿಷ್ಠಿತ ಎಚ್-1ಬಿ ವೀಸಾ ಪಡೆಯುವಲ್ಲಿ ತಂತ್ರಜ್ಞಾನ ಕಂಪನಿಗಳೇ ಮುಂಚೂಣಿಯಲ್ಲಿವೆ. ಅಮೆಜಾನ್, ಇನ್ಫೊಸಿಸ್ ಹಾಗೂ ಟಿಸಿಎಸ್ ಕಂಪನಿಗಳು ಅತಿಹೆಚ್ಚು ವೀಸಾ ಪಡೆದ ಮೊದಲ ಮೂರು ಸ್ಥಾನಗಳಲ್ಲಿವೆ. 2022ರಲ್ಲಿ ಅಮೆಜಾನ್ ಕಂಪನಿಯು 6,396 ಎಚ್-1ಬಿ ವೀಸಾಗಳಿಗೆ ಅರ್ಜಿ ಹಾಕಿತ್ತು. ಇನ್ಫೊಸಿಸ್ 3,151 ಉದ್ಯೋಗಿಗಳಿಗೆ ಈ ವೀಸಾ ಕೊಡಿಸುವಲ್ಲಿ ಯಶಸ್ವಿಯಾಗಿತ್ತು. ಟಿಸಿಎಸ್ ಕಂಪನಿಯು 2,725 ವೀಸಾ ಪಡೆದಿತ್ತು. ಕಾಗ್ನಿಜೆಂಟ್, ಗೂಗಲ್, ಮೆಟಾ, ಎಚ್‌ಸಿಎಲ್ ಹಾಗೂ ಐಬಿಎಂ ನಂತರದ ಸ್ಥಾನಗಳಲ್ಲಿವೆ.

ಆಧಾರ: ಅಮೆರಿಕದ ಪೌರತ್ವ ಮತ್ತು ವಲಸೆ ಸೇವಾ ವಿಭಾಗದ ಜಾಲತಾಣ, ಪಿಟಿಐ

ಸಿನಿ ಬಿಟ್ಸ್

'ಚೌಕಾಬಾರ'ದ ಮೋಹಕ ಗಾನ

ಸುಮಾರು ಎರಡು ವರ್ಷಗಳಿಂದ ಸುದ್ದಿಯಲ್ಲಿದ್ದ 'ಚೌಕಾಬಾರ' ಚಿತ್ರ ಮಾರ್ಚ್‌ನಲ್ಲಿ ತೆರೆಗೆ ಬರಲಿದೆ ಎಂದಿದೆ ಚಿತ್ರತಂಡ. ಅದಕ್ಕೂ ಮುನ್ನ ಈ ಚಿತ್ರದ ರೊಮ್ಯಾಂಟಿಕ್ ವಿಡಿಯೋ ಹಾಡೊಂದು ಫೆ. 14ರಂದು ಲಹರಿ ಮ್ಯೂಸಿಕ್‌ನ ಯುಟ್ಯೂಬ್ ಚಾನೆಲ್‌ನಲ್ಲಿ ಬಿಡುಗಡೆಯಾಗಲಿದೆ.

ಚಿತ್ರದಲ್ಲಿ ಮೂರು ಹಾಡುಗಳಿವೆ. ನಕುಲ್ ಅಭಯಂಕರ್ ಹಾಗೂ ರಮ್ಯಾ ಭಟ್ ಹಾಡಿದ್ದಾರೆ. ನಾಳೆ ಬಿಡುಗಡೆಯಾಗಲಿರುವ ಹಾಡನ್ನು ಬಿ.ಆರ್.ಲಕ್ಷ್ಮಣರಾವ್ ಬರೆದಿದ್ದಾರೆ. ಅಶ್ವಿನ್ ಪಿ. ಕುಮಾರ್ ಸಂಗೀತ ನಿರ್ದೇಶಕರು.

ನವಿ ನಿರ್ಮಿತಿ ಲಾಂಛನದಲ್ಲಿ ನಮಿತಾರಾವ್ ಈ ಚಿತ್ರ ನಿರ್ಮಿಸಿದ್ದಾರೆ. ಅವರೇ ನಾಯಕಿ. ವಿಕ್ರಮ್ ಸೂರಿ ನಿರ್ದೇಶಕರು. ಮಣಿ ಆರ್. ರಾವ್ ಅವರ ಕಾದಂಬರಿ ಆಧಾರಿತ ಕಥೆ ಈ ಚಿತ್ರದ್ದು. ಫೆ. 28ರಂದು ಈ ಚಿತ್ರದ ಟ್ರೈಲರ್ ಬಿಡುಗಡೆಯಾಗಲಿದೆ. ಮಾರ್ಚ್‌ನಲ್ಲಿ ಚಿತ್ರವು ಭಾರತ, ಅಮೆರಿಕದಲ್ಲಿ ಬಿಡುಗಡೆಯಾಗಲಿದೆ. ಏಪ್ರಿಲ್‌ನಲ್ಲಿ ದುಬೈ, ಆಸ್ಟ್ರೇಲಿಯಾದಲ್ಲಿ ಬಿಡುಗಡೆಯಾಗಲಿದೆ.

ವಿಹಾನ್ ಪ್ರಭಂಜನ್, ಕಾವ್ಯ ರಮೇಶ್, ಸಂಜಯ್ ಸೂರಿ, ಸುಮಾ ರಾವ್, ಪ್ರಥಮ ಪ್ರಸಾದ್, ಮಧು ಹೆಗಡೆ, ದಮಯಂತಿ ನಾಗರಾಜ್ ತಾರಾಗಣದಲ್ಲಿದ್ದಾರೆ. ರೂಪಾ ಪ್ರಭಾಕರ್ ಸಂಭಾಷಣೆ, ರವಿರಾಜ್ ಅವರ ಛಾಯಾಗ್ರಹಣ, ಶಶಿಧರ್ ಅವರ ಸಂಕಲನ ಈ ಚಿತ್ರಕ್ಕಿದೆ.



ನಮಿತಾ ರಾವ್, ವಿಕ್ರಮ್ ಸೂರಿ

ಪ್ರೀತಿಯಲ್ಲೊಂದು ಜ್ಞಾನೋದಯ

ಯೌವನಕ್ಕೆ ಬಂದು ಬದುಕು ಏನು ಎಂಬುದನ್ನು ಅರಿಯುವ ಹೊತ್ತಿಗೆ ಪ್ರೀತಿ ಹುಟ್ಟಿಕೊಂಡಿತು. ಅಲ್ಲಿಂದ ನಮ್ಮ ಪಯಣ ಏನು ಬೇಕಾದರೂ ಆಗಬಹುದು. ಪ್ರೀತಿ ಎಲ್ಲರ ಮನಸ್ಸನ್ನು ಗೆಲ್ಲುತ್ತದೆ. ಅವನು ಪ್ರೀತಿಯಲ್ಲಿ ಮೋಸ ಹೋದ ಕಥೆ, ಅವಳು ಜೀವನದಲ್ಲಿ ನಂಬಿಕೆ ಕಳೆದುಕೊಂಡ ಘಟನೆ. ಇವರಿಬ್ಬರದೂ ವಿಚಿತ್ರ ಸಂದರ್ಭವೊಂದರಲ್ಲಿ ಭೇಟಿ. ಮುಂದೆ ಏನಾಯಿತು.? ಆ ಜೋಡಿಗಾದ ಜ್ಞಾನೋದಯವೇನು?...

ಇದೇನು ಎಂದು ತಿಳಿಯಬೇಕಾದರೆ 'ಒಂದೊಳ್ಳೆ ಲವ್ ಸ್ಟೋರಿ' ಬರುವವರೆಗೆ ಕಾಯಬೇಕು. ಹೊಸ ಪ್ರತಿಭೆಗಳು ಸೇರಿ ಸಿದ್ಧಪಡಿಸಿರುವ ಚಿತ್ರವಿದು. ಪ್ರವೀಣ್ ಸುತಾರ್ ಚಿತ್ರದ ನಿರ್ದೇಶಕರು. ಕಥೆ, ಚಿತ್ರಕಥೆ ಬರೆದು ನಾಯಕನಾಗಿ ಅಭಿನಯಿಸಿರುವವರು ಅಶ್ವಿನ್. ಬಿಗ್‌ಬಾಸ್ ಸ್ಪರ್ಧಿ ಧನುಶ್ರೀ ಮತ್ತು ನಟ ನಿಶಾ ಹೆಗಡೆ ನಾಯಕಿಯರು. ಕೈಲಾಸ್‌ಪಾಲ್, ಕೆ.ಎಸ್. ಜಿ.ವೆಂಕಟೇಶ್, ವಿಂಧುಜ, ಮಲ್ಲು ಜಮಖಂಡಿ ತಾರಾಗಣದಲ್ಲಿದ್ದಾರೆ.

ಅನಿವಾಸಿ ಭಾರತೀಯ ಮೈಸೂರಿನ ನಿರಂಜನ್‌ಬಾಬು ಪಿನಕಿನ್ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ನಿರ್ಮಿಸಿ, ನಾಯಕನ ತಂದೆ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಏಳು ಹಾಡುಗಳಿಗೆ ಆಕಾಶ್ ಜಾಧವ್ ಸಂಗೀತ ಸಂಯೋಜಿಸಿದ್ದಾರೆ. ವಿನೋದ್ ಮಂಡ್ಯ ಛಾಯಾಗ್ರಹಣ, ವಿಜಯೇಂದ್ರ ಜೋಡಿದಾರ್ ಸಂಭಾಷಣೆ, ರಾಜ್ ಶಿವು ಸಂಕಲನ ಈ ಚಿತ್ರಕ್ಕಿದೆ.



ನಿಶಾ ಹೆಗಡೆ, ಅಶ್ವಿನ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಪ್ರಖ್ಯಾತ** ಕಾದಂಬರಿಕಾರ ಸಲ್ಮಾನ್ ರಶ್ದಿ ಅವರು ಇಸ್ಲಾಂ ವಿರೋಧಿ ಹೇಳಿಕೆ ನೀಡಿದ್ದಾರೆ ಎನ್ನಲಾಗುವ ಟ್ವೀಟ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಎಲ್ಲ ಧರ್ಮಗಳು ಹಾಗೂ ಸಂಸ್ಕೃತಿ ನಾಶವಾಗುವವರೆಗೆ ಅಥವಾ ಎಲ್ಲರೂ ಮತಾಂತರ ಆಗುವವರೆಗೆ ಇಸ್ಲಾಂ ವಿರಮಿಸುವುದಿಲ್ಲ ಎಂಬ ಎಚ್ಚರಿಕೆಯನ್ನು ಇಡೀ ಜಗತ್ತಿಗೆ ನೀಡಲು ಬಯಸುತ್ತೇನೆ' ಎಂಬುದಾಗಿ ರಶ್ದಿ ಹೇಳಿದ್ದಾರೆ ಎನ್ನಲಾಗಿದೆ. @Lokakas ಹೆಸರಿನ ಟ್ವಿಟರ್ ಖಾತೆಯಲ್ಲಿ ರಶ್ದಿ ಅವರು ನೀಡಿದ್ದಾರೆ ಎನ್ನಲಾದ ಹೇಳಿಕೆಯನ್ನು ಹಂಚಿಕೊಳ್ಳಲಾಗಿದೆ. ಒಂದು ಕಣ್ಣಿನ ದೃಷ್ಟಿ ಕಳೆದುಕೊಂಡಿರುವ ರಶ್ದಿ ಅವರ ಚಿತ್ರವೂ ಇದೆ. ಆದರೆ ಇದು ರಶ್ದಿ ಅವರ ಹೇಳಿಕೆ ಅಲ್ಲ.



✓ **ಸಲ್ಮಾನ್ ರಶ್ದಿ** ಅವರು ಇಸ್ಲಾಂ ವಿರೋಧಿ ಹೇಳಿಕೆ ನೀಡಿಲ್ಲ ಎಂದು 'ಪಿಟಿಐ' ಸುದ್ದಿಸಂಸ್ಥೆಯು ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ರಶ್ದಿ ಅವರು ಸ್ವತಃ ಟ್ವೀಟ್ ಮಾಡಿದ್ದು, 'ನಾನು ಈ ಹೇಳಿಕೆ ನೀಡಿಲ್ಲ, ಇದು ನನ್ನದಲ್ಲ' ಎಂದು ಸ್ಪಷ್ಟನೆ ನೀಡಿದ್ದಾರೆ. ರಶ್ದಿ ಅವರು ಇಸ್ಲಾಂ ವಿರೋಧಿ ಹೇಳಿಕೆ ನೀಡಿರುವ ಯಾವ ಮಾಹಿತಿಯೂ ಗೂಗಲ್‌ನಲ್ಲಿ ಸಿಗಲಿಲ್ಲ ಎಂದು ಪಿಟಿಐ ತಿಳಿಸಿದೆ. ರಶ್ದಿ ಅವರು ಕಳೆದ ಆಗಸ್ಟ್‌ನಲ್ಲಿ ನ್ಯೂಯಾರ್ಕ್‌ನಲ್ಲಿ ಭಾಷಣ ಮಾಡುವ ವೇಳೆ ದಾಳಿಗೆ ಒಳಗಾಗಿದ್ದರು. ಒಂದು ಕಣ್ಣಿನ ದೃಷ್ಟಿ ನಷ್ಟವಾಗಿತ್ತು. ದಾಳಿಯಲ್ಲಿ ಒಂದು ಕೈಗೆ ಗಂಭೀರ ಗಾಯವಾಗಿತ್ತು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಮೂರನೆಯ ಭಾಗೀದಾರ

ಜೀವನ ವ್ಯಾಪಾರ ಮೂವರೊಟ್ಟು ವಿಚಾರ |
ಭಾವಿಪೊಡೆ ನೀನು, ಜಗ, ಇನ್ನೊಂದದೃಷ್ಟ ||
ಆವಗಂ ಮೂರನೆಯ ಭಾಗಸ್ಥನಿಚ್ಛೆ ಬಲ ||
ಈ ವಿವರವರಿಯೆ ಸುಖ – ಮಂಕುತಿಮ್ಮ || 820 ||

ಪದ-ಅರ್ಥ: ಮೂವರೊಟ್ಟು = ಮೂವ-ರ + ಒಟ್ಟು, ಭಾವಿಪೊಡೆ = ಭಾವಿಸಿದರೆ, ಇನ್ನೊಂದ ದೃಷ್ಟ = ಇನ್ನೊಂದು + ಅದೃಷ್ಟ(ಕಣ್ಣಿಗೆ ಕಾಣಲಾರದ್ದು), ಆವಗಂ = ಯಾವಾಗಲೂ, ಭಾಗಸ್ಥನಿಚ್ಛೆ = ಭಾಗಸ್ಥನ + ಇಚ್ಛೆ, ವಿವರವರಿಯೆ- = ವಿವರವ + ಅರಿಯೆ.

ವಾಚ್ಯಾರ್ಥ: ಜೀವನದ ವ್ಯಾಪಾರದಲ್ಲಿ ಮೂವರು ಭಾಗಸ್ಥರಿದ್ದಾರೆ. ಒಂದು ನೀನು, ಎರಡನೆಯದು ಜಗತ್ತು ಮತ್ತು ಮೂರನೆಯದು ಕಣ್ಣಿಗೆ ಕಾಣದ ಶಕ್ತಿ. ಯಾವಾಗಲೂ ಮೂರನೆಯವನ ಇಚ್ಛೆಯೇ ಬಲ. ಈ ವಿವರವನ್ನು ತಿಳಿದಿದ್ದರೆ ಸುಖ.

ವಿವರಣೆ: ಕೆಲವೊಂದು ವ್ಯವಹಾರಗಳಲ್ಲಿ ಭಾಗೀದಾರರು ಇರುತ್ತಾರೆ. ಅದರಲ್ಲಿ ಕೆಲವರು ಹಣ ಹೂಡಲು ಸಮರ್ಥರಾದವರು, ಕೆಲವರು ಆಡಳಿತ ಚತುರರು ಮತ್ತೆ ಕೆಲವರಿಗೆ ತುಂಬ ಸಂಪರ್ಕಗಳಿರುವುದರಿಂದ ಆರ್ಡರ್‌ಗಳನ್ನು ತರುತ್ತಾರೆ. ಮೂವರೂ ಹೊಂದಾಣಿಕೆಯಿಂದ ವ್ಯವಹಾರ ಮಾಡುತ್ತಾರೆ. ಆದರೆ ವ್ಯವಹಾರದಲ್ಲಿ ಒಬ್ಬ ಭಾಗೀದಾರ ಜೋರು ಮಾಡುವುದುಂಟು. ಅದಕ್ಕೆ ಕಾರಣ, ವ್ಯವಹಾರದಲ್ಲಿ ಅವನ ಕಾಣಿಕೆ ಹೆಚ್ಚಾಗಿದೆ ಎಂಬುದು ಅವನ ಭಾವನೆ. ಅದು ಸರಿಯಾಗಿದ್ದರೆ ಉಳಿದವರೂ ಅವನ ವಾದವನ್ನು ಒಪ್ಪುತ್ತಾರೆ. ಆದರೆ ಬದುಕಿನ ವ್ಯವಹಾರದಲ್ಲೂ ಮೂರು ಜನ ಭಾಗಸ್ಥರಿದ್ದಾರಂತೆ. ಮೊದಲನೆಯ ಭಾಗಸ್ಥ ನೀನು-ಒಂದು ಜೀವ. ಎರಡನೆಯದು ಈ ಜಗತ್ತು. ಅಸಂಖ್ಯ ಜೀವಗಳು ಇರುವುದರಿಂದ ಜಗತ್ತಿಗೆ ಒಂದು ಅರ್ಥ. ಜೀವದಿಂದಲೇ ಜಗತ್ತು, ಜೀವಕ್ಕಾಗಿಯೇ ಜಗತ್ತು. ಜೀವವೇ ಇಲ್ಲದಿದ್ದರೆ ಜಗತ್ತು ಇರಬೇಕಾಗಿರಲಿಲ್ಲ. ಜೀವ ಜಗತ್ತಿನಿಂದ ಒಂದಷ್ಟನ್ನು ಪಡೆಯುತ್ತದೆ, ಒಂದಷ್ಟನ್ನು ಕೊಡುತ್ತದೆ. ಹೀಗೆ ಜೀವ ಮತ್ತು ಜಗತ್ತುಗಳ ನಡುವಿನ ವ್ಯವಹಾರ ಸದಾಕಾಲ ನಡೆದೇ ಇರುತ್ತದೆ. ಜೀವ ಮತ್ತು ಜಗತ್ತು ಎರಡೂ ಕಣ್ಣಿಗೆ ಕಾಣುತ್ತವೆ. ಅದಕ್ಕೇ ಅವುಗಳನ್ನು ವ್ಯಕ್ತ ಅಥವಾ ದೃಶ್ಯ ಎಂದು ಕರೆಯುತ್ತಾರೆ. ಕಗ್ಗ ಹೇಳುತ್ತದೆ, ಇನ್ನೊಬ್ಬ ಭಾಗೀದಾರನಿದ್ದಾನೆ. ಆದರೆ ಅವನು ಕಣ್ಣಿಗೆ ಕಾಣಲಾರ. ಅದನ್ನು ಅವ್ಯಕ್ತ ಅಥವಾ ಅದೃಶ್ಯ ಎನ್ನುತ್ತಾರೆ. ಮೂರನೆಯ ಭಾಗೀದಾರನ ಇರುವಿಕೆಯನ್ನು ತರ್ಕಮಾಡಿ ರುಜುವಾತು ಮಾಡಲು ಸಾಧ್ಯವಿಲ್ಲ. ಅದು ವ್ಯವಹಾರಕ್ಕೆ ಸಿಕ್ಕುವುದಿಲ್ಲ. ಅದು ಏನಿದ್ದರೂ ಅನುಭವಕ್ಕೆ ಗೋಚರವಾಗುವಂಥದ್ದು. ಪ್ರಪಂಚದ ದೃಷ್ಟಿಯಿಂದ ಈ ಅದೃಶ್ಯ ಶಕ್ತಿಯು ಪರಬ್ರಹ್ಮ, ಪರಮೇಶ್ವರ ಅಥವಾ ಈಶ್ವರ ಎಂದು ಕರೆಯಿಸಲ್ಪಡುತ್ತದೆ. ಜೀವಕ್ಕೂ, ಜಗತ್ತಿಗೂ ಸ್ಥೂಲರೂಪವಿರುವುದರಿಂದ ಅವುಗಳಿಗೆ ಸಾವು, ಹುಟ್ಟುಗಳಿವೆ, ವಿಕಾರಗಳಿವೆ. ಆದರೆ ಈಶ್ವರನು ಹುಟ್ಟು-ಸಾವುಗಳಿಗೆ ಅಧೀನನಲ್ಲ. ಅಷ್ಟೇ ಅಲ್ಲ, ಜೀವ, ಜಗತ್ತುಗಳ ಸೃಷ್ಟಿ, ನಾಶ ಮತ್ತು ವಿಕಾರಗಳಿಗೆ ಕಾರಣನಾದವನು. ಆದ್ದರಿಂದ ಈಶ್ವರ ಜೀವ, ಜಗತ್ತುಗಳಿಂದ ಹೆಚ್ಚು ಸಾರಭೂತವಾದವನು. ಅದಕ್ಕೆ ಕಗ್ಗ ಮೂರನೆಯ ಭಾಗಸ್ಥನ ಇಚ್ಛೆ ಬಲ ಎನ್ನುತ್ತದೆ. ಜೀವ, ಜಗತ್ತುಗಳು ಏನನ್ನೇ ಮಾಡಿದರೂ ಅವು ಕೊನೆಗೆ ಈಶ್ವರನ ಅನುಗ್ರಹಕ್ಕೇ ಕಾಯಬೇಕು. ಅವನ ತೀರ್ಮಾನವೇ ಕೊನೆಯದು. ಈ ವಿವರ ತಿಳಿದಿದ್ದರೆ ಒಳಿತು ಎನ್ನುತ್ತದೆ ಕಗ್ಗ. ನಮ್ಮೆಲ್ಲರನ್ನೂ ಮೀರಿದ ಶಕ್ತಿಯೊಂದು ಇದೆ, ಅದೇ ನಿರ್ಣಾಯಕ ಶಕ್ತಿ ಎಂದು ತಿಳಿದರೆ, ಅಹಂಕಾರ, ಒಣ ಹೆಮ್ಮೆಗೆ ಅವಕಾಶವಿರುವುದಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಫೆಬ್ರುವರಿ 13, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣ ಸಪ್ತಮಿ ಗಂ. 09-46 ನಕ್ಷತ್ರ: ವಿಶಾಖಾ ಗಂ. 26-35 ಯೋಗ: ವೃದ್ಧಿ ಗಂ. 14-16, ಕರಣ: ಬವ ಗಂ. 09-46, ಮಕರ ಮಾಸದ 30 ನೇ ದಿನ.
ರಾಹುಕಾಲ : ಬೆಳಿಗ್ಗೆ 07-30–09-00
ಸೂರ್ಯೋದಯ : 06-58 ಸೂರ್ಯಾಸ್ತ : 06-32
ಮುಸ್ಲಿಂ ದಿನಾಂಕ : 21 ರಜಬ್
ದಿನ ವಿಶೇಷ : ಅಷ್ಟಕ, ಜಾನಕಿ ಜನ್ಮ ಅದೃಷ್ಟ ಸಂಖ್ಯೆ : 7, 11

ಮೇಷ: ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ ಹೆಚ್ಚಿನ ಗಮನವಹಿಸಿ. ಮಕ್ಕಳ ಸಜ್ಜನರ ಒಡನಾಟದಿಂದ ಮನಸ್ಸಿಗೆ ನೆಮ್ಮದಿ ಇರುವುದು. ಮನೆ ಕಟ್ಟುವ ವಿಚಾರದಲ್ಲಿ ಮನೆಯ ಹಿರಿಯರೊಂದಿಗೆ ಗಂಭೀರ ಚರ್ಚೆಯನ್ನು ಮಾಡುವುದು ಉಚಿತ.

ವೃಷಭ: ಸಾಲದ ಹಣ ಮರುಪಾವತಿ ಮಾಡುವುದರಿಂದ ಆತ್ಮಾಭಿಮಾನ ಕಾಪಾಡಿಕೊಳ್ಳಬಹುದು. ಆಫೀಸಿನಲ್ಲಿ ಉಂಟಾಗಿದ್ದ ಸಮಸ್ಯೆಗಳು ತನ್ನಂತಾನೆ ಬಗೆ ಹರಿದು ಮನಸ್ಸು ನಿರಾಳವಾಗಲಿದೆ. ಶುಭಕ್ಕಾಗಿ ಮಹಾಗಣಪತಿ ಆರಾಧಿಸಿ.

ಮಿಥುನ: ಅಭಿಪ್ರಾಯಗಳಿಗೆ ಮನ್ನಣೆ ಇದೆಯೇ ಎಂಬುದನ್ನು ಮೊದಲು ಖಚಿತಪಡಿಸಿಕೊಂಡು ಹಿತವಚನಗಳನ್ನು ಹೇಳಲು ಮುಂದುವರೆಯಿರಿ. ಕಾರ್ಯಗಳ ಬಗ್ಗೆ ಹೆಚ್ಚಿನ ನಿಗಾ ಕೊಡುವಂತೆ ಅಧಿಕಾರಿಗಳಿಂದ ಆದೇಶವಾಗುವುದು.

ಕರ್ಕಾಟಕ: ಕಳುವಾಗಿದ್ದ ವಸ್ತುಗಳು ಪುನಃ ದೊರೆತು ಸಂತಸವಾಗಲಿದೆ. ಲೇಖನ ಬರೆಯುವುದರಿಂದ ಜನ ಸಂಪರ್ಕ ಅಭಿವೃದ್ಧಿಯಾಗಲಿದೆ.ತಮಾಷೆಯ ಮಾತುಗಳು ಹಿರಿಯರ ಮನಸ್ಸನ್ನು ನೋವಿಸುವುದು, ಮಾತಿನಲ್ಲಿ ಹಿಡಿತವಿರಲಿ.

ಸಿಂಹ: ನಿಮ್ಮ ವಿರುದ್ಧವಾಗಿ ರಾಜಕೀಯ ಚಟುವಟಿಕೆಗಳು ಹೆಚ್ಚಾಗುವುದು. ಎದುರಾಗುವ ಸ್ಪರ್ಧೆಯಲ್ಲಿ ಪ್ರಮುಖ ಸ್ಥಾನ ಪಡೆಯಲು ತಯಾರಿ ನಡೆಸುವಿರಿ. ಆರೋಗ್ಯದಲ್ಲಿ ಗಮನಾರ್ಹವಾದ ಸುಧಾರಣೆ ಕಾಣಬಹುದು.

ಕನ್ಯಾ: ನ್ಯಾಯಾಧೀಶರಿಗೆ ಅನಿವಾರ್ಯದ ಸಂದರ್ಭ ಎದುರಾಗಲಿದೆ. ನಾಗ ದೇವರನ್ನು ಆರಾಧಿಸಿ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಗುತ್ತದೆ. ಎಲೆಕ್ಟ್ರಾನಿಕ್ಸ್ ಉಪಕರಣ ವ್ಯಾಪಾರಿಗಳಿಗೆ ಒಳ್ಳೆಯ ಲಾಭ ಪ್ರಾಪ್ತಿಯಾಗುತ್ತದೆ.

ತುಲಾ: ವ್ಯವಹಾರದಲ್ಲಿ ಸೋದರರನ್ನು ಸೇರಿಸಿಕೊಂಡು ಅಥವಾ ರಕ್ತ ಸಂಬಂಧಿಗಳನ್ನು ಸೇರಿಸಿಕೊಂಡು ನೂತನ ಘಟಕಗಳನ್ನು ಆರಂಭಿಸಬಹುದು. ಬಂಧು ಮಿತ್ರರ ನೆರವು ಸಿಗಲಿದೆ. ಕೃಷಿಯ ಕೆಲಸ ವ್ಯವಸ್ಥಿತವಾಗಿ ಸಾಗಲಿದೆ.

ವೃಶ್ಚಿಕ: ಉನ್ನತ ಓದಿನೆಡೆಗೆ ಹೆಚ್ಚಿನ ಗಮನ ನೀಡುವುದು ಉತ್ತಮ. ಪಠ್ಯೇತರ ಕಲಿಕೆ ಅದರಲ್ಲೂ ಚಿತ್ರಕಲೆಯಲ್ಲಿನ ಆಸಕ್ತಿಯಿಂದಾಗಿ ಹೆಚ್ಚಿನ ಕಲಿಕೆಗಾಗಿ ವಿಶೇಷ ತರಗತಿಗೆ ಕಳುಹಿಸಲು ತಂದೆಯವರಿಂದ ಒಪ್ಪಿಗೆ ದೊರೆಯುವುದು.

ಧನು: ಮಕ್ಕಳ ಕೆಲಸಗಳ ಬಗ್ಗೆ ನೆರೆಯವರಿಂದ ಪ್ರಶಂಸೆಯಮಾತು ಕೇಳಿ ಆನಂದವಾಗುತ್ತದೆ. ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಬರಲಿದೆ. ಶ್ರೀಕ್ಷೇತ್ರಕ್ಕೆ ಹೋಗುವ ಯೋಜನೆಯನ್ನು ಕಾರ್ಯರೂಪಕ್ಕೆ ತನ್ನಿರಿ.

ಮಕರ: ಸತ್ಯಾಸತ್ಯತೆಗಳನ್ನು ಅರಿಯುವ ಬಗ್ಗೆ ಹೆಚ್ಚಿನ ಗಮನವಿರಲಿ. ನಿಮ್ಮ ಸ್ವಪ್ರಯತ್ನದೊಂದಿಗೆ ದೈವ ಬಲವೂ ಇರುತ್ತದೆ. ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳ. ಕಪ್ಪು ಬಣ್ಣ ಶುಭ ತರಲಿದೆ.


ಕುಂಭ: ಉದ್ಯೋಗ, ವ್ಯವಹಾರಗಳಲ್ಲಿ ಸಿಂಹಾವಲೋಕನದ ಅಗತ್ಯವಿದೆ. ತೀರ್ಮಾನ ಅಥವಾ ಮುಂದಾಲೋಚನೆ ಇಲ್ಲದೇ ಯಾವುದೇ ಭರವಸೆ ನೀಡಬೇಡಿ. ಗಮನವಿಟ್ಟು ಕೆಲಸ ಮಾಡಿದರೆ ಯಶಸ್ಸನ್ನು ಸಾಧಿಸುವಿರಿ.

ಮೀನ: ಅವಿವಾಹಿತರಿಗೆ ಕಂಕಣ ಬಲದ ಯೋಗವಿದ್ದು, ಮಾತುಕತೆಯಿಂದ ನಿಶ್ಚಯಕ್ಕೆ ದಿನ ನಿಗದಿಗೊಳಿಸುವಿರಿ. ಸ್ವಂತ ಪ್ರಯತ್ನದಿಂದ ನಿಮಗೆ ಪ್ರತಿಷ್ಠಿತ ಸಂಸ್ಥೆಯೊಂದರಲ್ಲಿ ಕಾರ್ಯ ನಿರ್ವಹಿಸುವ ಸದವಕಾಶ ಈ ದಿನ ಪ್ರಾಪ್ತಿ.

ಪದಬಂಧ 5229 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಪಾಯದಿಂದ ಹಾಕಿದ ಬುನಾದಿ (4)
3.ಆದಾಯ ಮತ್ತು ಖರ್ಚು (4)
5.ಬಿಡದಿ ಬಳಿಯಿರುವ ಹೆಂಡತಿ (3)
6.ಮರಳ ಹತ್ತಿರ ಹುಚ್ಚನಿದ್ದಾನಲ್ಲಾ! (3)
7. ಗಮನವಿಟ್ಟಾಗ ಗಂಭೀರವಾದುದು ಕಂಡಿದೆ (3)
9.ತನಯ ಹೀಗೆ ಮಗ್ನ! (3)
11.ರಾಮನಿಗೆ ಸಿಕ್ಕಿರುವ ಬಿಡುವು (3)
12.ಕನ್ನಡಿಗನ ಹಿಡಿದಿರುವ ಲೆನ್ಸು (3)
14.ಈತ ಮೃತ್ಯುದೇವತೆಯ ಮಗ (4)
15.ಗಣಪತಿಯ ಇನ್ನೊಂದು ಹೆಸರು (4)

ಮೇಲಿಂದ ಕೆಳಕ್ಕೆ
1. ಒಪ್ಪವಾಗಿ ಹಾಡಿನ ಧಾಟಿಯಿಂದ ಮೂಡಿರುವ ಪ್ರೀತಿ (4)
2.ಮಯನಿಲ್ಲಿ ಉಲ್ಟಾ ನಿಂತಿದ್ದಾನೆ (2)
3.ಆದಿವಾಸಿಯಲ್ಲಿನ ಮೂಲ! (2)
4.ಯಮನ ಹತ್ತಿರ ಕಾಣಿಸಿರುವ ಜೋಡಿ (3)
6.ಈತ ಕಟ್ಟಾ ಸಂಪ್ರದಾಯವಂತ (4)
8.ಹೊಸ ಹೂವಿದು (4)
10.ಬಲು ರುಚಿಯಾದ ಅಡುಗೆ (4)
11.ದಾಯಾದಿಯ ಬಿಟ್ಟುಕೊಡುವಿಕೆ! (3)
12.ತಮ್ಮ ನೀಡಿರುವ ಓಟು (2)
13. ವಿರಮಿಸುತ್ತಿದ್ದಾಗ ಮೂಡಿರುವ ಸೂರ್ಯ (2)



5228ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ಭಾಷಾಂತರ 6.ಮಲಯಜ
7.ನಿಯಮ 10.ಜವಾನ
11.ಹಯವದನ 12.ಕಡಲು
13.ಕರಗ 15.ಕನ್ನಡಕ1
17.ಕೆಂಗುಲಾಬಿ

ಮೇಲಿಂದ ಕೆಳಕ್ಕೆ:
1.ಅಭಾಗಿನಿ 2.ಸ್ವರ
3.ಭೀಮ 4.ಯಜಮಾನ
8.ಮಹಲು 9.ಕವಳ
10.ಜನಕ 12.ಕನಿಕರ
14.ಗಡಿಬಿಡಿ 16.ಕಡ
17.ಕೆಂಡ

ಸುಡೊಕು 5615

		1			7		3	
			2	3				
5		2		1		9		7
2		5					7	
				5	3	8		9
	9		8				5	
4		3			2			
	5			4		7	9	2
7		9	6		5		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5614 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5





ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಲಾಭ ಶೇ 65ರಷ್ಟು ಏರಿಕೆ


ನವದೆಹಲಿ (ಪಿಟಿಐ): ಸರ್ಕಾರಿ ವಲಯದ 12 ಬ್ಯಾಂಕ್‌ಗಳು ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಒಟ್ಟು ₹29,175 ಕೋಟಿಯಷ್ಟು ಲಾಭ ಗಳಿಸಿವೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಲಾಭವು ₹17,729 ಕೋಟಿಯಷ್ಟು ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 65ರಷ್ಟು ಹೆಚ್ಚಾಗಿದೆ.

ಲಾಭದ ಪ್ರಮಾಣದಲ್ಲಿ ಆಗಿರುವ ಹೆಚ್ಚಳಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ಆಫ್ ಮಹಾರಾಷ್ಟ್ರ (ಬಿಒಎಂ) ಮೊದಲ ಸ್ಥಾನದಲ್ಲಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ₹775 ಕೋಟಿ ನಿವ್ವಳ ಲಾಭ ಗಳಿಸಿದ್ದು, ಹಿಂದಿನ ಅವಧಿಗೆ ಹೋಲಿಸಿದರೆ ಲಾಭದಲ್ಲಿ ಶೇ 139ರಷ್ಟು ಹೆಚ್ಚಳ ಆಗಿದೆ.

ಯುಕೊ ಬ್ಯಾಂಕ್ ಲಾಭವು ಶೇ 110ರಷ್ಟು ಹೆಚ್ಚಾಗಿದ್ದು ₹653 ಕೋಟಿಗೆ ತಲುಪಿದೆ. ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇಂಡಿಯನ್ ಬ್ಯಾಂಕ್‌ನ ಲಾಭ ಸಹ ಶೇ 100ಕ್ಕೂ ಹೆಚ್ಚು ಏರಿಕೆ ಕಂಡಿದೆ.

ಪ್ರಸಕ್ತ ಹಣಕಾಸು ವರ್ಷದ ಒಂಬತ್ತು ತಿಂಗಳಿನಲ್ಲಿ ಸರ್ಕಾರಿ ವಲಯದ ಬ್ಯಾಂಕ್‌ಗಳ ಲಾಭವು ₹ 70,166 ಕೋಟಿ ಆಗಿದೆ.



ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹48,983 ಕೋಟಿಯಷ್ಟು ಲಾಭ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 43ರಷ್ಟು ಹೆಚ್ಚಾಗಿದೆ.

ಬ್ಯಾಂಕ್ ಆಫ್ ಮಹಾರಾಷ್ಟ್ರ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಕ್ರಮವಾಗಿ ಶೇ 2.94 ಮತ್ತು ಶೇ 3.14ರಷ್ಟು ಇದೆ. ನಿವ್ವಳ ಎನ್‌ಪಿಎ ಕ್ರಮವಾಗಿ ಶೇ 0.47 ಮತ್ತು ಶೇ 0.77ರಷ್ಟು ಇದೆ.

ಅದಾನಿ ಕಂಪನಿಗಳಿಂದ ಹೆಚ್ಚುವರಿ ಷೇರುಗಳ ಅಡಮಾನ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಮೂರು ಕಂಪನಿಗಳು ಹೆಚ್ಚುವರಿ ಷೇರುಗಳನ್ನು ಅಡಮಾನ ಇಟ್ಟಿವೆ.

ಅದಾನಿ ಪೋರ್ಟ್ಸ್, ಅದಾನಿ ಎಂಟರ್‌ಪ್ರೈಸಸ್ ಮತ್ತು ಅದಾನಿ ಗ್ರೀನ್ ಎನರ್ಜಿ ಕಂಪನಿಗಳು ಎಸ್‌ಬಿಐಕ್ಯಾಪ್ ಟ್ರಸ್ಟೀ ಕಂಪನಿಯಲ್ಲಿ ಷೇರುಗಳನ್ನು ಅಡಮಾನ ಇರಿಸಿವೆ.

ಆಸ್ಟ್ರೇಲಿಯಾದಲ್ಲಿ ಕಾರ್‌ಮೈಕಲ್ ಕಲ್ಲಿದ್ದಲು ಗಣಿ ಯೋಜನೆಗಾಗಿ ಅದಾನಿ ಸಮೂಹಕ್ಕೆ ಬ್ಯಾಂಕ್ ಒಂದು ನೀಡಿದ್ದ ಸಾಲಕ್ಕೆ ಎಸ್‌ಬಿಐ ಲೆಟರ್ ಆಫ್ ಕ್ರೆಡಿಟ್ ನೀಡಿತ್ತು. ಹೀಗಾಗಿ ಸಮೂಹದ ಈ ಮೂರು ಕಂಪನಿಗಳು ಹೆಚ್ಚುವರಿ ಷೇರುಗಳನ್ನು ಎಸ್‌ಬಿಐನಲ್ಲಿ ಅಡಮಾನ ಇಟ್ಟಿವೆ.

ಷೇರುಪೇಟೆಯಲ್ಲಿ ಇರುವ ಮಾಹಿತಿಯ ಪ್ರಕಾರ, ಅದಾನಿ ಪೋರ್ಟ್ಸ್ ಹೆಚ್ಚುವರಿಯಾಗಿ 75 ಲಕ್ಷ ಷೇರುಗಳನ್ನು ಅಡಮಾನ ಇಟ್ಟಿದೆ. ಇದರಿಂದ ಎಸ್‌ಬಿಐಕ್ಯಾಪ್‌ನಲ್ಲಿ ಒಟ್ಟು ಅಡಮಾನ ಇಟ್ಟಿರುವ ಷೇರು ಶೇ 1ರಷ್ಟಾಗಿದೆ. ಅದಾನಿ ಗ್ರೀನ್ ಕಂಪನಿಯು ಹೆಚ್ಚುವರಿಯಾಗಿ 60 ಲಕ್ಷ ಷೇರುಗಳನ್ನು ಅಡಮಾನ ಇಟ್ಟಿದ್ದು, ಒಟ್ಟು ಅಡಮಾನ ಇಟ್ಟಿರುವ ಷೇರುಗಳ ಪ್ರಮಾಣ ಶೇ 1.06ಕ್ಕೆ ತಲುಪಿದೆ. ಅದಾನಿ ಟ್ರಾನ್ಸ್‌ಮಿಷನ್ ಕಂಪನಿಯು 13 ಲಕ್ಷ ಹೆಚ್ಚುವರಿ ಷೇರುಗಳನ್ನು ಅಡಮಾನ ಇಟ್ಟಿದ್ದು, ಒಟ್ಟು ಷೇರುಗಳ ಪ್ರಮಾಣ 0.55ರಷ್ಟಾಗಿದೆ.

ಏನಿದು ಯುಲಿಪ್, ಹೂಡಿಕೆ ಹೇಗೆ?



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ವಿಮಾ ಖಾತರಿ, ತೆರಿಗೆ ವಿನಾಯಿತಿ ಮತ್ತು ಮಾರುಕಟ್ಟೆ ಹೂಡಿಕೆ ಅವಕಾಶ. ಈ ಮೂರು ಅಂಶಗಳನ್ನು ಒಳಗೊಂಡಿರುವ ಹೂಡಿಕೆಯೆಂದರೆ ಅದು ಯುಲಿಪ್. ಯುಲಿಪ್ ನಲ್ಲಿ ಯಾರು ಹೂಡಿಕೆ ಮಾಡುವುದು ಸೂಕ್ತ, ಅದರ ವಿಶೇಷತೆಗಳೇನು, ಹೂಡಿಕೆ ಅವಧಿ ಎಷ್ಟು, ಹೀಗೆ ಯುಲಿಪ್ ಸುತ್ತ ಇರುವ ಪ್ರಮುಖ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳೋಣ.

ಯುಲಿಪ್ ಅಂದ್ರೆ?: ಇನ್ಶೂರೆನ್ಸ್ ಮತ್ತು ಮಾರುಕಟ್ಟೆ ಹೂಡಿಕೆ ಈ ಎರಡರ ಮಿಶ್ರಣವೇ ಯುನಿಟ್ ಆಧರಿತ ವಿಮಾ ಯೋಜನೆ ಅಥವಾ ಯುಲಿಪ್. ಈ ಯೋಜನೆಯಲ್ಲಿ ನಿಮ್ಮ ಹಣದ ಒಂದಿಷ್ಟು ಮೊತ್ತವನ್ನು ವಿವಿಧ ಹಣಕಾಸು ಮಾರುಕಟ್ಟೆಗಳಲ್ಲಿ ಹೂಡುವ ಜತೆಗೆ ವಿಮಾ ಖಾತರಿ ಒದಗಿಸಲಾಗುತ್ತದೆ. ಯುಲಿಪ್ ಹೂಡಿಕೆ ಮಾರುಕಟ್ಟೆಯ ಏರಿಳಿತಗಳಿಗೆ ಒಳಪಟ್ಟಿದ್ದು 5 ವರ್ಷಗಳ ಲಾಕಿನ್ ಪೀರಿಯಡ್ ಕಡ್ಡಾಯವಾಗಿದೆ. ಯುಲಿಪ್‌ನಲ್ಲಿ ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್- ಅಂದರೆ ದೊಡ್ಡ, ಮಧ್ಯಮ ಮತ್ತು ಸಣ್ಣ ಗಾತ್ರದ ಕಂಪನಿಗಳಲ್ಲಿ ಹೂಡಿಕೆಗೆ ಅವಕಾಶವಿರುತ್ತದೆ. ಹೂಡಿಕೆದಾರನಿಗೆ ಮಾರುಕಟ್ಟೆಯ ಏರಿಳಿತಗಳನ್ನು ತಡೆದುಕೊಳ್ಳುವ ಸಾಮರ್ಥ್ಯ ಎಷ್ಟರಮಟ್ಟಿಗಿದೆ ಎನ್ನುವುದನ್ನು ಅರಿತು ಇದರಲ್ಲಿ ಹೂಡಿಕೆ ಬಗ್ಗೆ ತೀರ್ಮಾನಿಸಬೇಕಾಗುತ್ತದೆ.

ಯುಲಿಪ್ ವರ್ಗೀಕರಣ: ಯುಲಿಪ್ ಅನ್ನು ಪ್ರಮುಖವಾಗಿ ಎರಡು ರೀತಿಯಲ್ಲಿ ವರ್ಗೀಕರಿಸಬಹುದು. ಒಂದು ಪಿಂಚಣಿ (ಪೆನ್ಶನ್) ಮತ್ತೊಂದು ಎಂಡೋಮೆಂಟ್. ಪಿಂಚಣಿ ಯುಲಿಪ್‌ಗಳಲ್ಲಿ ನಿಧಿ ಸಂಗ್ರಹ ಭಾಗವಿದೆ. ಮೆಚ್ಯೂರಿಟಿ ಮೊತ್ತವನ್ನು ಇಲ್ಲಿ ವರ್ಷಾಶನಗಳಲ್ಲಿ (ಆನ್ಯುಯಿಟಿ) ಆಧಾರದಲ್ಲಿ ತೊಡಗಿಸಬೇಕಾಗುತ್ತದೆ. ಎಂಡೋಮೆಂಟ್ ಯುಲಿಪ್ ಸಹ ನಿಧಿ ಸಂಗ್ರಹ ಭಾಗ ಹೊಂದಿದೆ. ಆದರೆ ನಿಧಿಯ ಮೌಲ್ಯವನ್ನು 5 ವರ್ಷಗಳ ನಂತರ ಪಡೆದುಕೊಳ್ಳಲು ಅವಕಾಶವಿದೆ. ಒಟ್ಟಾರೆಯಾಗಿ ಯುಲಿಪ್ನಲ್ಲಿ ಹೂಡಿಕೆಯ ಭಾಗ ಮ್ಯೂಚುವಲ್ ಫಂಡ್ ರೀತಿಯಲ್ಲೇ ಇರುತ್ತದೆ.

ಯುಲಿಪ್ ಶುಲ್ಕಗಳು: ಯುಲಿಪ್ನಲ್ಲಿ ಪ್ರಮುಖವಾಗಿ ನಾಲ್ಕು ಶುಲ್ಕಗಳಿವೆ. ಹಂಚಿಕೆ, ನಿರ್ವಹಣೆ, ಪ್ರಾಣಹಾನಿ ಮತ್ತು ಫಂಡ್ ನಿರ್ವಹಣೆ ಶುಲ್ಕಗಳು. ಫಂಡ್ ನಿರ್ವಹಣೆ ಶುಲ್ಕವನ್ನು ಶೇ. 1.35ರಷ್ಟು ಇಡಲಾಗಿದೆ. ಯುಲಿಪ್‌ಗಳನ್ನು ಎಲ್‌ಟಿಸಿಜಿ ಅಂದರೆ ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆಯಿಂದ ಹೊರಗಿಡಲಾಗಿದೆ. ಈ ಹೂಡಿಕೆಗೆ ಸೆಕ್ಷನ್ 80 ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ಇದೆ.

ಇದರಲ್ಲಿ ಹೂಡಿಕೆ ಮಾಡಬೇಕೇ?: ಯಾವ ಗುರಿ ಆಧರಿಸಿ ಯುಲಿಪ್ನಲ್ಲಿ ಹಣ ಹಾಕುತ್ತಿದ್ದೀರಿ ಎನ್ನುವುದರ ಮೇಲೆ ಯುಲಿಪ್ನ ಹೂಡಿಕೆ ಸೂಕ್ತವೇ ಎನ್ನುವುದನ್ನು ತೀರ್ಮಾನಿಸಬೇಕಾಗುತ್ತದೆ. ದೀರ್ಘಾವಧಿಯಲ್ಲಿ ಶಿಸ್ತುಬದ್ಧ ಹೂಡಿಕೆ ಮಾಡಿದರೆ ಯುಲಿಪ್‌ನಿಂದ ಅನುಕೂಲವಿದೆ. ಆದರೆ, ಐದು ವರ್ಷಗಳ ಕಡ್ಡಾಯ ಹೂಡಿಕೆ ಅವಧಿ ಮತ್ತು ಹಲವು ಮಾದರಿಯ ಶುಲ್ಕಗಳು ಕೆಲ ಹೂಡಿಕೆದಾರರನ್ನು ಯುಲಿಪ್‌ನಿಂದ ದೂರ ಉಳಿಯುವಂತೆ ಮಾಡುತ್ತವೆ. ಯುಲಿಪ್‌ಗಳನ್ನು ಸಂಪೂರ್ಣ ವಿಮಾ ಯೋಜನೆಗಳಾಗಿ ಪರಿಗಣಿಸುವುದು ತಪ್ಪಾಗುತ್ತದೆ. ಏಕೆಂದರೆ ಇದರಲ್ಲಿ ಇನ್ಶೂರೆನ್ಸ್ ಮೊತ್ತ, ಪ್ರೀಮಿಯಂನ 10ರಿಂದ 12 ಪಟ್ಟು ಮಾತ್ರ ಇರುತ್ತದೆ. ಉದಾಹರಣೆಗೆ ಯುಲಿಪ್ನಲ್ಲಿ ₹ 1 ಕೋಟಿ ಕವರೇಜ್ ಪಡೆಯಬೇಕೆಂದರೆ ಸುಮಾರು ₹ 2 ಲಕ್ಷದಿಂದ ₹ 2.5 ಲಕ್ಷದವರೆಗೆ ಪ್ರೀಮಿಯಂ ಪಾವತಿಸಬೇಕಾಗುತ್ತದೆ. ಆದರೆ, ಟರ್ಮ್ ಲೈಫ್ ಇನ್ಶೂರೆನ್ಸ್ (ಅವಧಿ ವಿಮೆ) ಕವರೇಜ್ ತೆಗೆದುಕೊಂಡರೆ ಸುಮಾರು 30 ವರ್ಷದ ವ್ಯಕ್ತಿಗೆ ಕೇವಲ ₹ 12ರಿಂದ ₹14 ಸಾವಿರದಲ್ಲಿ ₹1 ಕೋಟಿ ಕವರೇಜ್ ಸಿಗುತ್ತದೆ. ಈ ಮೇಲಿನ ನಾನಾ ಕಾರಣಗಳಿಂದ ಹಲವರು ಯುಲಿಪ್‌ನಿಂದ ದೂರ ಉಳಿದಿದ್ದಾರೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹ ವಿಭಾಗದ ಮುಖ್ಯಸ್ಥ)

ಯುಲಿಪ್ v/s ಮ್ಯೂಚುವಲ್ ಫಂಡ್

ಯುಲಿಪ್	ಮ್ಯೂಚುವಲ್ ಫಂಡ್
ಇದು ಇನ್ಶೂರೆನ್ಸ್ ಒಳಗೊಂಡಿರುವ ಹೂಡಿಕೆ	ಬರೀ ಹೂಡಿಕೆಗಾಗೇ ಇರುವ ಸಾಧನ
ಲಾಕಿನ್ ಪೀರಿಯಡ್ (ಕಡ್ಡಾಯ ಹೂಡಿಕೆ ಅವಧಿ) ಇರುತ್ತದೆ	ಲಾಕಿನ್ ಪೀರಿಯಡ್ (ಕಡ್ಡಾಯ ಹೂಡಿಕೆ ಅವಧಿ) ಇರಬಹುದು ಅಥವಾ ಇಲ್ಲದಿರಬಹುದು
ನಿರ್ದಿಷ್ಟ ಕಾಲಾವಧಿಗೆ ಪ್ರೀಮಿಯಂ ಪಾವತಿಸುತ್ತಿರಬೇಕು	ವ್ಯವಸ್ಥಿತವಾಗಿ ಹೂಡಿಕೆ ಮಾಡುವ ವಿಚಾರ ಹೂಡಿಕೆದಾರನ ವಿವೇಚನೆಗೆ ಬಿಟ್ಟದ್ದು

ಅಲ್ಪ ಕುಸಿತ ದಾಖಲಿಸಿದ ಸೂಚ್ಯಂಕಗಳು



ಫೆಬ್ರವರಿ 10ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಮೊತ್ತದ ಕುಸಿತ ದಾಖಲಿಸಿವೆ. 60,682 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.26 ರಷ್ಟು ತಗ್ಗಿದೆ. 17,856 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಬಹುತೇಕ ಯಥಾಸ್ಥಿತಿ ಕಾಯ್ದುಕೊಂಡಿದೆ. ಆರ್‌ಬಿಐ ರೆಪೊ ದರ ಹೆಚ್ಚಳ ಮಾಡಿದ್ದು, ಕಂಪನಿಗಳ ತ್ರೈಮಾಸಿಕ ಸಾಧನೆಯಲ್ಲಿ ಮಿಶ್ರ ಫಲಿತಾಂಶ, ವಿದೇಶಿ ಹೂಡಿಕೆದಾರರಿಂದ ಮಾರಾಟದ ಒತ್ತಡ... ಸೇರಿ ಹಲವು ಅಂಶಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ಟೋಟಲ್ ಗ್ಯಾಸ್, ಅದಾನಿ ಗ್ರೀನ್ ಎನರ್ಜಿ, ಅದಾನಿ ಟ್ರಾನ್ಸ್ ಮಿಷನ್, ಟಾಟಾ ಸ್ಟೀಲ್ ಮತ್ತು ಹಿಂಡಾಲ್ಕೋ ಸ್ಟೀಲ್ ಶೇ 5 ರಿಂದ ಶೇ 22 ರಷ್ಟು ಕುಸಿತ ಕಂಡಿವೆ. ಪೇಟಿಎಂ, ಇಂಡಸ್ ಟವರ್ಸ್, ಅದಾನಿ ಪೋರ್ಟ್ಸ್ ಅಂಡ್ ಸ್ಪೆಷಲ್ ಇಕನಾಮಿಕ್ ಜೋನ್, ಅದಾನಿ ಎಂಟರ್ ಪ್ರೈಸಸ್, ನೈಕಾ, ಜೊಮ್ಯಾಟೋ ಮತ್ತು ಝೈಡಸ್ ಲೈಫ್ ಸೈನ್ಸಸ್ ಶೇ 9 ರಿಂದ ಶೇ 23 ರಷ್ಟು ಗಳಿಸಿಕೊಂಡಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಲೋಹ ವಲಯ ಶೇ 4.3, ಪವರ್ ಸೂಚ್ಯಂಕ ಶೇ 3.3, ಎನರ್ಜಿ ಮತ್ತು ಎಫ್‌ಎಂಸಿಜಿ ಸೂಚ್ಯಂಕ ತಲಾ ಶೇ 1 ರಷ್ಟು ಕುಸಿದಿವೆ. ಬಿಎಸ್ ಇ ರಿಯಲ್ ಎಸ್ಟೇಟ್ ಶೇ 2.5, ಟೆಲಿಕಾಂ ಸೂಚ್ಯಂಕ ಶೇ 2 ಮತ್ತು ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕ ಶೇ 2 ರಷ್ಟು ಗಳಿಸಿಕೊಂಡಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಮಾರಾಟದ ಒತ್ತಡ ಮುಂದುವರಿದಿದೆ. ಕಳೆದ ವಾರ ವಿದೇಶಿ ಹೂಡಿಕೆದಾರರು ₹ 3,201.63 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 2,287.48 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಮುನ್ನೋಟ: ಈ ವಾರ ಅಗ್ರಿಟೆಕ್ ಇಂಡಿಯಾ ಲಿ., ಅಂಜನಿ ಫುಡ್ಸ್, ಬಜಾಜ್ ಹೆಲ್ತ್ ಕೇರ್ ಲಿ., ಬ್ಲೂ ಚಿಪ್ ಇಂಡಿಯಾ ಲಿ., ದಾವಣಗೆರೆ ಶುಗರ್ಸ್, ಗೊದ್ರೇಜ್ ಇಂಡಿಯಾ ಲಿ., ಜೆಪಿ ಪವರ್, ನೈಕಾ, ಅಮೃತಾಂಜನ್, ಬಯೋಕಾನ್, ಬಿನ್ನಿ ಮಿಲ್ಸ್, ಬಾಷ್ ಇಂಡಿಯಾ ಲಿ., ಒಎನ್‌ಜಿಸಿ, ಎನ್‌ಎಂಡಿಸಿ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜಾಗತಿಕ ವಿದ್ಯಮಾನಗಳ ಜೊತೆಗೆ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು 100 ಮೊಟ್ಟೆಗೆ	₹448

ಎನ್‌ಎಸ್‌ಇ ಕಂಪನಿಗಳ ಮಾಹಿತಿ ಆಧರಿಸಿ ಮಾಹಿತಿ: ಪ್ರೈಮ್ ಡೇಟಾಬೇಸ್

ದೇಶಿ ಹೂಡಿಕೆದಾರರ ಪಾಲು ಹೆಚ್ಚಳ

ಮುಂಬೈ (ಪಿಟಿಐ): ರಾಷ್ಟ್ರೀಯ ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಗಳಲ್ಲಿ ದೇಶಿ ಸಾಂಸ್ಥಿಕ ಬಂಡವಾಳ ಹೂಡಿಕೆದಾರರ (ಡಿಐಐ) ಪಾಲು 2022ರ ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 24.44ಕ್ಕೆ ಏರಿಕೆ ಕಂಡಿದೆ. ಇದು ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿದೆ ಎಂದು ಪ್ರೈಮ್ ಡೇಟಾಬೇಸ್ ಸಮೂಹ ತಿಳಿಸಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶಿ ಹೂಡಿಕೆದಾರರ ಪಾಲು ಶೇ 22.37ರಷ್ಟು ಇತ್ತು.

ಡಿಸೆಂಬರ್ ತ್ರೈಮಾಸಿಕದ ಅಂತ್ಯಕ್ಕೆ ಎನ್‌ಎಸ್‌ಇನಲ್ಲಿ ಇರುವ 1,857 ಕಂಪನಿಗಳ ಪೈಕಿ 1,832 ಕಂಪನಿಗಳಲ್ಲಿನ ಷೇರುದಾರರ ಮಾಹಿತಿಯ ಆಧರಿಸಿ ಅದು ಈ ಮಾಹಿತಿ ನೀಡಿದೆ.

ಸತತ ಐದನೇ ತ್ರೈಮಾಸಿಕದಲ್ಲಿಯೂ ದೇಶಿ ಹೂಡಿಕೆದಾರರ ಪಾಲು ಹೆಚ್ಚಾಗಿದೆ. ಷೇರುಪೇಟೆಗಳಲ್ಲಿ ದೇಶಿ ಹೂಡಿಕೆದಾರರ ಪ್ರಬಾಲ್ಯ ಹೆಚ್ಚಾಗುತ್ತಿರುವುದನ್ನು ಇದು ಸೂಚಿಸುತ್ತಿದೆ ಎಂದು ಸಮೂಹದ ವ್ಯವಸ್ಥಾಪಕ ನಿರ್ದೇಶಕ ಪ್ರಣವ್ ಹಲ್ದಿಯಾ ತಿಳಿಸಿದ್ದಾರೆ.

ಸಣ್ಣ ಹೂಡಿಕೆದಾರರ ಪಾಲು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 7.34ರಷ್ಟು ಇದ್ದಿದ್ದು ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 7.23ಕ್ಕೆ ಇಳಿಕೆ ಆಗಿದೆ. ಆದರೆ, ಮೌಲ್ಯದ ಲೆಕ್ಕದಲ್ಲಿ ₹19.48 ಲಕ್ಷ ಕೋಟಿಯಿಂದ ₹19.94 ಲಕ್ಷ ಕೋಟಿಗೆ ಏರಿಕೆ ಕಂಡಿದೆ. ಈ ಮೂಲಕ ಶೇ 2.35ರಷ್ಟು ಬೆಳವಣಿಗೆ ಕಂಡುಬಂದಿದೆ.



ದೇಶಿ ಸಾಂಸ್ಥಿಕ ಹೂಡಿಕೆದಾರರು ಡಿಸೆಂಬರ್ ತ್ರೈಮಾಸಿಕದಲ್ಲಿ ₹27,134 ಕೋಟಿ ಬಂಡವಾಳ ಹೂಡಿಕೆ ಮಾಡಿದ್ದಾರೆ. ಇದೇ ಅವಧಿಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ₹47,349 ಕೋಟಿ ಮೊತ್ತದ ಹೂಡಿಕೆ ಮಾಡಿದ್ದಾರೆ.

2015ರ ಮಾರ್ಚ್ ತ್ರೈಮಾಸಿಕದಲ್ಲಿ ಎಫ್‌ಐಐ ಮತ್ತು ಡಿಐಐ ನಡುವೆ ಷೇರು ಮಾಲೀಕತ್ವದ ಪ್ರಮಾಣದಲ್ಲಿ ಭಾರಿ ಅಂತರ ಇತ್ತು. ಡಿಐಐ ಮಾಲೀಕತ್ವವು ಎಫ್‌ಐಐಗಿಂತಲೂ ಶೇ 55.45ರಷ್ಟು ಕಡಿಮೆ ಇತ್ತು. 2009ರ ಜೂನ್ ನಂತರ, 13 ವರ್ಷಗಳ ಅವಧಿಯಲ್ಲಿ ಎಫ್‌ಐಐ ಷೇರುಪಾಲು ಶೇ 16.02 ರಿಂದ ಶೇ 20.18ಕ್ಕೆ ಏರಿಕೆ ಕಂಡಿದೆ. ಇದೇ ವೇಳೆ ಡಿಐಐ ಷೇರುಪಾಲು ಶೇ 11.38 ರಿಂದ ಶೇ 15.32ಕ್ಕೆ ಹೆಚ್ಚಾಗಿದೆ.

ಪೇಟೆಯತ್ತ ಮತ್ತೆ ವಿದೇಶಿ ಹೂಡಿಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದೇಶಿ ಬಂಡವಾಳ ಹೂಡಿಕೆದಾರರು ಮತ್ತೆ ದೇಶದ ಷೇರುಪೇಟೆಗಳಲ್ಲಿ ಬಂಡವಾಳ ಹೂಡಿಕೆ ಮಾಡುವ ಸೂಚನೆಗಳು ಕಂಡುಬರುತ್ತಿವೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದರು.

'ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಜನವರಿಯಲ್ಲಿ ₹53,887 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರು. ಆದರೆ, ಫೆಬ್ರವರಿಯಲ್ಲಿ ಮಾರಾಟವನ್ನು ಕಡಿಮೆ ಮಾಡಿದ್ದಾರೆ. ಫೆಬ್ರುವರಿ 10ರಂದು ನಡೆದ ವಹಿವಾಟಿನಲ್ಲಿ ₹1,458 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.



ಈ ಬೆಳವಣಿಗೆಯನ್ನು ಗಮನಿಸಿದರೆ, ಭಾರತದಲ್ಲಿ ಷೇರುಗಳನ್ನು ಮಾರಾಟ ಮಾಡುವುದರಿಂದ ಬರುವ ಹಣವನ್ನು ಚೀನಾ, ಹಾಂಗ್‌ಕಾಂಗ್ ಮತ್ತು ದಕ್ಷಿಣ ಕೊರಿಯಾದಂತಹ ಕಡಿಮೆ ಮಾರುಕಟ್ಟೆ ಮೌಲ್ಯ ಇರುವ ದೇಶಗಳಲ್ಲಿ ಹೂಡಿಕೆ ಮಾಡುವ ಪ್ರವೃತ್ತಿ ಕೊನೆಯಾಗುವಂತೆ ಕಾಣುತ್ತಿದೆ ಎಂದು ಅವರು 'ಪ್ರಜಾವಾಣಿ'ಗೆ ಹೇಳಿದರು.

'ಸಿಡಿಎಸ್‌ಎಲ್‌ನಲ್ಲಿ ಇರುವ ಮಾಹಿತಿಯ ಪ್ರಕಾರ, 2023ರಲ್ಲಿ ಫೆಬ್ರುವರಿ 10ರವರೆಗಿನ ವಹಿವಾಟಿನಲ್ಲಿ ವಿದೇಶಿ ಹೂಡಿಕೆದಾರರು ₹38,523 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ವಾಹನ ಮತ್ತು ವಾಹನ ಬಿಡಿಭಾಗ, ನಿರ್ಮಾಣ, ಲೋಹ ಮತ್ತು ಗಣಿ ಕಂಪನಿಗಳ ಷೇರುಗಳನ್ನು ಖರೀದಿಸುತ್ತಿದ್ದಾರೆ. ಜನವರಿ ತಿಂಗಳ ಆರಂಭದಲ್ಲಿ ಐ.ಟಿ. ಷೇರುಗಳನ್ನು ಮಾರಾಟ ಮಾಡಿದ್ದ ಹೂಡಿಕೆದಾರರು ತಿಂಗಳ ಅಂತ್ಯದ ವೇಳೆಗೆ ಮತ್ತು ಫೆಬ್ರುವರಿಯಲ್ಲಿ ಈವರೆಗೆ ಖರೀದಿ ಮಾಡಿದ್ದಾರೆ. ಹೀಗಾಗಿ, ಷೇರುಗಳನ್ನು ಖರೀದಿಸಲು ಗಮನ ಹರಿಸುವ ನಿರೀಕ್ಷೆ ಮಾಡಬಹುದು ಎಂದು ತಿಳಿಸಿದರು.

ವಿದೇಶಿ ಹೂಡಿಕೆದಾರರು ಹಣಕಾಸು ಸೇವೆಗಳಿಗೆ ಸಂಬಂಧಿಸಿದ ಕಂಪನಿಗಳ ಷೇರುಗಳನ್ನು ನಿರಂತರವಾಗಿ ಮಾರಾಟ ಮಾಡುತ್ತಿದ್ದಾರೆ ಎಂದರು.

ಆಯಿಲ್ ಇಂಡಿಯಾ ಲಾಭ ₹1,746 ಕೋಟಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಆಯಿಲ್ ಇಂಡಿಯಾ ಲಿಮಿಟೆಡ್ (ಒಐಎಲ್) ಡಿಸೆಂಬರ್ ತ್ರೈಮಾಸಿಕದಲ್ಲಿ ₹ 1,746 ಕೋಟಿ ನಿವ್ವಳ ಲಾಭ ಗಳಿಸಿದೆ. ಇದುವರೆಗಿನ ಕಂಪನಿಯ ಗರಿಷ್ಠ ಲಾಭ ಇದಾಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭ ₹1,244 ಕೋಟಿ ಆಗಿತ್ತು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ. ತೈಲ ಮತ್ತು ನೈಸರ್ಗಿಕ ಅನಿಲ ದರದಲ್ಲಿ ಆಗಿರುವ ಏರಿಕೆಯಿಂದಾಗಿ ನಿವ್ವಳ ಲಾಭ ಹೆಚ್ಚಾಗಿದೆ ಎಂದು ಹೇಳಿದೆ. ಒಟ್ಟಾರೆ ವಹಿವಾಟು ಮೊತ್ತವು ಶೇ 27ರಷ್ಟು ಹೆಚ್ಚಾಗಿ ₹5,981 ಕೋಟಿಗೆ ಏರಿಕೆ ಆಗಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಪ್ರತಿ ಬ್ಯಾರಲ್ ಕಚ್ಚಾ ತೈಲ ಉತ್ಪಾದನೆ ಮತ್ತು ಮಾರಾಟದಿಂದ 88.33 ಡಾಲರ್ ಸಿಕ್ಕಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಪ್ರತಿ ಬ್ಯಾರಲ್‌ಗೆ 78.59 ಡಾಲರ್ ಸಿಕ್ಕಿತ್ತು.

2022ರ ಡಿಸೆಂಬರ್ 31ರ ಅಂತ್ಯಕ್ಕೆ ಒಂಬತ್ತು ತಿಂಗಳ ಅವಧಿಯಲ್ಲಿ ತೆರಿಗೆ ನಂತರದ ಲಾಭ ₹2,257 ಕೋಟಿಯಿಂದ ₹5,022 ಕೋಟಿಗೆ (ಶೇ 120) ಏರಿಕೆ ಕಂಡಿದೆ.

ಮಧ್ಯಂತರ ಲಾಭಾಂಶ: ಕಂಪನಿಯು ₹10ರ ಮುಖಬೆಲೆಯ ಷೇರಿಗೆ ₹10ರಷ್ಟು ಎರಡನೇ ಮಧ್ಯಂತರ ಲಾಭಾಂಶ ಘೋಷಿಸಿದೆ. ಈ ಮೊದಲು ಪ್ರತಿ ಷೇರಿಗೆ ₹4.50 ಮಧ್ಯಂತರ ಲಾಭಾಂಶ ಘೋಷಿಸಿತ್ತು. ಇದರಿಂದಾಗಿ ಒಟ್ಟು ಮಧ್ಯಂತರ ಲಾಭಾಂಶವು ₹14.50ರಷ್ಟು ಆಗಲಿದೆ.

ಆರು ಕಂಪನಿಗಳ ನಷ್ಟ ₹49,231 ಕೋಟಿ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯ ಮೌಲ್ಯಯುತ 10 ಕಂಪನಿಗಳ ಪೈಕಿ ಆರು ಕಂಪನಿಗಳ ಬಂಡವಾಳ ಮೌಲ್ಯವು ಶುಕ್ರವಾರಕ್ಕೆ ಕೊನೆಗೊಂಡ ವಹಿವಾಟಿನಲ್ಲಿ ಒಟ್ಟು ₹49,231 ಕೋಟಿಯಷ್ಟು ಕಡಿಮೆ ಆಗಿದೆ.

ಎಫ್‌ಎಂಸಿಜಿ ವಲಯದ ಪ್ರಮುಖ ಕಂಪನಿ ಹಿಂದುಸ್ತಾನ್ ಯೂನಿಲಿವರ್ ಲಿಮಿಟೆಡ್‌ಗೆ ಹೆಚ್ಚು ನಷ್ಟವಾಗಿದೆ. ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹15,918 ಕೋಟಿ ಕಡಿಮೆ ಆಗಿದ್ದು, ಒಟ್ಟು ಮೌಲ್ಯ ₹6.05 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.

ಭಾರ್ತಿ ಏರ್‌ಟೆಲ್‌ಗೆ ₹12,540 ಕೋಟಿ, ಐಟಿಸಿಗೆ ₹11,420 ಕೋಟಿ ಐಸಿಐಸಿಐ ಬ್ಯಾಂಕ್‌ಗೆ ₹6,863 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ₹1,255 ಕೋಟಿ, ಎಚ್‌ಡಿಎಫ್‌ಸಿಗೆ ₹1,233 ಕೋಟಿ ನಷ್ಟ ಆಗಿದೆ.

ಟಿಸಿಎಸ್, ಎಸ್‌ಬಿಐ, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಇನ್ಫೊಸಿಸ್ ಕಂಪನಿಗಳು ಮಾರುಕಟ್ಟೆ ಬಂಡವಾಳ ಮೌಲ್ಯದಲ್ಲಿ ಏರಿಕೆ ಕಂಡುಬಂದಿದೆ.

ಮೌಲ್ಯಯುತ 10 ಕಂಪನಿಗಳ ಪಟ್ಟಿಯಲ್ಲಿ ರಿಲಯನ್ಸ್ ಮೊದಲ ಸ್ಥಾನದಲ್ಲಿದೆ. ಟಿಸಿಎಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದುಕೊಂಡಿವೆ.

ನಯಾರಾ ಎನರ್ಜಿ ಲಾಭ ಅಲ್ಪ ಹೆಚ್ಚಳ

ನವದೆಹಲಿ (ಪಿಟಿಐ): ನಯಾರಾ ಎನರ್ಜಿ ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹869 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಲಾಭವು ₹850 ಕೋಟಿಯಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 2ರಷ್ಟು ಅಲ್ಪ ಹೆಚ್ಚಳ ಕಂಡಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ನಿರ್ವಹಣೆಗಾಗಿ ತೈಲ ಸಂಸ್ಕರಣೆಯನ್ನು ಒಂದು ತಿಂಗಳವರೆಗೆ ಸ್ಥಗಿತಗೊಳಿಸಿದ್ದಲ್ಲದೆ, ಆಕಸ್ಮಿಕ ಲಾಭ ತೆರಿಗೆಯ ಕಾರಣಗಳಿಂದಾಗಿ ಲಾಭದಲ್ಲಿ ಅಲ್ಪ ಹೆಚ್ಚಳ ಕಾಣುವಂತಾಯಿತು ಎಂದು ಕಂಪನಿ ಹೇಳಿದೆ.

ಕಾರ್ಯಾಚರಣಾ ವರಮಾನ ₹32,412 ಕೋಟಿಯಿಂದ ₹24,757 ಕೋಟಿಗೆ ಏರಿಕೆ ಆಗಿದೆ.

ಹಣಕಾಸು ವರ್ಷದ ಒಂಬತ್ತು ತಿಂಗಳಿನಲ್ಲಿ ₹6,226 ಕೋಟಿ ನಿವ್ವಳ ಲಾಭ ಗಳಿಸಿದ್ದು, ₹1 ಲಕ್ಷ ಕೋಟಿ ಮೊತ್ತದ ವಹಿವಾಟು ನಡೆದಿದೆ ಎಂದು ಕಂಪನಿ ತಿಳಿಸಿದೆ.

ವಿಜಯಸಂಕಲ್ಪ ರ‍್ಯಾಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಲಹೆ

‘ತ್ರಿವಳಿ ಸಮಸ್ಯೆಯಿಂದ ತ್ರಿಪುರಾ ದೂರವಿಡಿ’

ಪ್ರಜಾವಾಣಿ ವಾರ್ತೆ

ಗುವಾಹಟಿ: ತ್ರಿಪುರಾದಲ್ಲಿ ಪ್ರತಿಪಕ್ಷಗಳಾದ ಸಿಪಿಎಂ, ಕಾಂಗ್ರೆಸ್ ಮತ್ತು ಟಿಪ್ರಾ ಮೊಥಾವನ್ನು ‘ತ್ರಿವಳಿ ಸಮಸ್ಯೆ’ ಎಂದು ಕರೆದಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ‘ಮುಂದಿನ ಐದು ವರ್ಷಗಳಲ್ಲಿ ಅಭಿವೃದ್ಧಿಗೆ ಒತ್ತು ನೀಡಲು ಬಿಜೆಪಿ ನೇತೃತ್ವದ ಡಬಲ್ ಎಂಜಿನ್ ಸರ್ಕಾರಕ್ಕೆ ಮತ ನೀಡಿ’ ಎಂದು ಭಾನುವಾರ ಮತದಾರರನ್ನು ಕೋರಿದ್ದಾರೆ.

ತ್ರಿಪುರಾದ ಚಾಂದೀಪುರ ಹಾಗೂ ಚಾರಿಲಂ ಕ್ಷೇತ್ರಗಳಲ್ಲಿ ನಡೆದ ಎರಡು ಪ್ರತ್ಯೇಕ ವಿಜಯ ಸಂಕಲ್ಪ ರ‍್ಯಾಲಿಗಳಲ್ಲಿ ಮಾತನಾಡಿದ ಅವರು, ‘ತ್ರಿಪುರಾದ ಜನರು ಎಡಪಂಥೀಯರ ದುರಾಡಳಿತ ಹಾಗೂ ಕಾಂಗ್ರೆಸ್ ಅವಧಿಯಲ್ಲಿ ಭ್ರಷ್ಟಾಚಾರವನ್ನು ಕಂಡಿದ್ದಾರೆ. ಇಷ್ಟು ವರ್ಷಗಳ ಕಾಲ ಈ ಎರಡೂ ಪಕ್ಷಗಳು ತಮ್ಮ ಕಾರ್ಯಕರ್ತರನ್ನು ಕೊಂದು ಇದೀಗ ಚುನಾವಣೆಯಲ್ಲಿ ಪರಸ್ಪರ ಕೈಜೋಡಿಸಿವೆ. ಇನ್ನು ಇವರಿಬ್ಬರನ್ನು ಬೆಂಬಲಿಸುತ್ತಿರುವ ಟಿಪ್ರಾ ಮೊಥಾದಿಂದಲೂ ಬುಡಕಟ್ಟು ಸಮುದಾಯಕ್ಕೆ ಯಾವುದೇ ಅಭಿವೃದ್ಧಿ ಕಾರ್ಯ ಸಾಧ್ಯವಿಲ್ಲ’ ಎಂದು ದೂರಿದರು.



ತ್ರಿಪುರಾದ ಸಿಪಾಯಿಜಲ್ ಜಿಲ್ಲೆಯ ಚಾರಿಲಂ ಕ್ಷೇತ್ರದಲ್ಲಿ ಭಾನುವಾರ ನಡೆದ ವಿಜಯ ಸಂಕಲ್ಪ ರ‍್ಯಾಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಷಾ ಅವರಿಗೆ ಬೃಹತ್ ಹೂವಿನ ಹಾರ ಹಾಕಿ ಸನ್ಮಾನಿಸಲಾಯಿತು —ಪಿಟಿಐ ಚಿತ್ರ

‘ಈ ಮೂರು ಪಕ್ಷಗಳೂ ತ್ರಿವಳಿ ಸಮಸ್ಯೆಗಳಾಗಿವೆ. ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ, ರಾಜ್ಯದಲ್ಲಿ ಮಾಣಿಕ್ ಷಾ ನೇತೃತ್ವದ ಡಬಲ್ ಎಂಜಿನ್ ಸರ್ಕಾರಕ್ಕೆ ಮತ ಹಾಕುವಿರೋ ಅಥವಾ ತ್ರಿವಳಿ ಸಮಸ್ಯೆಗೋ, ಆಯ್ಕೆ ನಿಮಗೆ ಬಿಟ್ಟದ್ದು ಎಂದ ಅವರು, ಆದಿವಾಸಿಗಳಿಗೆ ದ್ರೋಹ ಬಗೆದ ಎಡಪಕ್ಷಗಳು ಈಗ ಬುಡಕಟ್ಟು ನಾಯಕನನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಬಿಂಬಿಸುತ್ತಿವೆ’ ಎಂದು ಆರೋಪಿಸಿದರು.

‘ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಎಡಪಕ್ಷಗಳು ಒಗ್ಗೂಡಿರುವುದು ಬಿಜೆಪಿಯ ವಿರುದ್ಧ ಸೋಲನ್ನು ಒಪ್ಪಿಕೊಂಡಿರುವ ಸೂಚನೆಯಾಗಿದೆ. ಚುನಾವಣೆಯಲ್ಲಿ ಬಿಜೆಪಿ ಗೆದ್ದರೆ 2025ರ ವೇಳೆಗೆ ಬಡವರಿಗೆ ವಸತಿಸೌಕರ್ಯ ಕಲ್ಪಿಸಿಕೊಡಲಾಗುವುದು’ ಎಂದೂ ಶಾ ಭರವಸೆ ನೀಡಿದ್ದಾರೆ.

ತ್ರಿಪುರಾದ 60 ವಿಧಾನಸಭಾ ಸ್ಥಾನಗಳಿಗಾಗಿ ಇದೇ 16ರಂದು ಮತದಾನ ನಡೆಯಲಿದೆ.

ಪ್ರಜಾ ಮತ ಜನತಂತ್ರದ ಹಬ್ಬ ವಿಧಾನಸಭಾ ಚುನಾವಣೆ - 2023

5 ಸ್ಟಾರ್ ಮೇಘಾಲಯ: ಕಾಂಗ್ರೆಸ್ ಭರವಸೆ

ನವದೆಹಲಿ: ಮೇಘಾಲಯದಲ್ಲಿ ಕಾಂಗ್ರೆಸ್ ನೀಡಿರುವ ಭರವಸೆಗಳು ‘5 ಸ್ಟಾರ್ ಮೇಘಾಲಯ’ಕ್ಕೆ ಅಡಿಪಾಯವಾಗಲಿವೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಹೇಳಿದ್ದಾರೆ.

‘ಮೇಘಾಲಯದ ಜನರೇ, ಮಹಿಳಾ ಸಬಲೀಕರಣ, ವಿದ್ಯುತ್ ಸ್ಥಗಿತ ಮುಕ್ತ ಮೇಘಾಲಯ, ಮಾದಕದ್ರವ್ಯ ಮುಕ್ತ ಮೇಘಾಲಯ, ನಿರುದ್ಯೋಗ ಮುಕ್ತ ಮೇಘಾಲಯ, ಭ್ರಷ್ಟಾಚಾರ ಮುಕ್ತ ಮೇಘಾಲಯ– ಇವು ನಿಮ್ಮ ಭವಿಷ್ಯಕ್ಕಾಗಿ ಕಾಂಗ್ರೆಸ್ ನೀಡಿರುವ 5 ಭರವಸೆಗಳು. ನಮ್ಮ ಬದ್ಧತೆಯು 5 ಸ್ಟಾರ್ ಮೇಘಾಲಯದ ಅಡಿಪಾಯವಾಗಿದೆ’ ಎಂದು ಖರ್ಗೆ ಟ್ವೀಟ್ ಮಾಡಿದ್ದಾರೆ.

ಪಕ್ಷದ ಹಿರಿಯ ನಾಯಕ ಜೈರಾಂ ರಮೇಶ್ ಶನಿವಾರ ಪ್ರಣಾಳಿಕೆ ಬಿಡುಗಡೆ ಮಾಡಿದ್ದರು. ಮೇಘಾಲಯದಲ್ಲಿನ 60 ವಿಧಾನಸಭಾ ಸ್ಥಾನಗಳಿಗೆ ಇದೇ 27ರಂದು ಮತದಾನ ನಡೆಯಲಿದೆ.

ದಿನಕ್ಕೆ 7.2 ಗಂಟೆ ವೇತನ ರಹಿತ ಕೆಲಸ

ಮನೆಗೆಲಸ: ಮಹಿಳೆಯರಿಗೇ ಅಧಿಕ

ಅಹಮದಾಬಾದ್ (ಪಿಟಿಐ): 15 ವರ್ಷದ ಬಾಲಕಿಯರಿಂದ 60 ವರ್ಷ ವಯೋಮಾನದ ಮಹಿಳೆಯರು ದಿನದಲ್ಲಿ 7.2 ಗಂಟೆ ಕಾಲ ವೇತನರಹಿತ ಮನೆಗೆಲಸದಲ್ಲಿ ತೊಡಗಿರುತ್ತಾರೆ. ಇದೇ ವೇಳೆ ಪುರುಷರು 2.8 ಗಂಟೆ ಕಾಲ ವೇತನರಹಿತ ಮನೆಗೆಲಸದಲ್ಲಿ ತೊಡಗಿರುತ್ತಾರೆ ಎಂದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್– ಅಹಮದಾಬಾದ್ (ಐಐಎಂಎ) ಪ್ರಾಧ್ಯಾಪಕರೊಬ್ಬರು ನಡೆಸಿದ ಸಂಶೋಧನೆಯಿಂದ ತಿಳಿದುಬಂದಿದೆ.

ಪ್ರಾಧ್ಯಾಪಕಿ ನಮ್ರತಾ ಚಿಂದಾರ್ಕರ್ ಈ ಸಂಶೋಧನೆಯನ್ನು ನಡೆಸಿದ್ದಾರೆ. ವೇತನ ಪಡೆಯುವ ಉದ್ಯೋಗದಲ್ಲಿರುವ ಮಹಿಳೆ ಕೂಡಾ ಉದ್ಯೋಗದಲ್ಲಿರುವ ಪುರಷನಿಗಿಂತ ಎರಡು ಪಟ್ಟು ಹೆಚ್ಚು ಸಮಯವನ್ನು ಮನೆ ಕೆಲಸಗಳಾದ ಮನೆ ಸ್ವಚ್ಛಗೊಳಿಸುವಿಕೆ, ಅಡುಗೆ ತಯಾರಿ, ಲಾಲನೆ ಪಾಲನೆಯಂಥ ಕೆಲಸದಲ್ಲಿ ತೊಡಗಿರುತ್ತಾರೆ ಎಂದು ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ (ಎನ್‌ಎಸ್‌ಎಸ್‌ಒ) ಸಮಯ ಆಧಾರಿತ ಸಮೀಕ್ಷೆಯಿಂದ (ಟಿಯುಎಸ್) ತಿಳಿದು ಬಂದಿದೆ ಎಂದು ಅವರು ತಿಳಿಸಿದ್ದಾರೆ.

ಮನೆಗೆಲಸಗಳಲ್ಲಿ ಮಹಿಳೆಯರು ಹೆಚ್ಚಿನ ಸಮಯವನ್ನು ಕಳೆಯುತ್ತಾರೆ ಎಂಬುದು ಈಗಾಗಲೇ ತಿಳಿದಿರುವ ವಿಚಾರವಾದರೂ, ‘ಸಮಯ ಆಧರಿತ ದತ್ತಾಂಶ: ಲಿಂಗಾಧಾರಿತ ನೀತಿ ವಿಶ್ಲೇಷಣೆಗೆ ಸಾಧನ’ ಎಂಬ ಸಂಶೋಧನೆಯಲ್ಲಿ ಭಾರತೀಯ ಮಹಿಳೆಯು ನಿರ್ದಿಷ್ಟವಾಗಿ ಎಷ್ಟು ಸಮಯವನ್ನು ಮನೆಗೆಲಸಗಳಿಗೆ ಮೀಸಲಿಟ್ಟಿದ್ದಾಳೆ ಎಂಬುದನ್ನು ಮೊದಲ ಬಾರಿಗೆ ಮಾಪನ ಮಾಡಲಾಗಿದೆ. ಇದಕ್ಕಾಗಿ ಬೆಳಿಗ್ಗೆ 4 ಗಂಟೆಯಿಂದ ಮರುದಿನ ಬೆಳಿಗ್ಗೆ 4 ಗಂಟೆವರೆಗಿನ 24 ಗಂಟೆಗಳಲ್ಲಿ ಮಹಿಳೆಯರು ಮತ್ತು ಪುರುಷರ ದೈನಂದಿನ ಚಟುವಟಿಕೆಗಳ ಅವಧಿಯ ದತ್ತಾಂಶವನ್ನು ಸಂಗ್ರಹಿಸಲಾಗಿತ್ತು ಎಂದು ನಮ್ರತ ತಿಳಿಸಿದ್ದಾರೆ.

ವಾರದಲ್ಲಿ 50 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡಿದರೆ ಅದನ್ನು ‘ಸಮಯದ ಅಭಾವ’ ಎಂದು ಕರೆಯಲಾಗುತ್ತದೆ. ಪುರುಷರಿಗೆ ಹೋಲಿಸಿದರೆ ಮಹಿಳೆಯರು ಶೇ24ರಷ್ಟು ಕಡಿಮೆ ಬಿಡುವಿನ ಅವಧಿಯನ್ನು ಹೊಂದಿರುತ್ತಾರೆ. ಅಡುಗೆ ಮಾಡಲು ಅಡುಗೆ ಅನಿಲ ಅಥವಾ ಇನ್ನಾವುದಾದರೂ ಆಧುನಿಕ ಸೌಲಭ್ಯ ಹೊಂದಿರುವ ಮಹಿಳೆಯರು ಈ ಸೌಲಭ್ಯಗಳನನ್ನು ಹೊಂದಿರದ ಮಹಿಳೆಯರಿಗಿಂತ 41ರಿಂದ 80 ನಿಮಿಷ ಹೆಚ್ಚು ಬಿಡುವು ಪಡೆಯುತ್ತಾರೆ ಎಂದು ಸಹ ಈ ಅಧ್ಯಯನದಲ್ಲಿ ತಿಳಿಸಲಾಗಿದೆ.

ಭೂಕಂಪ: ಭಾರತಕ್ಕೆ ಸಿದ್ಧಿಸುತ್ತಿದೆ ತಾಳಿಕೊಳ್ಳುವ ಶಕ್ತಿ: ಒ.ಪಿ. ಮಿಶ್ರಾ

ನವದೆಹಲಿ (ಪಿಟಿಐ): ಸೂಕ್ಷ್ಮ ಕಂಪನಗಳು ಟೆಕ್ಟಾನಿಕ್ (ಭೂಮಿಯ ಮೊದಲ ಪದರದ ಚಲನೆಯಿಂದ ಉಂಟಾಗುವ ಘರ್ಷಣೆ) ಒತ್ತಡ ಬಿಡುಗಡೆ ಮಾಡಲು ಸಹಾಯ ಮಾಡುತ್ತವೆ ಮತ್ತು ಭಾರತವನ್ನು ವಿನಾಶಕಾರಿ ಭೂಕಂಪಗಳಿಂದ ರಕ್ಷಿಸುತ್ತಿದೆ. ಭೂಕಂಪದ ವಿರುದ್ಧ ಪರಿಣಾಮಕಾರಿ ಪ್ರತಿಕ್ರಿಯೆ ಮತ್ತು ಕಂಪನಗಳನ್ನು ತಗ್ಗಿಸುವ ವ್ಯವಸ್ಥೆಗೆ ದೇಶವು ಒಗ್ಗಿಕೊಳ್ಳುತ್ತಿದೆ ಎಂದು ತಜ್ಞರು ತಿಳಿಸಿದ್ದಾರೆ.

ದೊಡ್ಡ ಮಟ್ಟದ ಭೂಕಂಪಗಳು ಸಂಭವಿಸಿದರೆ ಅದನ್ನು ನಿರ್ವಹಿಸಲು ದೇಶ ಸನ್ನದ್ಧವಾಗಿದೆ. ದೇಶದಲ್ಲಿ ಉತ್ತಮ ತರಬೇತಿ ಹೊಂದಿದ, ಉಪಕರಣಗಳಿಂದ ಸನ್ನದ್ಧವಾದ ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆ (ಎನ್‌ಡಿಆರ್‌ಎಫ್) ಇದೆ. ಯಾವ ಸಮಯದಲ್ಲಾದರೂ ಯಾವ ಪ್ರದೇಶಕ್ಕಾದರೂ ತ್ವರಿತವಾಗಿ ಈ ಪಡೆ ತಲುಪುತ್ತದೆ ಎಂದು ಭೂ ವಿಜ್ಞಾನ ಸಚಿವಾಲಯದ ರಾಷ್ಟ್ರೀಯ ಭೂಕಂಪ ಅಧ್ಯಯನ ಕೇಂದ್ರದ ನಿರ್ದೇಶಕ ಒ.ಪಿ. ಮಿಶ್ರಾ ಅವರು ತಿಳಿಸಿದ್ದಾರೆ.

ಭಾರತದ ಪಶ್ಚಿಮ ಭಾಗದಲ್ಲಿ ಪಾಕಿಸ್ತಾನ ಗಡಿ ಬಳಿ ಮೂರು ಟೆಕ್ಟಾನಿಕ್ ಗಡಿಗಳು ಸಂಧಿಸುವ ತ್ರಿವಳಿ ಸಂಗಮವಿದೆ. ಇಲ್ಲಿ ಸೂಕ್ಷ್ಮ ಕಂಪನಗಳು ಸಂಭವಿಸುತ್ತಲೇ ಇರುತ್ತವೆ ಇದರಿಂದಾಗಿ ಭೂಮಿಯು ತನ್ನ ಒತ್ತಡವನ್ನು ಹೊರಹಾಕುತ್ತಲೇ ಇರುತ್ತದೆ. ಈ ಪ್ರದೇಶದಲ್ಲಿ ಕೆಲವೊಮ್ಮೆ ರಿಕ್ಟರ್ ಮಾಪಕದಲ್ಲಿ 4ರಿಂದ 5ರಷ್ಟು ತೀವ್ರತೆಯ ಭೂಕಂಪಗಳೂ ಸಂಭವಿಸುತ್ತದೆ ಎಂದು ಅವರು ತಿಳಿಸಿದರು.

ಸ್ಥಿತಿಸ್ಥಾಪಕತ್ವ ಗುಣಗುಳ್ಳ ಕಟ್ಟಡಗಳನ್ನು ಕಟ್ಟುವುದರಿಂದ ಭೂಕಂಪದ ತೀವ್ರತೆಯನ್ನು ತಗ್ಗಿಸಬುಹುದು ಎಂದು ಅವರು ಹೇಳಿದರು.

ಟರ್ಕಿಯಲ್ಲಿ ಎರಡು ತ್ರಿವಳಿ ಸಂಗಮಗಳಿವೆ. ಅವುಗಳಲ್ಲಿ ಒಂದಾದ ಅನಾಟೋಲಿಯನ್ ಟೆಕ್ಟಾನಿಕ್ ಗಡಿ ಮತ್ತು ಆಫ್ರಿಕನ್ ಗಡಿಯ ನಡುವೆ ಘರ್ಷಣೆ ಉಂಟಾದ್ದರಿಂದ ಟರ್ಕಿಯಲ್ಲಿ ಭಾರಿ ಭೂಕಂಪ ಸಂಭವಿಸಿದೆ ಎಂದು ಅವರು ತಿಳಿಸಿದರು.

ಕೊಲಿಜಿಯಂ ಶಿಫಾರಸು: ಇಂದು ‘ಸುಪ್ರೀಂ’ ವಿಚಾರಣೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿ ಕೊಲಿಜಿಯಂ ಶಿಫಾರಸು ಮಾಡಿರುವ ಹೆಸರುಗಳನ್ನು ಅಂತಿಮಗೊಳಿಸುವಲ್ಲಿ ಕೇಂದ್ರ ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿ ಸಲ್ಲಿಕೆಯಾಗಿರುವ ಎರಡು ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಸೋಮವಾರ ವಿಚಾರಣೆ ನಡೆಸಲಿದೆ.

ಕೊಲಿಜಿಯಂ ಶಿಫಾರಸು ಮಾಡಿರುವ ಹೆಸರುಗಳನ್ನು ಅಂತಿಮಗೊಳಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಫೆ. 3ರಂದು ನ್ಯಾಯಮೂರ್ತಿ ಎಸ್.ಕೆ. ಕೌಲ್ ನೇತೃತ್ವದ ನ್ಯಾಯಪೀಠವು ಅಸಮಾಧಾನ ವ್ಯಕ್ತಪಡಿಸಿತ್ತು. ‘ಇದು ಅತ್ಯಂತ ಗಂಭೀರ ವಿಷಯ’ ಎಂದೂ ಹೇಳಿತ್ತು.

'ಹೆಸರುಗಳನ್ನು ಶೀಘ್ರ ಅಂತಿಮಗೊಳಿಸಲಾಗುವುದು' ಎಂದು ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರು ಅಂದು ನ್ಯಾಯಪೀಠಕ್ಕೆ ತಿಳಿಸಿದ್ದರು.

ಇದೇ 6ರಂದು ಸುಪ್ರೀಂ ಕೋರ್ಟ್‌ಗೆ ಐವರು ನ್ಯಾಯಮೂರ್ತಿಗಳನ್ನು ನೇಮಿಸಲಾಗಿತ್ತು.

ದೆಹಲಿ–ಮುಂಬೈ ಹೆದ್ದಾರಿ: ಮೊದಲ ಹಂತ ಉದ್ಘಾಟಿಸಿದ ಪ್ರಧಾನಿ ಮೋದಿ

ದೌಸಾ (ಪಿಟಿಐ): ದೆಹಲಿ-ಮುಂಬೈ ಎಕ್ಸ್‌ಪ್ರೆಸ್‌ವೇನ 246 ಕಿ.ಮೀ ಉದ್ದದ ಭಾಗವನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ದೌಸಾದಲ್ಲಿ ಉದ್ಘಾಟಿಸಿದರು.

ದೆಹಲಿ-ದೌಸಾ-ಲಾಲ್ಸೋಟ್ ಮಾರ್ಗವು ದೆಹಲಿ ಮತ್ತು ಜೈಪುರ ನಡುವಿನ ಪ್ರಯಾಣದ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ.

₹18,000 ಕೋಟಿಗೂ ಹೆಚ್ಚು ಮೊತ್ತದ ಮೊದಲ ಹಂತದ ದೆಹಲಿ-ಮುಂಬೈ ಎಕ್ಸ್‌ಪ್ರೆಸ್ ಸೇರಿದಂತೆ ಒಟ್ಟು ನಾಲ್ಕು ಯೋಜನೆಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆಯನ್ನು ಪ್ರಧಾನಿ ನೆರವೇರಿಸಿದರು.

ಹೆದ್ದಾರಿ ಯೋಜನೆಗಳು, ಬಂದರುಗಳು, ರೈಲ್ವೆ, ಆಪ್ಟಿಕಲ್ ಫೈಬರ್ ಮತ್ತು ವೈದ್ಯಕೀಯ ಕಾಲೇಜು ತೆರೆಯಲು ಸರ್ಕಾರ ಹೂಡಿಕೆ ಮಾಡಿದಾಗ ಅದು ವ್ಯಾಪಾರಿಗಳು, ಸಣ್ಣ ಅಂಗಡಿಯವರು ಮತ್ತು ಕೈಗಾರಿಕೆಗಳಿಗೆ ಬಲ ನೀಡುತ್ತದೆ ಎಂದು ಮೋದಿ ಅವರು ಹೇಳಿದರು.

‘ಮೂಲಸೌಕರ್ಯದ ಮೇಲಿನ ಹೂಡಿಕೆಯು ಹೆಚ್ಚಿನ ಹೂಡಿಕೆಯನ್ನು ಆಕರ್ಷಿಸುತ್ತದೆ’ ಎಂದರು.

ಕೇಂದ್ರ ರಸ್ತೆ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಮಾತನಾಡಿ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ಆದ್ಯತೆ ನೀಡಲು ನವದೆಹಲಿ-ಮುಂಬೈ ಎಕ್ಸ್‌ಪ್ರೆಸ್ ವೇ ಹಿಂದುಳಿದ ಪ್ರದೇಶಗಳ ಮೂಲಕ ಹಾದುಹೋಗುತ್ತದೆ ಎಂದು ಹೇಳಿದರು.

2024ರ ಅಂತ್ಯದ ವೇಳೆಗೆ ಭಾರತದ ಹೆದ್ದಾರಿಗಳನ್ನು ಅಮೆರಿಕದ ಹೆದ್ದಾರಿಗಳಿಗೆ ಸರಿಸಮನಾಗಿ ಸಿದ್ಧಪಡಿಸಲು ಪ್ರಯತ್ನಿಸಲಾಗುವುದು. ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಸುಮಾರು 500 ಬ್ಲಾಕ್‌ಗಳನ್ನು ಗುರುತಿಸಲಾಗಿದೆ. ಈ ಹೆದ್ದಾರಿಯು ಹಿಂದುಳಿದ ಪ್ರದೇಶಗಳ ಮೂಲಕ ಹಾದು ಹೋಗುತ್ತಿದ್ದು, ಈ ಪ್ರದೇಶಗಳಿಗೆ ಬೆಳವಣಿಗೆಯ ಎಂಜಿನ್ ಆಗುತ್ತಿದೆ ಎಂದರು.

ಜೈಪುರ ಮತ್ತು ದೆಹಲಿ ನಡುವೆ ವಿದ್ಯುತ್ ಕೇಬಲ್ ಹಾಕಲಾಗುವುದು. ಇ-ಟ್ರಕ್‌ಗಳ ಮತ್ತು ಇ-ಬಸ್‌ಗಳು ಈ ಹೆದ್ದಾರಿಯಲ್ಲಿ ಚಲಿಸಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.



ದೆಹಲಿ–ಮುಂಬೈ ಎಕ್ಸ್‌ಪ್ರೆಸ್‌ವೇ ನೋಟ —ಪಿಟಿಐ ಚಿತ್ರ

‘ಕಾಗದದಲ್ಲೇ ಉಳಿದ ಯೋಜನೆಗಳು’

‘ದೂರದೃಷ್ಟಿ ಇಲ್ಲದ ಕಾಂಗ್ರೆಸ್ ಸರ್ಕಾರದಿಂದಾಗಿ ರಾಜಸ್ಥಾನದ ಅಭಿವೃದ್ಧಿ ಮೂಲೆಗುಂಪಾಗಿದೆ. ಸರ್ಕಾರದ ಯೋಜನೆಗಳು ಮತ್ತು ಘೋಷಣೆಗಳು ಕೇವಲ ಕಾಗದದಲ್ಲಷ್ಟೇ ಉಳಿದಿದೆ’ ಎಂದು ನರೇಂದ್ರ ಮೋದಿ ಅವರು ಆರೋಪಿಸಿದ್ದಾರೆ.

ಪಕ್ಷದ ರ‍್ಯಾಲಿಯೊಂದರಲ್ಲಿ ಮಾತನಾಡಿದ ಅವರು, ‘ರಾಜಸ್ಥಾನದಲ್ಲಿ ಬಿಜೆಪಿಯ ಡಬಲ್ ಎಂಜಿನ್ ಸರ್ಕಾರ ಅಧಿಕಾರಕ್ಕೆ ಬಂದರೆ ರಾಜ್ಯವು ಇನ್ನಷ್ಟು ಪ್ರಗತಿ ಸಾಧಿಸಲಿದೆ’ ಎಂದೂ ಹೇಳಿದ್ದಾರೆ.

‘ರಾಜ್ಯ ಸರ್ಕಾರವು ಭಯದ ಕಾರಣದಿಂದಾಗಿ ಗಡಿ ಪ್ರದೇಶಗಳಲ್ಲಿರುವ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಿಲ್ಲ’ ಎಂದೂ ಮೋದಿ ಅವರು ಆರೋಪಿಸಿದ್ದಾರೆ. ‘ಕಾಂಗ್ರೆಸ್ ಯಾವಾಗಲೂ ನಮ್ಮ ಯೋಧರ ಸಾಮರ್ಥ್ಯವನ್ನು ಕಡಿಮೆ ಅಂದಾಜಿಸುತ್ತಿದೆ. ಶತ್ರುಗಳನ್ನು ಹೇಗೆ ತಡೆಯೋದು ಎಂಬುದು ನಮ್ಮ ರಕ್ಷಣಾ ಪಡೆಗಳಿಗೆ ತಿಳಿದಿದೆ’ ಎಂದಿದ್ದಾರೆ.

ಗರ್ಭಕಂಠ ಕ್ಯಾನ್ಸರ್ ಲಸಿಕೆ ಅಭಿಯಾನ: ಜೂನ್‌ನಲ್ಲಿ ಚಾಲನೆ

ನವದೆಹಲಿ (ಪಿಟಿಐ): ಒಂಬತ್ತರಿಂದ 14 ವರ್ಷ ವಯೋಮಾನದ ಬಾಲಕಿಯರಿಗೆ ಗರ್ಭಕಂಠ ಕ್ಯಾನ್ಸರ್ ಲಸಿಕೆ ನೀಡುವ ಅಭಿಯಾನಕ್ಕೆ ಸರ್ಕಾರ ಜೂನ್‌ನಲ್ಲಿ ಚಾಲನೆ ನೀಡುವ ಸಾಧ್ಯತೆ ಇದೆ. ಮೊದಲ ಹಂತದಲ್ಲಿ ಕರ್ನಾಟಕ ಸೇರಿ 6 ರಾಜ್ಯಗಳಲ್ಲಿ ಅಭಿಯಾನ ನಡೆಸಲಾಗುವುದು ಎಂದು ಅಧಿಕೃತ ಮೂಲಗಳು ಭಾನುವಾರ ತಿಳಿಸಿವೆ.

ಕರ್ನಾಟಕ, ತಮಿಳುನಾಡು, ಮಿಜೋರಾಂ, ಛತ್ತೀಸಗಢ, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದ ಸುಮಾರು 2.55 ಕೋಟಿ ಬಾಲಕಿಯರಿಗೆ ಹ್ಯೂಮನ್ ಪಾಪಿಲ್ಲೊಮವೈರಸ್ (ಎಚ್‌ಪಿವಿ) ವಿರೋಧಿ ಲಸಿಕೆಗಳನ್ನು ನೀಡಲಾಗುವುದು ಎನ್ನಲಾಗಿದೆ.

ಸಾರ್ವತ್ರಿಕ ರೋಗನಿರೋಧಕ ಕಾರ್ಯಕ್ರಮದಡಿ ಎಚ್‌ವಿಪಿ ಲಸಿಕೆಗಳನ್ನು ನೀಡಲು ಕೇಂದ್ರ ಆರೋಗ್ಯ ಸಚಿವಾಲಯವು ಮಾರ್ಗನಕ್ಷೆ ರೂಪಿಸಿದೆ. 2026ರ ಒಳಗೆ 16.02 ಡೋಸ್ ಲಸಿಕೆಯನ್ನು ಸಂಗ್ರಹಿಸುವ ಸಲುವಾಗಿ ಏಪ್ರಿಲ್‌ನಲ್ಲಿ ಜಾಗತಿಕ ಮಟ್ಟದಲ್ಲಿ ಟೆಂಡರ್ ಕರೆಯುವ ನಿರೀಕ್ಷೆಯೂ ಇದೆ ಎನ್ನಲಾಗಿದೆ. ಸದ್ಯ, ಅಮೆರಿಕದ ‘ಮೆರ್ಕ್ಸ್ ಗರ್ಡಸಿಲ್’ ಸಂಸ್ಥೆಯ ಲಸಿಕೆ ಖಾಸಗಿ ಮಾರುಕಟ್ಟೆಯಲ್ಲಿ ಲಭ್ಯವಿದೆ. ಒಂದು ಡೋಸ್ ಲಸಿಕೆ ಬೆಲೆ ₹10,850 ಇದೆ.

ಹೈಕೋರ್ಟ್: 4 ಮುಖ್ಯ ನ್ಯಾಯಮೂರ್ತಿಗಳ ನೇಮಕ

ನವದೆಹಲಿ (ಪಿಟಿಐ): ಈ ತಿಂಗಳಾಂತ್ಯದಲ್ಲಿ ನಿವೃತ್ತರಾಗಲಿರುವ ಇಬ್ಬರು ಸೇರಿದಂತೆ ಒಟ್ಟು ನಾಲ್ವರು ನ್ಯಾಯಮೂರ್ತಿಗಳನ್ನು ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳನ್ನಾಗಿ ಭಾನುವಾರ ನೇಮಕ ಮಾಡಲಾಗಿದೆ.

ಗುಜರಾತ್ ಹೈಕೋರ್ಟ್‌ನ ಹಿರಿಯ ನ್ಯಾಯಾಮೂರ್ತಿ ಸೋನಿಯಾ ಗಿರಿಧರ್ ಗೋಕಣಿ ಅವರನ್ನು ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಗಿದೆ. ಇವರು ಇದೇ 25ರಂದು ವಯೋ ನಿವೃತ್ತಿ ಹೊಂದಲಿದ್ದಾರೆ.

ಒಡಿಶಾ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ಜಸ್ವಂತ್ ಸಿಂಗ್ ಅವರನ್ನು ತ್ರಿಪುರಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಿಸಲಾಗಿದೆ. ಇವರೂ ಇದೇ 22ರಂದು ನಿವೃತ್ತರಾಗಲಿದ್ದಾರೆ. ರಾಜಸ್ಥಾನ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿದ್ದ ಜಸ್ಟಿಸ್ ಸಂದೀಪ್ ಮೆಹ್ತಾ ಅವರನ್ನು ಗುವಾಹಟಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಗಿದೆ ಮತ್ತು ಗುವಾಹಟಿ ಹೈಕೋರ್ಟ್ ನ್ಯಾಯಮೂರ್ತಿ ಎನ್.ಕೋಟೀಶ್ವರ್ ಸಿಂಗ್ ಅವರನ್ನು ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ.

ಭೂಕಂಪನ: ಮೃತರ ಸಂಖ್ಯೆ 33,179ಕ್ಕೆ ಏರಿಕೆ

2.6 ಕೋಟಿ ಜನ ಅತಂತ್ರ, ನೆರವಿನ ನಿರೀಕ್ಷೆ

ಕಹ್ರಾಮನ್ಮಾರಾಸ್, ಟರ್ಕಿ (ಎಎಫ್‌ಪಿ): ಟರ್ಕಿ ಮತ್ತು ಸಿರಿಯಾದಲ್ಲಿ ಸಂಭವಿಸಿದ್ದ ಭಾರಿ ಭೂಕಂಪನದಿಂದ ಮೃತಪಟ್ಟವರ ಸಂಖ್ಯೆ ಭಾನುವಾರ 33,179ಕ್ಕೆ ಏರಿದೆ. ವಿಶ್ವಸಂಸ್ಥೆ ಅಧಿಕಾರಿಗಳು ಸಾವಿನ ಸಂಖ್ಯೆಯು ದುಪ್ಪಟ್ಟಾಗಬಹುದು ಎಂದು ಶಂಕಿಸಿದ್ದಾರೆ.

ಭೂಕಂಪನ ಸಂಭವಿಸಿದ ವಾರದ ನಂತರ ಭಾನುವಾರ, ರಕ್ಷಣಾ ಸಿಬ್ಬಂದಿಯ ಅವಶೇಷಗಳಡಿ ಸಿಕ್ಕಿಬಿದ್ದಿದ್ದ 7 ತಿಂಗಳ ಮಗು ಮತ್ತು ಬಾಲಕಿಯನ್ನು ರಕ್ಷಿಸಿದ್ದಾರೆ. ರಿಕ್ಟರ್ ಮಾಪನದಲ್ಲಿ 7.8ರಷ್ಟು ತೀವ್ರತೆ ದಾಖಲಾಗಿದ್ದ ಭೂಕಂಪನ ಫೆ. 6ರಂದು ಸಂಭವಿಸಿತ್ತು.

ಶೋಧ ಕಾರ್ಯ ಮುಂದುವರಿದಿರುವಂತೆ ಅವಶೇಷಗಳಡಿಯಿಂದ ಶವಗಳು ಪತ್ತೆಯಾಗುತ್ತಿವೆ. 80 ಸಾವಿರ ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಧಿಕಾರಿಗಳ ಪ್ರಕಾರ, ಸಿರಿಯಾದಲ್ಲಿ ಮೃತರ ಸಂಖ್ಯೆ 3,553ಕ್ಕೆ, ಟರ್ಕಿಯಲ್ಲಿ 29,626ಕ್ಕೆ ಏರಿದೆ. ಅಲ್ಲದೆ, ಸುಮಾರು 12,000 ಕಟ್ಟಡಗಳು ಪೂರ್ಣವಾಗಿ ಅಥವಾ ಭಾಗಶಃ ನಾಶವಾಗಿವೆ. ಒಟ್ಟು 92,600 ಮಂದಿ ಗಾಯಗೊಂಡಿದ್ದಾರೆ.

ಸಾವಿನ ಸಂಖ್ಯೆ ದುಪ್ಪಟ್ಟಾಗಬಹುದು ಎಂದು ವಿಶ್ವಸಂಸ್ಥೆ ಅಧಿಕಾರಿಗಳು ತಿಳಿಸಿದ್ದಾರೆ. ‘8.70 ಲಕ್ಷ ಜನರಿಗೆ ಆಹಾರದ ತುರ್ತು ನೆರವಿನ ಅಗತ್ಯವಿದೆ. ಸಿರಿಯಾದಲ್ಲಿ 53 ಲಕ್ಷ ಜನ ವಸತಿ ಕಳೆದು ಕೊಂಡಿದ್ದಾರೆ. ಒಟ್ಟು 2.6 ಕೋಟಿ ಜನ ಸಂತ್ರಸ್ತರಾಗಿದ್ದಾರೆ’ ಎಂದು ತಿಳಿಸಿದ್ದಾರೆ.

ಸೌಲಭ್ಯಗಳ ಕೊರತೆ ಮತ್ತು ಬಾಧಿಸುತ್ತಿರುವ ತೀವ್ರ ಚಳಿಯ ನಡುವೆಯೇ ಸಾವಿರಾರು ಕಾರ್ಯಕರ್ತರು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದಾರೆ.

‘ಜಗತ್ತು ಉಳಿದಿದೆಯೇ?’: ಟರ್ಕಿಯ ಕಹ್ರಾಮನ್ಮಾರಾಸ್‌ನಲ್ಲಿ 70 ವರ್ಷದ ವೃದ್ಧೆಯನ್ನು ರಕ್ಷಿಸಲಾಗಿದೆ. ಬಾಹ್ಯ ಜಗತ್ತು ಕಂಡೊಡನೆಯೇ ಅವರು ‘ಜಗತ್ತು ಉಳಿದಿದೆಯೇ’ ಎಂದು ಪ್ರಶ್ನಿಸಿದ್ದು, ಜೀವ ಉಳಿದಿದೆ ಎಂದು ದೇವರಿಗೆ ನಮಿಸಿದರು.

ಸ್ಥಳೀಯ ಮಾಧ್ಯಮಗಳ ಪ್ರಕಾರ, ಏಳು ತಿಂಗಳ ಮಗು ಹಮ್ಜಾ, 13 ವರ್ಷದ ಬಾಲಕಿ ಎಸ್ಮಾ ಸುಲ್ತಾನ್‌ರನ್ನು ಭೂಕಂಪನದ 140 ಗಂಟೆ ನಂತರ ರಕ್ಷಿಸಲಾಗಿದೆ. ಇನ್ನು ಸಾವಿರಾರು ಜನರು ಕಾಣೆಯಾಗಿದ್ದು, ಪತ್ತೆಗೆ ಸಂಬಂಧಿಕರು ಪರಿತಪಿಸುತ್ತಿದ್ದಾರೆ. ಮೃತರ ಶವಗಳನ್ನು ಕಾಯ್ದಿಡುವುದು ಸಿಬ್ಬಂದಿಗೆ ಸವಾಲಾಗಿದೆ. ‘ನಾವು ಇನ್ನು ಹೆಚ್ಚು ಕಾಯುವುದಿಲ್ಲ. ನಿರ್ದಿಷ್ಟ ಸಮಯ ಕಾಯುವಿಕೆಯ ಬಳಿಕ ಶವಗಳ ಅಂತ್ಯಕ್ರಿಯೆಯನ್ನು ನಡೆಸಲಾಗುವುದು’ ಎಂದು ಅಧಿಕಾರಿ ಟುಬಾ ಯೊಲ್ಕು ತಿಳಿಸಿದರು.



ಟರ್ಕಿಯಲ್ಲಿ ಭೂಕಂಪನದಿಂದ ನಾಶಗೊಂಡ ಕಟ್ಟಡದ ಅವಶೇಷಗಳಡಿಯಿಂದ 12 ವರ್ಷದ ಬಾಲಕಿಯನ್ನು ರಕ್ಷಣಾ ಸಿಬ್ಬಂದಿ ಭಾನುವಾರ ರಕ್ಷಿಸಿದರು —ಎಎಫ್‌ಪಿ ಚಿತ್ರ

ಅಗತ್ಯ ವಸ್ತುಗಳ ಲೂಟಿ, ಬಂಧನ

ಕಹ್ರಾಮನ್ಮಾರಾಸ್ (ಎಎಫ್‌ಪಿ): ಭೂಕಂಪನ ಪೀಡಿತ ಟರ್ಕಿ, ಸಿರಿಯಾದಲ್ಲಿ ಒಂದೆಡೆ ರಕ್ಷಣಾ ಕಾರ್ಯ ನಡೆದಿದ್ದರೆ, ಇನ್ನೊಂದಡೆ ಅಗತ್ಯವಸ್ತುಗಳಿಗೆ ಜನರು ಲೂಟಿಗೆ ಇಳಿದಿದ್ದಾರೆ. ಸಂತ್ರಸ್ತರನ್ನು ವಂಚಿಸುವ ಪ್ರಕರಣಗಳು ವರದಿಯಾಗುತ್ತಿವೆ.

ಅಗತ್ಯವಸ್ತುಗಳ ಲೂಟಿ ಅಥವಾ ಸಂತ್ರಸ್ತರಿಗೆ ವಂಚಿಸಲು ಯತ್ನದ ಆರೋಪದಡಿ ಟರ್ಕಿಯಲ್ಲಿ 12 ಜನರನ್ನು ಭದ್ರತಾ ಸಿಬ್ಬಂದಿ ಬಂಧಿಸಿದ್ದಾರೆ. ಭದ್ರತಾ ಕಾರಣಗಳಿಂದ ಕೆಲ ಹೊತ್ತು ನೆರವು ಕಾರ್ಯವನ್ನು ಸ್ಥಗಿತಗೊಳಿಸಲಾಗಿತ್ತು ಎಂದು ವರದಿಯಾಗಿದೆ.

ಕಟ್ಟಡ ನಿರ್ಮಾಣದ ಗುಣಮಟ್ಟಕ್ಕೆ ಸಂಬಂಧಿಸಿದೆ ಒಟ್ಟು 131 ಜನರಿಗೆ ನೋಟಿಸ್ ನೀಡಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಉಕ್ರೇನ್‌ನ ವಿವಿಧೆಡೆ ರಷ್ಯಾ ಶೆಲ್ ದಾಳಿ

ಕೀವ್, ಉಕ್ರೇನ್ (ಎ.ಪಿ): ರಷ್ಯಾದ ಪಡೆಗಳು ಉಕ್ರೇನ್‌ನ ನಗರಗಳ ಮೇಲೆ ಶೆಲ್ ದಾಳಿಯನ್ನು ಮುಂದುವರಿಸಿವೆ. ನಿಕೊಪೋಲ್‌ನಲ್ಲಿ ಶೆಲ್ ದಾಳಿಯಿಂದಾಗಿ ಒಬ್ಬರು ಸತ್ತಿದ್ದು, ಮತ್ತೊಬ್ಬರು ಗಾಯಗೊಂಡರು ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ಲದೆ, 4 ವಸತಿ ಸಂಕೀರ್ಣಗಳು, ಶಾಲೆ ಮತ್ತು ನೀರು ಸಂಸ್ಕರಣಾ ಘಟಕ ಕೂಡಾ ಹಾನಿಗೊಂಡಿವೆ ಎಂದು ಡಿಪ್ರೊಪೆಟ್ರೊವಸ್ಕ್ ಪ್ರಾಂತ್ಯದ ಗವರ್ನರ್ ಹೇಳಿದ್ದಾರೆ. ಉಕ್ರೇನ್‌ನ ಹಾರ್ಕಿವ್ ನಗರದ ಮೇಲೆ ರಷ್ಯಾ 3 ಎಸ್–300 ಕ್ಷಿಪಣಿ ಪ್ರಯೋಗಿಸಿದ್ದು, ಒಬ್ಬರು ಗಾಯಗೊಂಡಿದ್ದಾರೆ. ಅಲ್ಲದೆ, ಹಲವು ಮೂಲಸೌಲಭ್ಯಗಳು ಹಾನಿಗೊಂಡಿವೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಇಸ್ರೇಲ್ ಸರ್ಕಾರದ ವಿರುದ್ಧ ಆಕ್ರೋಶ

ಟೆಲ್ ಅವೀವ್ (ಎ.ಪಿ): ನ್ಯಾಯಾಂಗಕ್ಕೆ ಸಂಬಂಧಿಸಿದಂತೆ ಇಸ್ರೇಲ್ ಸರ್ಕಾರ ಕೈಗೊಂಡಿರುವ ಇತ್ತೀಚಿನ ತೀರ್ಮಾನಗಳ ವಿರುದ್ಧ ಜನಾಕ್ರೋಶ ಹೆಚ್ಚಾಗಿದೆ. ಭಾನುವಾರ ಸಾವಿರಾರು ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದರು.

ಸಂಕ್ಷಿಪ್ತ ಸುದ್ದಿ

ಶಂಕಿತ ವಸ್ತು ಹೊಡೆದುರುಳಿಸಿದ ಅಮೆರಿಕ

ವಾಷಿಂಗ್ಟನ್/ಟೊರಂಟೊ (ಪಿಟಿಐ): ಕೆನಡಾದ ವಾಯುಗಡಿಯಲ್ಲಿ ಕಂಡು ಬಂದಿದ್ದ ಶಂಕಿತ ವಸ್ತುವನ್ನು ಎಫ್–22 ಯುದ್ಧ ವಿಮಾನ ಬಳಸಿ ಅಮೆರಿಕ ಹೊಡೆದುರುಳಿಸಿದೆ. ಅಲಾಸ್ಕದ ಉತ್ತರ ಕರಾವಳಿಯಲ್ಲಿ ಇಂಥದೇ ಶಂಕಿತ ವಸ್ತುವನ್ನು ಶನಿವಾರ ಹೊಡೆದುರುಳಿಸಲಾಗಿತ್ತು.

ಕೆನಡಾದ ಯುಕೊನ್ ಪ್ರಾಂತ್ಯದಲ್ಲಿ ಶಂಕಿತ ವಸ್ತುವಿನ ಅವಶೇಷಗಳು ಬಿದ್ದಿವೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೆಯು ಹೇಳಿದ್ದಾರೆ. ಇದು ಮೊದಲಿಗೆ ಅಲಾಸ್ಕದಲ್ಲಿ ಕಂಡುಬಂದಿದ್ದು, ಸೇನೆ ಅದರ ಚಲನವಲನದ ಮೇಲೆ ಕಣ್ಗಾವಲು ಇಟ್ಟಿತ್ತು ಎಂದು ಅಮೆರಿಕ ಹೇಳಿಕೆ ನೀಡಿದೆ.

ಬಾಂಗ್ಲಾ ಅಧ್ಯಕ್ಷ: ಚುಪ್ಪು ನಾಮನಿರ್ದೇಶನ

ಢಾಕಾ (ಪಿಟಿಐ): ಬಾಂಗ್ಲಾದೇಶದ ನೂತನ ಅಧ್ಯಕ್ಷರಾಗಿ, 74 ವರ್ಷದ ನಿವೃತ್ತ ನ್ಯಾಯಮೂರ್ತಿ ಮೊಹಮ್ಮದ್ ಶಹಾಬುದ್ದೀನ್ ಚುಪ್ಪು ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ.

ಸಂಸತ್ತಿನಲ್ಲಿ ಬಹುಮತ ಹೊಂದಿರುವ ಆಡಳಿತಾರೂಢ ಅವಾಮಿ ಲೀಗ್ ಪಕ್ಷವು, ಚುಪ್ಪು ಅವರನ್ನು ದೇಶದ ಉನ್ನತ ಹುದ್ದೆಗೆ ನಾಮನಿರ್ದೇಶನ ಮಾಡಿದೆ. 350 ಸದಸ್ಯ ಬಲದ ಸಂಸತ್ತಿನಲ್ಲಿ ಅವಾಮಿ ಲೀಗ್ 305 ಸದಸ್ಯರನ್ನು ಹೊಂದಿದೆ.

ಚುಪ್ಪು ಅವರ ನಾಮನಿರ್ದೇಶನ ಪತ್ರವನ್ನು ಚುನಾವಣೆ ಆಯೋಗಕ್ಕೆ ಅವಾಮಿ ಲೀಗ್ ಸಲ್ಲಿಸಿದೆ ಎಂದು ಆಯೋಗದ ವಕ್ತಾರರು ತಿಳಿಸಿದ್ದಾರೆ. ಹಾಲಿ ಅಧ್ಯಕ್ಷ ಮೊಹಮ್ಮದ್ ಅಬ್ದುಲ್ ಹಮೀದ್ ಅವರ ಅಧಿಕಾರಾವಧಿ ಏಪ್ರಿಲ್ 24ರಂದು ಅಂತ್ಯಗೊಳ್ಳಲಿದೆ.

‘ಎಐಯನ್ನು ಬೆದರಿಕೆಯನ್ನಾಗಿ ಪರಿಗಣಿಸದಿರಿ’

ನವದೆಹಲಿ: ‘ಕೃತಕ ಬುದ್ಧಿಮತ್ತೆಯನ್ನು (ಎಐ) ಬೆದರಿಕೆಯನ್ನಾಗಿ ನೋಡದೆ, ನ್ಯಾಯಾಂಗ ಕ್ಷೇತ್ರದಲ್ಲಿ ಕಾನೂನಿನ ಗುಣಮಟ್ಟವನ್ನು ಹೆಚ್ಚಿಸುವ ಅವಕಾಶವನ್ನಾಗಿ ಪರಿಗಣಿಸಬೇಕು’ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಹಿಮಾ ಕೊಹ್ಲಿ ಹೇಳಿದ್ದಾರೆ.

ಐಸಿಐಸಿಐ ಬ್ಯಾಂಕ್ ಶನಿವಾರ ಆಯೋಜಿಸಿದ್ದ ‘ಕೃತಕ ಬುದ್ಧಿಮತ್ತೆ ಹಾಗೂ ಕಾನೂನು ವಲಯ’ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದಾಗಿ ತಮ್ಮ ಪರಿಣತಿ ಮತ್ತು ಕೌಶಲವು ಕೆಲಸಕ್ಕೆ ಬರುವುದಿಲ್ಲ ಎಂದು ವಕೀಲರು ಆತಂಕ ಪಡಬಹುದು. ಆದರೆ, ಎಐ ಅನ್ನು ಬೆದರಿಕೆಯನ್ನಾಗಿ ಪರಿಗಣಿಸದೇ ಕಾನೂನಿನ ಗುಣಮಟ್ಟವನ್ನು ಹೆಚ್ಚಿಸುವ ಅವಕಾಶವನ್ನಾಗಿ ಪರಿಗಣಿಸಬೇಕು’ ಎಂದು ಸಲಹೆ ನೀಡಿದರು.

ಸಚಿವನ ನಿವಾಸದ ಮೇಲೆ ದಾಳಿ: ವ್ಯಕ್ತಿ ಸೆರೆ

ತಿರುವನಂತಪುರ (ಪಿಟಿಐ): ‘ಕೇಂದ್ರ ಸಚಿವ ವಿ. ಮುರಳೀಧರನ್ ಅವರ ಇಲ್ಲಿನ ನಿವಾಸದ ಮೇಲೆ ಕಳೆದ ವಾರ ದಾಳಿ ನಡೆಸಿದ್ದ ಆರೋಪದ ಮೇರೆಗೆ 46 ವರ್ಷದ ವ್ಯಕ್ತಿಯೊಬ್ಬನನ್ನು ಭಾನುವಾರ ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕಣ್ಣೂರಿನ ನಿವಾಸಿ ಮನೋಜ್ ಎಂಬಾತ ಬಂಧಿತ ವ್ಯಕ್ತಿ. ನಮ್ಮ ಬಳಿ ಆರೋಪಿಯ ಸಿ.ಸಿ.ಟಿ.ವಿ ದೃಶ್ಯಾವಳಿಗಳು ಇದ್ದವು. ತಂಪನೂರು ಪಟ್ಟಣದಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿದ್ದಾಗಲೇ ಆತನನ್ನು ಬಂಧಿಸಲಾಗಿದೆ’ ಎಂದರು.


ಪ್ರಜ್ಞೇಶ್, ರಾಮ್‌ಕುಮಾರ್ ಕಣಕ್ಕೆ

ಚೆನ್ನೈ ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಇಂದಿನಿಂದ

ಚೆನ್ನೈ (ಪಿಟಿಐ): ಭಾರತದ ಪ್ರಜ್ಞೇಶ್ ಗುಣೇಶ್ವರನ್ ಮತ್ತು ರಾಮ್‌ಕುಮಾರ್ ರಾಮನಾಥನ್ ಅವರು ಸೋಮವಾರ ಇಲ್ಲಿ ಆರಂಭವಾಗಲಿರುವ ಚೆನ್ನೈ ಓಪನ್ ಎಟಿಪಿ ಚಾಲೆಂಜರ್ ಟೂರ್ನಿಯಲ್ಲಿ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದು, ಉತ್ತಮ ಸಾಮರ್ಥ್ಯ ತೋರುವ ವಿಶ್ವಾಸದಲ್ಲಿದ್ದಾರೆ.

ಗುಣೇಶ್ವರನ್ ಅವರು ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಪಂದ್ಯದಲ್ಲಿ ಗ್ರೇಟ್ ಬ್ರಿಟನ್‌ನ ಜಾಯ್ ಕ್ಲಾರ್ಕ್ ಅವರನ್ನು ಎದುರಿಸಲಿದ್ದಾರೆ. ರಾಮ್‌ಕುಮಾರ್ ಅವರಿಗೆ ಮೊದಲ ಪಂದ್ಯದಲ್ಲಿ ಕಠಿಣ ಸವಾಲು ಎದುರಾಗಿದ್ದು ಬಲ್ಗೇರಿಯಾದ ದಿಮಿತರ್ ಕುಜುಮನೊವ್‌ಗೆ ಮುಖಾಮುಖಿಯಾಗಲಿದ್ದಾರೆ. ಡಬಲ್ಸ್ ವಿಭಾಗದಲ್ಲಿ ಜೀವನ್ ನೆಡುಂಚೇರಿಯನ್– ಶ್ರೀರಾಮ್ ಬಾಲಾಜಿ ಪ್ರಮುಖ ಆಟಗಾರರಾಗಿದ್ದಾರೆ.

ಸ್ವೀಡನ್‌ನ ಟೆನಿಸ್ ದಿಗ್ಗಜ ಬ್ಯೊನ್ ಬೋರ್ಗ್ ಪುತ್ರ, 19 ವರ್ಷದ ಲಿಯೊ ಬೋರ್ಗ್ ಅವರು ಟೂರ್ನಿಯ ಪ್ರಮುಖ ಆಕರ್ಷಣೆಗಳಲ್ಲಿ ಒಬ್ಬರಾಗಿದ್ದಾರೆ.



ಪ್ರಜ್ಞೇಶ್ ಗುಣೇಶ್ವರನ್

ಏಷ್ಯನ್ ಸ್ಕ್ವಾಷ್: ಪಾಕಿಸ್ತಾನಕ್ಕೆ ಮಣಿದ ಭಾರತ

ಚೆನ್ನೈ (ಪಿಟಿಐ): ಭಾರತ ಪುರುಷರ ತಂಡವು ಇಲ್ಲಿ ನಡೆದ ಏಷ್ಯನ್ ಜೂನಿಯರ್ ಟೀಮ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ಸ್‌ಅಪ್ ಸ್ಥಾನ ಗಳಿಸಿತು.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಭಾರತದ ಆಟಗಾರರು 0–2ರಿಂದ ಪಾಕಿಸ್ತಾನದ ವಿರುದ್ಧ ಸೋತರು.

ಮೊದಲ ಹಣಾಹಣಿಯಲ್ಲಿ ಪಾಕಿಸ್ತಾನದ ನೂರ್ ಜಮಾನ್ ಅವರು 12-10, 9-11, 13-11, 11-9ರಿಂದ ಕೃಷ್ಣ ಮಿಶ್ರಾ ಅವರನ್ನು ಸೋಲಿಸಿದರು. ಬಳಿಕ ನಡೆದ ಪಂದ್ಯದಲ್ಲಿ ಮುಹಮ್ಮದ್ ಹಮ್ಜಾ ಖಾನ್ 11-7, 11-5, 11-4ರಿಂದ ಪಾರ್ಥ್ ಅಂಬಾನಿ ಅವರನ್ನು ಮಣಿಸಿದರು.

ಭಾರತ ಮಹಿಳಾ ತಂಡವು ಕಂಚಿನ ಪದಕ ಪಡೆಯಿತು. ಜಪಾನ್ ಕೂಡ ಕಂಚು ಗೆದ್ದಿತು.

ಅಥ್ಲೆಟಿಕ್ಸ್: ಜ್ಯೋತಿ, ಜೆಸ್ವಿನ್‌ಗೆ ಬೆಳ್ಳಿ

ಅಸ್ತಾನ, ಕಜಕಸ್ತಾನ (ಪಿಟಿಐ): ಭಾರತದ ಜ್ಯೋತಿ ಯರಾಜಿ ಮತ್ತು ಜೆಸ್ವಿನ್ ಅಲ್‌ಡ್ರಿನ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಒಳಾಂಗಣ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ರಾಷ್ಟ್ರೀಯ ದಾಖಲೆಯೊಂದಿಗೆ ಬೆಳ್ಳಿ ಪದಕಗಳನ್ನು ಗೆದ್ದರು.

ಮಹಿಳೆಯರ 60 ಮೀಟರ್ಸ್ ಹರ್ಡಲ್ಸ್‌ನಲ್ಲಿ ಜ್ಯೋತಿ 8.13 ಸೆಕೆಂಡುಗಳಲ್ಲಿ ಗುರಿ ತಲುಪಿ ತಮ್ಮದೇ ದಾಖಲೆ (8.16ಸೆ.) ಉತ್ತಮಪಡಿಸಿಕೊಂಡರು. ಜೆಸ್ವಿನ್, ಪುರುಷರ ಲಾಂಗ್‌ಜಂಪ್‌ನಲ್ಲಿ 7.97 ಮೀ. ಸಾಧನೆಯೊಂದಿಗೆ ತಮ್ಮ ಹಿಂದಿನ ದಾಖಲೆ (7.93 ಮೀ.) ಉತ್ತಮಪಡಿಸಿದರು. ಪವಿತ್ರಾ ವೆಂಕಟೇಶ್ ಮತ್ತು ರೋಜಿ ಮೀನಾ ಶನಿವಾರ ಮಹಿಳೆಯರ ಪೋಲ್‌ವಾಲ್ಟ್‌ನಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದಿದ್ದರು.



ಮುಂಬೈ ಮಿಟಿಯೋರ್ಸ್ ಆಟಗಾರ ಅಮಿತ್ ಗುಲಿಯಾ (ಎಡ) ಹೊಡೆದ ಚೆಂಡನ್ನು ಬೆಂಗಳೂರು ಟಾರ್ಪಿಡೋಸ್‌ನ ಅಲಿರೇಜ್ ಅಬಲೂಚ್, ಮುಜೀಬ್, ಪಂಕಜ್ ಶರ್ಮ ಅವರು ಯಶಸ್ವಿಯಾಗಿ ಬ್ಲಾಕ್ ಮಾಡಿದರು. —ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ವಾಲಿಬಾಲ್: ಬೆಂಗಳೂರಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟವಾಡಿದ ಬೆಂಗಳೂರು ಟಾರ್ಪಿಡೋಸ್ ತಂಡದವರು ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಮೊದಲ ಜಯ ಸಾಧಿಸಿದರು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಬೆಂಗಳೂರು 4–1ರಲ್ಲಿ ಮುಂಬೈ ಮಿಟಿಯೋರ್ಸ್ ತಂಡವನ್ನು ಮಣಿಸಿತು.

ಮೊದಲ ಸೆಟ್‌ಅನ್ನು 15–10ರಿಂದ ಗೆದ್ದ ಬೆಂಗಳೂರು ಟಾರ್ಪಿಡೋಸ್ ಎರಡನೇ ಸೆಟ್‌ಅನ್ನು 12–15ರಿಂದ ಕಳೆದುಕೊಂಡಿತು. ನಂತರದ ಸೆಟ್‌ಗಳನ್ನು 15–13, 15–9, 15–9ರಿಂದ ಗೆದ್ದು ಪಂದ್ಯದಲ್ಲಿ ಜಯ ತನ್ನದಾಗಿಸಿಕೊಂಡಿತು.

ಫೆಬ್ರುವರಿ 16ರಂದು ಹೈದರಾಬಾದ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಟಾರ್ಪಿಡೋಸ್ ತಂಡವು ಚೆನ್ನೈ ಬ್ಲಿಟ್ಜ್‌ಗೆ ಮುಖಾಮುಖಿಯಾಗಲಿದೆ.

ರಾಷ್ಟ್ರೀಯ ಟೇಬಲ್ ಟೆನಿಸ್: ತೇಶುಭ್, ನೀತಿಗೆ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೇಶುಭ್ ದಿನೇಶ್ ಮತ್ತು ನೀತಿ ಅಗರವಾಲ್ ಅವರು ರಾಷ್ಟ್ರೀಯ ಸಬ್‌ಜೂನಿಯರ್ ಮತ್ತು ಕೆಡೆಟ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ಗೆ ಆಯ್ಕೆ ಮಾಡಲಾದ ಕರ್ನಾಟಕ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ.

ರಾಷ್ಟ್ರೀಯ ಚಾಂಪಿಯನ್‌ಷಿಪ್ ಕೇರಳದ ಅಳಪ್ಪುಳದಲ್ಲಿ ಫೆಬ್ರುವರಿ 19ರಿಂದ 27ರವರೆಗೆ ನಡೆಯಲಿದೆ. ತೇಶುಭ್ ಮತ್ತು ನೀತಿ ಕ್ರಮವಾಗಿ 15 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಕಣಕ್ಕಿಳಿಯಲಿದ್ದಾರೆ.

ಕರ್ನಾಟಕ ತಂಡ: 15 ವರ್ಷದೊಳಗಿನವರು: ಬಾಲಕರು: ತೇಶುಭ್ ದಿನೇಶ್, ಅಥರ್ವ್ ನವರಂಗೆ, ಸಿದ್ಧಾಂತ್ ವಾಸನ್, ಆಯುಷ್ ಕೆ. ಬಾಲಕಿಯರು: ನೀತಿ ಅಗರವಾಲ್, ಹಿಮಾಂಶಿ ಚೌಧರಿ, ಸಾನ್ವಿ ಮಂದೇಕರ್, ಪ್ರಣವಿ ಎಚ್.ಎ.

13 ವರ್ಷದೊಳಗಿನವರು: ಬಾಲಕರು: ಅಥರ್ವ್ ನವರಂಗೆ, ಶಶಾಂಕ್ ರಾವ್, ಆರ್ಣವ್ ಎನ್, ಗೌರವ್ ಗೌಡ. ಬಾಲಕಿಯರು: ಆಯುಷಿ ಗೋಡ್ಸೆ, ತನಿಷ್ಕಾ ಕಾಲಭೈರವ, ಹಿಯಾ ಸಿಂಗ್, ಸ್ಮೃತಿ ಸುದರ್ಶನ್.

11 ವರ್ಷದೊಳಗಿನವರು: ಬಾಲಕರು: ಅಭಿನವ್ ಪ್ರಸನ್ನ, ಶ್ರೀರಾಮ್ ಕಿರಣ್. ಬಾಲಕಿಯರು: ತನಿಷ್ಕಾ ಕಾಲಭೈರವ, ಐರಿನ್ ಅನ್ನಾ ಸುಭಾಷ್.

ಕೋಚ್‌ಗಳು: (ಬಾಲಕಿಯರ ತಂಡ): ಸಂಗಮ್ ಬೈಲೂರ್. ಬಾಲಕಿಯರ ತಂಡ: ಅಂಶುಮನ್ ರಾಯ್

ಗಾಲ್ಫ್: ಅದಿತಿಗೆ 3ನೇ ಸ್ಥಾನ

ರಬಾಟ್, ಮೊರೊಕ್ಕೊ (ಪಿಟಿಐ): ಕರ್ನಾಟಕದ ಅದಿತಿ ಅಶೋಕ್ ಅವರು ಇಲ್ಲಿ ನಡೆದ ಲಲ್ಲಾ ಮೆರಿಯಮ್ ಕಪ್ ಗಾಲ್ಫ್ ಟೂರ್ನಿಯಲ್ಲಿ ಮೂರನೇ ಸ್ಥಾನ ಗಳಿಸಿದರು.

ಕಳೆದ ವಾರ ಮ್ಯಾಜಿಕಲ್ ಕೆನ್ಯಾ ಲೇಡಿಸ್ ಓಪನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದ ಅದಿತಿ ಅವರಿಗೆ ಇಲ್ಲಿ ಅದೇ ರೀತಿಯ ಸಾಮರ್ಥ್ಯ ತೋರಲು ಸಾಧ್ಯವಾಗಲಿಲ್ಲ.

ಸ್ವೀಡನ್‌ನ ಮಾಜಾ ಸ್ಟಾರ್ಕ್ ಪ್ರಶಸ್ತಿ ಜಯಿಸಿದರು. ಅದೇ ದೇಶದ ಲಿನ್ ಗ್ರ್ಯಾಂಟ್ ರನ್ನರ್ ಅಪ್ ಆದರು.



ಅದಿತಿ ಅಶೋಕ್

ಮಹಿಳಾ ಪ್ರೀಮಿಯರ್ ಲೀಗ್: ಹರಾಜು ಪ್ರಕ್ರಿಯೆ ಇಂದು

ಸ್ಮೃತಿ, ಹರ್ಮನ್‌ಗೆ ‘ಕೋಟಿ’ ನಿರೀಕ್ಷೆ

ಮುಂಬೈ (ಪಿಟಿಐ): ಚೊಚ್ಚಲ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಗಾಗಿ ಆಟಗಾರ್ತಿಯರ ಹರಾಜು ಪ್ರಕ್ರಿಯೆ ಸೋಮವಾರ ಇಲ್ಲಿ ನಡೆಯಲಿದ್ದು, ಭಾರತದ ಬ್ಯಾಟರ್‌ಗಳಾದ ಸ್ಮೃತಿ ಮಂದಾನ, ಹರ್ಮನ್‌ಪ್ರೀತ್ ಕೌರ್ ಮತ್ತು ಶಫಾಲಿ ವರ್ಮಾ ಅವರು ಹೆಚ್ಚು ಮೌಲ್ಯ ಗಳಿಸುವ ನಿರೀಕ್ಷೆ ಇದೆ.

ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್, ಶಫಾಲಿ, ಸ್ಮೃತಿ ಮತ್ತು ಆಲ್‌ರೌಂಡರ್ ದೀಪ್ತಿ ಶರ್ಮಾ ಹರಾಜಿನಲ್ಲಿ ₹ 1.25ರಿಂದ ₹ 2 ಕೋಟಿ ಪಡೆಯುವ ಸಾಧ್ಯತೆಯಿದೆ.

ಮಹಿಳಾ ಬಿಗ್‌ಬಾಷ್ ಲೀಗ್, ದಿ ಹಂಡ್ರೆಡ್ ಟೂರ್ನಿಗಳಲ್ಲಿ ಆಡಿರುವ ಸ್ಮೃತಿ ಅವರು ಫ್ರಾಂಚೈಸ್ ಕ್ರಿಕೆಟ್‌ನಲ್ಲಿ ಪರಿಣತ ಆಟಗಾರ್ತಿಯಾಗಿದ್ದಾರೆ. ಟಿ20 ಮಾದರಿಯಲ್ಲಿ ಸ್ಥಿರ ಸಾಮರ್ಥ್ಯದ ಮೂಲಕ ಗಮನಸೆಳೆದಿದ್ದಾರೆ.

ಶಫಾಲಿ ವರ್ಮಾ ಅವರು ಇತ್ತೀಚೆಗೆ 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಜಯಿಸಿದ ಭಾರತ ತಂಡದ ನಾಯಕತ್ವ ವಹಿಸಿದ್ದರು. ಈ ಆರಂಭಿಕ ಬ್ಯಾಟರ್ ಮೇಲೆ ಎಲ್ಲ ತಂಡಗಳ ಕಣ್ಣು ನೆಟ್ಟಿದೆ.

ಬಿರುಸಿನ ಹೊಡೆತಗಳ ಆಟಗಾರ್ತಿ ರಿಚಾ ಘೋಷ್, ಜೆಮಿಮಾ ರಾಡ್ರಿಗಸ್, ಸ್ಪಿನ್ನರ್‌ಗಳಾದ ರಾಜೇಶ್ವರಿ ಗಾಯಕವಾಡ, ರಾಧಾ ಯಾದವ್, ಮಧ್ಯಮವೇಗಿಗಳಾದ ರೇಣುಕಾ ಠಾಕೂರ್, ಮೇಘನಾ ಸಿಂಗ್ ಮತ್ತು ಶಿಖಾ ಪಾಂಡೆ ಅವರತ್ತ ಕೂಡ ತಂಡಗಳು ಆಸಕ್ತಿ ವಹಿಸಬಹುದು.

ಆಸ್ಟ್ರೇಲಿಯಾದ ವಿಕೆಟ್‌ಕೀಪರ್ ಬ್ಯಾಟರ್ ಅಲಿಸಾ ಹೀಲಿ, ದಕ್ಷಿಣ ಆಫ್ರಿಕಾದ ಆಲ್‌ರೌಂಡರ್ ಮರಿಜನ್ ಕಾಪ್, ನ್ಯೂಜಿಲೆಂಡ್‌ನ ಅಮೆಲಿಯಾ ಕೆರ್ ಅವರತ್ತವೂ ತಂಡಗಳು ಪ್ರಮುಖವಾಗಿ ಗಮನಹರಿಸುವ ಸಾಧ್ಯತೆಯಿದೆ. ಸ್ಮೃತಿ ಮಂದಾನ, ಅಲಿಸಾ ಹಾಗೂ ಸೋಫಿ ಎಕ್ಸೆಲ್‌ಸ್ಟೋನ್ ಸೇರಿದಂತೆ 24 ಆಟಗಾರ್ತಿಯರಿಗೆ ತಲಾ ₹ 50 ಲಕ್ಷ ಮೂಲಬೆಲೆ ನಿಗದಿ ಮಾಡಲಾಗಿದೆ. ಅದರಲ್ಲಿ ಭಾರತದ 14 ಮತ್ತು ವಿದೇಶದ 10 ಆಟಗಾರ್ತಿಯರಿದ್ದಾರೆ.

ಪ್ರತಿ ತಂಡವು ಕನಿಷ್ಠ 15 ಮತ್ತು ಗರಿಷ್ಠ 18 ಆಟಗಾರ್ತಿಯರನ್ನು ಹೊಂದಬಹುದಾಗಿದೆ. ಮಾರ್ಚ್ 4ರಿಂದ 26ರವರೆಗೆ ಡಬ್ಲ್ಯುಪಿಎಲ್ ನಡೆಯಲಿದೆ. ಒಟ್ಟು 22 ಪಂದ್ಯಗಳು ನಡೆಯಲಿವೆ.


ಸ್ಮೃತಿ ಮಂದಾನ ಮತ್ತು ಹರ್ಮನ್‌ಪ್ರೀತ್ ಕೌರ್– ಪಿಟಿಐ ಚಿತ್ರ

ಅಂಕಿ-ಅಂಶಗಳು

ತಂಡಗಳು: ಡೆಲ್ಲಿ ಕ್ಯಾಪಿಟಲ್ಸ್, ಗುಜರಾತ್ ಜೈಂಟ್ಸ್, ಮುಂಬೈ ಇಂಡಿಯನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು, ಯುಪಿ ವಾರಿಯರ್ಸ್

ಹರಾಜು ಪ್ರಕ್ರಿಯೆ ನಡೆಯುವ ಸ್ಥಳ: ಮುಂಬೈ

409 ಬಿಡ್‌ನಲ್ಲಿರುವ ಒಟ್ಟು ಆಟಗಾರ್ತಿಯರು

₹12 ಕೋಟಿ ಪ್ರತಿ ಫ್ರಾಂಚೈಸ್‌ಗಳ ಪರ್ಸ್ ಮೌಲ್ಯ

90 ಐದು ಫ್ರಾಂಚೈಸ್‌ಗಳು ಸೇರಿ ಖರೀದಿಸಬೇಕಿರುವ ಆಟಗಾರ್ತಿಯರ ಸಂಖ್ಯೆ

ಆರಂಭ: ಮಧ್ಯಾಹ್ನ 2.30ರಿಂದ, ನೇರ ಪ್ರಸಾರ: ಸ್ಪೋರ್ಟ್ಸ್ 18 ನೆಟ್‌ವರ್ಕ್


ದೀಪ್ತಿ ಶರ್ಮಾ

ಭಾರತದ ಮಹಿಳೆಯರಿಗೆ ಪಾಕ್ ಶರಣು

ವನಿತೆಯರ ಟಿ20 ವಿಶ್ವಕಪ್: ಜೆಮಿಮಾ ರಾಡ್ರಿಗಸ್ ಅರ್ಧಶತಕ; ರಾಧಾ ಉತ್ತಮ ಬೌಲಿಂಗ್

ಕೇಪ್‌ಟೌನ್ (ಪಿಟಿಐ): ಚೆಂದದ ಅರ್ಧಶತಕ ಗಳಿಸಿದ ಜೆಮಿಮಾ ರಾಡ್ರಿಗಸ್ ಅವರ ನೆರವಿನಿಂದ ಭಾರತ ತಂಡವು ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ಎದುರು ಜಯಭೇರಿ ಬಾರಿಸಿತು.

ಭಾನುವಾರ ನ್ಯೂಲ್ಯಾಂಡ್ಸ್‌ನಲ್ಲಿ ನಡೆದ ಬಿ ಗುಂಪಿನ ಮೊದಲ ಪಂದ್ಯದಲ್ಲಿ ಭಾರತವು 7 ವಿಕೆಟ್‌ಗಳಿಂದ ಗೆಲುವು ಸಾಧಿಸಿತು.

ಟಾಸ್ ಗೆದ್ದ ಪಾಕಿಸ್ತಾನ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕಿ ಬಿಸ್ಮಾ ಮರೂಫ್ (ಔಟಾಗದೆ 68; 55ಎ, 4X7) ಹಾಗೂ ಆಯೇಷಾ ನಸೀಮ್ (ಔಟಾಗದೆ 43; 25ಎ, 4X2, 6X2) ಅವರ ಆಟದ ಬಲದಿಂದ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 149 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಭಾರತ ತಂಡವು 19 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 151 ರನ್ ಗಳಿಸಿತು.

ಮಧ್ಯಮ ಕ್ರಮಾಂಕದ ಬ್ಯಾಟರ್ ಜೆಮಿಮಾ (ಔಟಾಗದೆ 53; 38ಎಸೆತ, 8 ಬೌಂಡರಿ) ಅರ್ಧಶತಕ ಗಳಿಸಿದರು. ಇತ್ತೀಚೆಗಷ್ಟೇ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿ ಜಯಿಸಿದ ಭಾರತ ಮಹಿಳೆಯರ ತಂಡವನ್ನು ಮುನ್ನಡೆಸಿದ್ದ ಶಫಾಲಿ ವರ್ಮಾ ಅವರು ಈ ಪಂದ್ಯದಲ್ಲಿ ಯಷ್ಟಿಕಾ ಭಾಟಿಯಾ ಅವರೊಂದಿಗೆ ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 38 ರನ್ ಸೇರಿಸಿದರು. ಪಾಕ್ ತಂಡದ ಬೌಲರ್ ಸದಾ ಇಕ್ಬಾಲ್ ಅವರು ಯಷ್ಟಿಕಾ ವಿಕೆಟ್ ಗಳಿಸಿ ಜೊತೆಯಾಟ ಮುರಿದರು.

ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಜೆಮಿಮಾ ಅಬ್ಬರದ ಬ್ಯಾಟಿಂಗ್ ಮಾಡಿದರು. ಇನ್ನೊಂದೆಡೆ 25 ಎಸೆತಗಳಲ್ಲಿ 33 ರನ್ ಗಳಿಸಿದ ಶಫಾಲಿ ಅವರ ವಿಕೆಟ್ ಅನ್ನು ನಷ್ರಾ ಸಂಧು ಗಳಿಸಿ ಸಂಭ್ರಮಿಸಿದರು.


ವಿಕೆಟ್ ಗಳಿಸಿದ ರಾಧಾ ಯಾದವ್ ಅವರನ್ನು ಸಹ ಆಟಗಾರ್ತಿಯರು ಅಭಿನಂದಿಸಿದರು –ಪಿಟಿಐ ಚಿತ್ರ

ನಾಯಕಿ ಹರ್ಮನ್‌ಪ್ರೀತ್ ಕೌರ್ (16 ರನ್) ಅವರ ವಿಕೆಟ್ ಕೂಡ ನಷ್ರಾ ಅವರ ಪಾಲಾಯಿತು. ಇದಾದ ನಂತರ ಪಾಕ್ ಆಟಗಾರ್ತಿಯರಿಗೆ ಸಂಭ್ರಮಿಸುವ ಅವಕಾಶ ಸಿಗಲಿಲ್ಲ.

ಜೆಮಿಮಾ ಜೊತೆಗೂಡಿದ ರಿಚಾ ಘೋಷ್ (ಔಟಾಗದೆ 31; 20ಎ, 5ಬೌಂಡರಿ) ತಂಡವನ್ನು ಗೆಲುವಿನ ದಡ ಸೇರಿಸಿದರು.

ರಾಧಾಗೆ 2 ವಿಕೆಟ್: ಪಾಕ್ ತಂಡದ ಎರಡು ಪ್ರಮುಖ ವಿಕೆಟ್‌ಗಳನ್ನು ಗಳಿಸಿದ ರಾಧಾ ಯಾದವ್ ಮಿಂಚಿದರು. ಆರಂಭಿಕ ಬ್ಯಾಟರ್ ಮುನೀಬಾ ಅಲಿ ಹಾಗೂ ಆಮೀನ್ ಅವರ ವಿಕೆಟ್‌ಗಳನ್ನು ರಾಧಾ ಗಳಿಸಿದರು. ಇದರಿಂದಾಗಿ ತಂಡವು ಬೃಹತ್ ಮೊತ್ತ ಪೇರಿಸುವುದು ತಪ್ಪಿತು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರ್‌ಗಳಲ್ಲಿ 4ಕ್ಕೆ149 (ಬಿಸ್ಮಾ ಮರೂಫ್ ಔಟಾಗದೆ 68, ಆಯೇಷಾ ನಸೀಮ್ ಔಟಾಗದೆ 43, ರಾಧಾ ಯಾದವ್ 21ಕ್ಕೆ2) ಭಾರತ: 19 ಓವರ್‌ಗಳಲ್ಲಿ 3ಕ್ಕೆ 151 (ಶಫಾಲಿ ವರ್ಮಾ 33, ಜೆಮಿಮಾ ರಾಡ್ರಿಗಸ್ ಔಟಾಗದೆ 53, ಹರ್ಮನ್‌ಪ್ರೀತ್ ಕೌರ್ 16, ರಿಚಾ ಘೋಷ್ ಔಟಾಗದೆ 31, ನಷ್ರಾ ಸಂಧು 15ಕ್ಕೆ2) ಫಲಿತಾಂಶ:ಭಾರತ ತಂಡಕ್ಕೆ ಏಳು ವಿಕೆಟ್‌ಗಳ ಜಯ.

ಆಸ್ಟ್ರೇಲಿಯಾ ತಂಡಕ್ಕೆ ಜಯ

ಪಾರ್ಲ್, ದಕ್ಷಿಣ ಆಫ್ರಿಕಾ (ಪಿಟಿಐ): ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಆರಂಭ ಮಾಡಿದೆ. ಶನಿವಾರ ಇಲ್ಲಿ ನಡೆದ ಎ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ 97 ರನ್‌ಗಳಿಂದ ನ್ಯೂಜಿಲೆಂಡ್ ತಂಡವನ್ನು ಪರಾಭವಗೊಳಿಸಿತು.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 9ಕ್ಕೆ 173 (ಅಲಿಸಾ ಹೀಲಿ 55, ಮೆಗ್ ಲ್ಯಾನಿಂಗ್ 41, ಎಲಿಸ್ ಪೆರಿ 40, ಗ್ರೇಸ್ ಹ್ಯಾರಿಸ್ 14; ಲೀ ತಾಹುಹು 37ಕ್ಕೆ 3, ಅಮೆಲಿಯಾ ಕೆರ್ 23ಕ್ಕೆ 3). ನ್ಯೂಜಿಲೆಂಡ್: 14 ಓವರ್‌ಗಳಲ್ಲಿ 76 (ಬರ್ನಾಡಿನ್ ಬೆಜುಡೆನೊಟ್ 14, ಅಮೆಲಿಯಾ ಕೆರ್ 21; ಮೇಗನ್ ಶುಟ್ 8ಕ್ಕೆ 2, ಆ್ಯಶ್ಲಿ ಗಾರ್ಡನರ್ 12ಕ್ಕೆ 5). ಫಲಿತಾಂಶ: ಆಸ್ಟ್ರೇಲಿಯಾಕ್ಕೆ 97 ರನ್‌ಗಳ ಜಯ.

ರಣಜಿ: ಸೌರಾಷ್ಟ್ರ–ಸೆಮಿ ಸವಾಲು ಮೀರದ ಕರ್ನಾಟಕ; ಗೌತಮ್, ಕೌಶಿಕ್ ಅಮೋಘ ಬೌಲಿಂಗ್

ಮಯಂಕ್ ಬಳಗಕ್ಕೆ ಕೈಗೂಡದ ಕನಸು

• ಗಿರೀಶ ದೊಡ್ಡಮನಿ

ಬೆಂಗಳೂರು: ಕರ್ನಾಟಕ ಕ್ರಿಕೆಟ್ ತಂಡವು ಈ ಬಾರಿಯ ರಣಜಿ ಋತುವಿನಲ್ಲಿಯೂ ಫೈನಲ್ ಪ್ರವೇಶಿಸುವ ಕರ್ನಾಟಕದ ಕನಸು ಕಮರಿತು. ಮತ್ತೊಮ್ಮೆ ಸೌರಾಷ್ಟ್ರ ಮತ್ತು ನಾಕೌಟ್ ತಂಡದ ಸವಾಲು ಜಯಿಸುವಲ್ಲಿ ವಿಫಲವಾಯಿತು.

ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮುಕ್ತಾಯವಾದ ನಾಲ್ಕರ ಘಟ್ಟದ ಪಂದ್ಯದಲ್ಲಿ ಸೌರಾಷ್ಟ್ರಕ್ಕೆ 115 ರನ್‌ಗಳ ಸಾಧಾರಣ ಗುರಿ ನೀಡಿದ ಕರ್ನಾಟಕ ದಿಟ್ಟ ಹೋರಾಟ ನಡೆಸಿತು. ಆಫ್‌ಸ್ಪಿನ್ನರ್ ಕೃಷ್ಣಪ್ಪ ಗೌತಮ್ (38ಕ್ಕೆ3) ಹಾಗೂ ಮಧ್ಯಮವೇಗಿ ವಾಸುಕಿ ಕೌಶಿಕ್ (32ಕ್ಕೆ3) ಅವರ ಸವಾಲು ಮೀರಿ ನಿಂತ ಸೌರಾಷ್ಟ್ರವು 4 ವಿಕೆಟ್‌ಗಳಿಂದ ಗೆದ್ದಿತು. 34.2 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 117 ರನ್ ಗಳಿಸಿ ವಿಜಯೋತ್ಸವ ಆಚರಿಸಿತು. ನಾಯಕ ಅರ್ಪಿತ್ ವಾಸವಡ ಸೌರಾಷ್ಟ್ರವು ಫೈನಲ್ ಪ್ರವೇಶಿಸಲು ಕಾರಣರಾದರು.

ತಂಡವು ಪ್ರಶಸ್ತಿ ಸುತ್ತಿಗೆ ಲಗ್ಗೆಯಿಡುತ್ತಿರುವುದು ಇದು ಐದನೇ ಸಲ. ಬಂಗಾಳದ ಎದುರು ಪ್ರಶಸ್ತಿಗಾಗಿ ಸೆಣಸಲಿದೆ. ಸೌರಾಷ್ಟ್ರವು ಈ ಹಿಂದೆ ಮೂರು ಸಲ ರನ್ನರ್ ಅಪ್ ಹಾಗೂ ಒಮ್ಮೆ ಚಾಂಪಿಯನ್ ಆಗಿದೆ.

ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ಗಳಿಸಿದ ನಿಕಿನ್ ಜೋಸ್ (109; 161ಎ, 4X9) ಬಲದಿಂದ ಕರ್ನಾಟಕವು 58.2 ಓವರ್‌ಗಳಲ್ಲಿ 234 ರನ್ ಗಳಿಸಿತು. ಆದರೆ ಸೌರಾಷ್ಟ್ರಕ್ಕೆ 175ರಿಂದ 200ರವರೆಗೂ ಗುರಿ ನೀಡಿ, ಆಲೌಟ್ ಮಾಡುವ ಆತಿಥೇಯರ ಯೋಜನೆ ಕೈಗೂಡಲಿಲ್ಲ. ಆದರೂ ಸುಲಭವಾಗಿ ಶರಣಾಗಲಿಲ್ಲ.

ಪಿಚ್‌ನಲ್ಲಿ ಚೆಂಡನ್ನು ಬುಗುರಿಯಂತೆ ತಿರುಗಿಸಿದ ಆಫ್‌ಸ್ಪಿನ್ನರ್ ಗೌತಮ್, ಬ್ಯಾಟರ್‌ಗಳಿಗೆ ನಡುಕ ಮೂಡಿಸಿದರು. ಇನ್ನೊಂದು ಬದಿಯಿಂದ ಕೌಶಿಕ್ ಕೂಡ ಲೈನ್ ಮತ್ತು ಲೆಂಗ್ತ್ ಕಾಪಾಡಿಕೊಂಡು ಹಾಕಿದ ಸ್ಲೋವರ್, ಕಟರ್‌ಗಳಿಗೆ ವಿಕೆಟ್‌ಗಳು ಉದುರಿದವು. ಇದರಿಂದಾಗಿ ಸೌರಾಷ್ಟ್ರವು 42 ರನ್‌ಗಳಿಗೇ ಐದು ವಿಕೆಟ್ ಕಳೆದುಕೊಂಡು ಆತಂಕ ಎದುರಿಸಿತು.

ಪ್ರವಾಸಿ ತಂಡವು ‘ಬಿರುಸಿನ ಹೊಡೆತಗಾರ’ ಚೇತನ್ ಸಕಾರಿಯಾಗೆ ಕ್ರಮಾಂಕದಲ್ಲಿ ಬಡ್ತಿ ಕೊಟ್ಟು ಕ್ರೀಸ್‌ಗೆ ಕಳಿಸಿದ್ದು ಫಲ ನೀಡಿತು. ಅವರು ಗಳಿಸಿದ ಒಟ್ಟು ಮೂರು ಸಿಕ್ಸರ್‌ಗಳು ಪಂದ್ಯದ ದಿಕ್ಕನ್ನು ಬದಲಿಸಿದವು. ಇನ್ನೊಂದು ಬದಿಯಲ್ಲಿ ಬೌಂಡರಿ ಹೊಡೆದು ಖಾತೆ ತೆರೆದ ನಾಯಕ ಅರ್ಪಿತ್ ಅವರು ಸಕಾರಿಯಾ ಜೊತೆಗೆ ಆರನೇ ವಿಕೆಟ್‌ಗೆ 63 ರನ್ ಸೇರಿಸಿದರು.

ಈ ಜೊತೆಯಾಟ ಬೆಳೆಯಲು ಕರ್ನಾಟಕ ತಂಡದ ಫೀಲ್ಡರ್‌ಗಳು ಮೂರು ಕ್ಯಾಚ್‌ಗಳನ್ನು ಮಣ್ಣುಪಾಲು ಮಾಡಿದ್ದು ಕಾರಣವಾಯಿತು. ಅನುಭವಿಗಳಾದ ಪಾಂಡೆ, ಸಮರ್ಥ್ ಹಾಗೂ ನಿಕಿನ್ ಕೈಗಳಿಂದ ಕ್ಯಾಚ್ ಕೈಜಾರಿದವು. ಮೊದಲ ಇನಿಂಗ್ಸ್‌ನಲ್ಲಿ ಎರಡು ಕ್ಯಾಚ್ ಕೈಚೆಲ್ಲಿದ್ದ ಆತಿಥೇಯ ಬಳಗವು 120 ರನ್‌ಗಳ ಹಿನ್ನಡೆ ಅನುಭವಿಸಿತ್ತು.

21ನೇ ಓವರ್ ಬೌಲಿಂಗ್ ಮಾಡಿದ ವೈಶಾಖ ವಿಜಯಕುಮಾರ್ ಅವರ ಲೈನ್ ಮತ್ತು ಲೆಂಗ್ತ್ ತಪ್ಪಿದ ಮೂರು ಎಸೆತಗಳನ್ನು ಅರ್ಪಿತ್ ಬೌಂಡರಿಗೆರೆ ದಾಟಿಸಿದರು. ಒಳ್ಳೆಯ ಎಸೆತಗಳನ್ನು ರಕ್ಷಣಾತ್ಮಕವಾಗಿ ಆಡಿದ ಈ ಜೋಡಿ ಇನಿಂಗ್ಸ್‌ಗೆ ಬಲ ತುಂಬಿತು. ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ ಕೂಡ ಒಂದೇ ಓವರ್‌ನಲ್ಲಿ ಎರಡು ಬೌಂಡರಿ ಕೊಟ್ಟರು. ಇನ್ನೊಂದೆಡೆ ಗೌತಮ್, ಕೌಶಿಕ್ ಹಾಗೂ ವಿದ್ವತ್ ರನ್ ನಿಯಂತ್ರಿಸಲು ಪ್ರಯತ್ನಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ 133 ಓವರ್‌ಗಳಲ್ಲಿ 407. ಸೌರಾಷ್ಟ್ರ: 174.4 ಓವರ್‌ಗಳಲ್ಲಿ 527. ಎರಡನೇ ಇನಿಂಗ್ಸ್: ಕರ್ನಾಟಕ: 58.2 ಓವರ್‌ಗಳಲ್ಲಿ 234 (ನಿಕಿನ್ ಜೋಸ್ 109, ಕೃಷ್ಣಪ್ಪ ಗೌತಮ್ 23, ವೈಶಾಖ ವಿಜಯಕುಮಾರ್ 20, ಚೇತನ್ ಸಕಾರಿಯಾ 45ಕ್ಕೆ4, ಧರ್ಮೇಂದ್ರಸಿಂಹ ಜಡೇಜ 79ಕ್ಕೆ4, ಪಾರ್ಥ್ ಭುತ್ 57ಕ್ಕೆ2) ಸೌರಾಷ್ಟ್ರ: 34.2 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 117 (ಅರ್ಪಿತ್ ವಾಸವಡ ಅಜೇಯ 47, ಚೇತನ್ ಸಕಾರಿಯಾ 24,ಕೆ. ಗೌತಮ್ 38ಕ್ಕೆ3, ವಾಸುಕಿ ಕೌಶಿಕ್ 32ಕ್ಕೆ3) ಫಲಿತಾಂಶ: ಸೌರಾಷ್ಟ್ರ ತಂಡಕ್ಕೆ ನಾಲ್ಕು ವಿಕೆಟ್‌ಗಳ ಜಯ ಹಾಗೂ ಫೈನಲ್‌ಗೆ.


ಕರ್ನಾಟಕ ಎದುರು ಸೆಮಿಫೈನಲ್ ಜಯಿಸಿದ ಸೌರಾಷ್ಟ್ರ ತಂಡದ ಆಟಗಾರರ ಸಂಭ್ರಮ –ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ನಾಕೌಟ್ ಮತ್ತು ಸೌರಾಷ್ಟ್ರ ಅಡೆತಡೆ

ಎಂಟು ವರ್ಷಗಳ ಹಿಂದೆ ಕರ್ನಾಟಕವು ರಣಜಿ ಟ್ರೋಫಿ ಜಯಿಸಿತ್ತು. ಅದರ ನಂತರ ಒಟ್ಟು ಆರು ಸಲ ನಾಕೌಟ್ ಹಂತ ತಲುಪಿದೆ. ಆದರೆ, 2016–17 ಹಾಗೂ ಹೋದ ವರ್ಷ ಕ್ವಾರ್ಟರ್‌ಫೈನಲ್‌ನಲ್ಲಿ ಮುಗ್ಗರಿಸಿತ್ತು.

ಈ ಸಲವೂ ಸೇರಿದಂತೆ ನಾಲ್ಕು ಬಾರಿ ಸೆಮಿಫೈನಲ್‌ನಲ್ಲಿ ನಿರಾಶೆ ಅನುಭವಿಸಿದೆ. ಅದರಲ್ಲಿ ಎರಡು ಬಾರಿ ಬೆಂಗಳೂರಿನಲ್ಲಿ ಸೌರಾಷ್ಟ್ರದ ಎದುರು (2018–19 ಹಾಗೂ ಈಗ) ಸೋತಿದೆ. ಈ ಟೂರ್ನಿಯಲ್ಲಿ ಸಿ ಗುಂಪಿನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ್ದ ಕರ್ನಾಟಕ ನಾಕೌಟ್ ತಲುಪಿತ್ತು.


ಶತಕ ಗಳಿಸಿ ಸಂಭ್ರಮಿಸಿದ ನಿಕಿನ್

ನಿಕಿನ್ ಜೋಸ್ ಚೊಚ್ಚಲ ಶತಕ

ಮೈಸೂರು ಹುಡುಗ ನಿಕಿನ್ ಜೋಸ್ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ತಮ್ಮ ಮೊದಲ ಶತಕ ದಾಖಲಿಸಿದರು.

ಸೌರಾಷ್ಟ್ರದ ಎದುರು ತಮಗೆ ಲಭಿಸಿದ ಎರಡು ಜೀವದಾನಗಳನ್ನು ಸಮರ್ಥವಾಗಿ ಬಳಸಿಕೊಂಡ 22 ವರ್ಷದ ಜೋಸ್ ತಂಡಕ್ಕೆ ಆಸರೆಯಾದರು. ಸೌರಾಷ್ಟ್ರದ ಸ್ಪಿನ್ ದಾಳಿಯನ್ನು ಸಮರ್ಥವಾಗಿ ಎದುರಿಸಿದರು.

ಅವರಿಗೆ ಇದು ಮೊದಲ ರಣಜಿ ಟೂರ್ನಿಯೂ ಹೌದು. ಒಟ್ಟು ಒಂಬತ್ತು ಪಂದ್ಯಗಳಿಂದ ಅವರು 547 ರನ್ ಗಳಿಸಿದರು. ಅದರಲ್ಲಿ ನಾಲ್ಕು ಅರ್ಧಶತಕಗಳೂ ಇವೆ.

ಜಿಆರ್‌ವಿ ಜನ್ಮದಿನಕ್ಕೆ ಕಿಮ್ಮನೆ ಗಾಲ್ಫ್ ಗೌರವ ಸದಸ್ಯತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ದಂತಕಥೆ ಜಿ.ಆರ್. ವಿಶ್ವನಾಥ್ ಅವರಿಗೆ ಭಾನುವಾರ 74ನೇ ಜನ್ಮದಿನದ ಸಂಭ್ರಮ. ಈ ಸಂದರ್ಭದಲ್ಲಿ ಅವರಿಗೆ ಶಿವಮೊಗ್ಗದ ಕಿಮ್ಮನೆ ಗಾಲ್ಫ್ ಟೆರೇನ್ ಪ್ರೈವೇಟ್ ಲಿಮಿಟೆಡ್ ಗೌರವ ಸದಸ್ಯತ್ವ ನೀಡಿ ಗೌರವಿಸಿದೆ.

‘ಜಿ.ಆರ್. ವಿಶ್ವನಾಥ್ ಅವರು ಶಿವಮೊಗ್ಗ ಜಿಲ್ಲೆಯವರು. ಎಲ್ಲಕ್ಕಿಂತ ಮಿಗಿಲಾಗಿ ತುಂಬಾ ಸಭ್ಯ ವ್ಯಕ್ತಿತ್ವದವರು. ನಾವು ಮೊದಲಿನಿಂದಲೂ ಅವರ ಅಭಿಮಾನಿಗಳಾಗಿದ್ದೇವೆ. ನಮ್ಮ ಕ್ಲಬ್‌ನಿಂದ ಅವರಿಗೆ ಈ ಗೌರವ ಸದಸ್ಯತ್ವ ನೀಡುವುದು ಹೆಮ್ಮೆಯ ವಿಷಯವಾಗಿದೆ’ ಎಂದು ಕಿಮ್ಮನೆ ಗಾಲ್ಫ್ ಟೆರೇನ್ ಸಂಸ್ಥೆಯ ಚೇರ್ಮನ್ ಜೈರಾಮ್ ಜಿ. ಕಿಮ್ಮನೆ ತಿಳಿಸಿದ್ದಾರೆ.

‘ಈ ಹಿಂದೆ ನಮ್ಮ ಕ್ಲಬ್‌ನಿಂದ ಹಲವು ಗಣ್ಯರಿಗೆ ಗೌರವ ಸದಸ್ಯತ್ವ ನೀಡಲಾಗಿದೆ. ಅದರಲ್ಲಿ ಮಾಜಿ ಪ್ರಧಾನಿ ಎಚ್‌.ಡಿ. ದೇವೆಗೌಡ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಂಸದ ಬಿ.ವೈ. ರಾಘವೇಂದ್ರ, ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಶ್ರೀಲಂಕಾದ ಯುವ ಹಾಗೂ ಕ್ರೀಡಾ ಸಚಿವ ನಮಲ್ ರಾಜಪಕ್ಸೆ ಮತ್ತು ಉದ್ಯಮಿ ಗೌತಮ್ ಅದಾನಿ ಅವರು ಪ್ರಮುಖರು’ ಎಂದೂ ತಿಳಿಸಿದ್ದಾರೆ.


ಜಿ.ಆರ್. ವಿಶ್ವನಾಥ್

ರಣಜಿ ಕ್ರಿಕೆಟ್: ಫೈನಲ್‌ಗೆ ಬಂಗಾಳ ತಂಡ

ಇಂದೋರ್: ಬಂಗಾಳ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಹೋಳ್ಕರ್ ಮೈದಾನದಲ್ಲಿ ಭಾನುವಾರ ಮುಗಿದ ಸೆಮಿಫೈನಲ್ ಹಣಾಹಣಿಯಲ್ಲಿ ಬಂಗಾಳ ತಂಡವು 306 ರನ್‌ಗಳಿಂದ ಹೋದ ಬಾರಿಯ ಚಾಂಪಿಯನ್ ಮಧ್ಯಪ್ರದೇಶದ ವಿರುದ್ಧ ಗೆದ್ದಿತು.

ಪಂದ್ಯದಲ್ಲಿ ಒಟ್ಟು ಆರು ವಿಕೆಟ್ ಪಡೆದ ಬಂಗಾಳ ತಂಡದ ಆಕಾಶದೀಪ್ ಪಂದ್ಯಶ್ರೇಷ್ಠ ಗೌರವ ಪಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಂಗಾಳ 438. ಮಧ್ಯಪ್ರದೇಶ 170. ಎರಡನೇ ಇನಿಂಗ್ಸ್:ಬಂಗಾಳ:279 (ಪ್ರದೀಪ್ತಾ ಪ್ರಾಮಾಣಿಕ್ ಔಟಾಗದೆ 60, ಸಾರಾಂಶ್ ಜೈನ್ 103ಕ್ಕೆ6) ಮಧ್ಯಪ್ರದೇಶ: 39.5 ಓವರ್‌ಗಳಲ್ಲಿ 241 (ಅನುಭವ್ ಅಗರವಾಲ್ ಔಟಾಗದೆ 30, ಪ್ರದೀಪ್ತಾ ಪ್ರಾಮಾಣಿಕ್ 51ಕ್ಕೆ5, ಮುಕೇಶ್ ಕುಮಾರ್ 35ಕ್ಕೆ2) ಫಲಿತಾಂಶ: ಬಂಗಾಳ ತಂಡಕ್ಕೆ 306 ರನ್‌ಗಳ ಜಯ ಮತ್ತು ಫೈನಲ್‌ಗೆ ಪ್ರವೇಶ